ಸೋಮವಾರ, ಆಗಸ್ಟ್ 15, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ತಿರಂಗಾ
ಅಮೃತಸರದ ಅಟ್ಟಾರಿ–ವಾಘಾ ಗಡಿ ಸಮೀಪ ಭಾನುವಾರ ರಾಷ್ಟ್ರಧ್ವಜದ ಬಣ್ಣವನ್ನು ಮುಖಕ್ಕೆ ಹಚ್ಚಿಸಿಕೊಂಡ ಬಾಲಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ನವ ಭಾರತಕ್ಕಾಗಿ
ನವ ಕರ್ನಾಟಕ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ

ನವ ಭಾರತದ ಆಶೋತ್ತರಗಳನ್ನು ನನಸು ಮಾಡಲು ಪಣ

ಭಾರತದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ–ಬಲಿದಾನ ಸ್ಮರಿಸಿ, ಗೌರವ ಸಲ್ಲಿಸುವುದರ ಜೊತೆಗೆ ಅವರ ಕನಸಿನ ಭಾರತವನ್ನು ನನಸು ಮಾಡಲು ಪಣ ತೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಕಳೆದ 8 ವರ್ಷಗಳಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಭಾರತ ಗುರುತರವಾದ ಸಾಧನೆ ಮಾಡಿದೆ. ಕರ್ನಾಟಕದಲ್ಲಿ ಸರ್ವರ ವಿಕಾಸಕ್ಕಾಗಿ ಸಮೃದ್ಧ ಕರ್ನಾಟಕ ನಿರ್ಮಾಣ ಮಾಡಲು ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರ ಪಣ ತೊಟ್ಟಿದ್ದು, ಹಲವಾರು ಜನಪರ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ.

ಮನೆ ಮನೆಯ ಮೇಲೆ ತ್ರಿವರ್ಣಧ್ವಜ
13 ರಿಂದ 15 ಆಗಸ್ಟ್ 2022

ಅಮೃತ ಯೋಜನೆಗಳು

ಅಮೃತ ಮಹೋತ್ಸವ

- ಭಾರತದ 75ನೇ ಸ್ವಾತಂತ್ರ್ಯೋತ್ಸವದ ಸ್ಮರಣಾರ್ಥವಾಗಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾದ ಅಮೃತ ಯೋಜನೆಗಳನ್ನು ಜಾರಿಗೊಳಿಸಲಾಗಿದೆ.

ರೈತರ ಹಿತರಕ್ಷಣೆ



- ರೈತರ ಬಲವರ್ಧನೆಗಾಗಿ ಸೆಕೆಂಡರಿ ಕೃಷಿ ನಿರ್ದೇಶನಾಲಯ ಸ್ಥಾಪನೆ
- ರೈತ ಶಕ್ತಿ ಯೋಜನೆ: ಕೃಷಿಯಲ್ಲಿ ಯಾಂತ್ರೀಕರಣವನ್ನು ಪ್ರೋತ್ಸಾಹಿಸಲು ಡೀಸೆಲ್ ಸಹಾಯಧನ. **ರೂ. 400 ಕೋಟಿ** ಅನುದಾನ. ಪ್ರತಿ ಎಕರೆಗೆ **ರೂ.250** ರಂತೆ ಗರಿಷ್ಠ 5 ಎಕರೆಗೆ ಸಹಾಯಧನ
- **ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ರಾಜ್ಯ ಸರ್ಕಾರ)**: 2021–22ನೇ ಸಾಲಿನಲ್ಲಿ **50.35 ಲಕ್ಷ** ರೈತರಿಗೆ **ರೂ.1,975.12 ಕೋಟಿ** ವಿತರಣೆ. 2022–23ನೇ ಸಾಲಿನಲ್ಲಿ **47.83 ಲಕ್ಷ** ರೈತರಿಗೆ **ರೂ.956.71 ಕೋಟಿ** ಡಿಬಿಟಿ ಮೂಲಕ ವರ್ಗಾವಣೆ
- ಕೃಷಿ ಯಾಂತ್ರೀಕರಣ, ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳಿಗೆ **ರೂ.483.56 ಕೋಟಿ**ಗಳ ಸಹಾಯಧನ ವಿತರಣೆ. **4.54 ಲಕ್ಷ** ರೈತರಿಗೆ ಪ್ರಯೋಜನ.
- **ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ: 3.12 ಲಕ್ಷ** ರೈತರ ಜಮೀನುಗಳಲ್ಲಿ ಸೂಕ್ಷ್ಮ ನೀರಾವರಿ ಘಟಕಗಳ ಸ್ಥಾಪನೆ
- **ಕೃಷಿ ಸಂಜೀವಿನಿ ಯೋಜನೆ:** ರೈತರ ತಾಕುಗಳಲ್ಲಿ ಕೀಟ, ರೋಗ ಮತ್ತು ಕಳೆಗಳ ಬಾಧೆ ಹಾಗೂ ಮಣ್ಣಿನ ಪೋಷಕಾಂಶ ಕೊರತೆ ಹಾಗೂ ಸಮರ್ಪಕ ನಿರ್ವಹಣೆಗಾಗಿ **160** ಸಂಚಾರಿ ಸಸ್ಯ **ಆರೋಗ್ಯ ಚಿಕಿತ್ಸಾಲಯಗಳ ಲೋಕಾರ್ಪಣೆ**
- ಕೃಷಿ ಮೂಲಸೌಕರ್ಯ ನಿಧಿ ಯೋಜನೆಗೆ ಪ್ರಶಸ್ತಿ

ವಿದ್ಯಾನಿಧಿ ಯೋಜನೆ



- ರೈತರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ **ರೈತ ವಿದ್ಯಾನಿಧಿ ಯೋಜನೆ: ರೂ.439.95 ಕೋಟಿ** ವಿದ್ಯಾರ್ಥಿವೇತನ ಹಂಚಿಕೆ ಮಾಡಲಾಗಿದೆ. ಫಲಾನುಭವಿಗಳು – **10.03 ಲಕ್ಷ**. ಈ ಯೋಜನೆಯನ್ನು ಮೀನುಗಾರರು, ಹಳದಿ ಬೋರ್ಡ್ ಟ್ಯಾಕ್ಸಿ ಚಾಲಕರು ಹಾಗೂ ನೇಕಾರರ ಮಕ್ಕಳಿಗೂ ವಿಸ್ತರಿಸಲಾಗಿದೆ,

ಮೀನುಗಾರಿಕೆ–ಹೈನುಗಾರಿಕೆ ರೇಷ್ಮೆಗೆ ಪ್ರೋತ್ಸಾಹ



- ಮೀನುಗಾರರ ಆದಾಯ ಹೆಚ್ಚಿಸಲು **100 ಆಳ ಸಮುದ್ರ ಮೀನುಗಾರಿಕಾ ದೋಣಿಗಳಿಗೆ** ನೆರವು ನೀಡುವ **"ಮತ್ಸ್ಯ ಸಿರಿ"** ಯೋಜನೆ
- ಹಾಲು ಉತ್ಪಾದಕರ ಅನುಕೂಲಕ್ಕೆ **ಕ್ಷೀರಸಮೃದ್ಧಿ ಸಹಕಾರ ಬ್ಯಾಂಕ್ ಯೋಜನೆ**
- ಪ್ರತಿ ಟನ್ ದ್ವಿತಳಿ ರೇಷ್ಮೆ ಗೂಡಿಗೆ **ರೂ.10 ಸಾವಿರ**, ದ್ವಿತಳಿ ಬಿತ್ತನೆ ಗೂಡಿಗೆ **ಕೆ.ಜಿ.ಗೆ ರೂ. 50 ಪ್ರೋತ್ಸಾಹಧನ** ಹೆಚ್ಚಳ

ಪರಿಶಿಷ್ಟ ಜಾತಿ–ಪಂಗಡಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರ ಕಲ್ಯಾಣ



- SCSP/TSP ಯೋಜನೆಗಳಿಗೆ ರೂ. 28,234 ಕೋಟಿ ಮೀಸಲು
- ಸಮಾಜ ಕಲ್ಯಾಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿರುವ ಅಭಿವೃದ್ಧಿ ನಿಗಮಗಳ ಯೋಜನೆಗಳಿಗೆ ಮೂಲ ಅನುದಾನ ರೂ.580.19 ಕೋಟಿ. ಹೆಚ್ಚುವರಿ ಅನುದಾನ. ರೂ.410 ಕೋಟಿ. ಒಟ್ಟು ರೂ.990.19 ಕೋಟಿ
- ಬಡ ಪ.ಜಾತಿ/ಪಂಗಡಗಳಿಗೆ ನೀಡುತ್ತಿರುವ ಉಚಿತ ವಿದ್ಯುತ್ 45 ರಿಂದ 75 ಯೂನಿಟ್‌ಗಳಿಗೆ ಏರಿಕೆ. 39.25 ಲಕ್ಷ ಕುಟುಂಬಗಳಿಗೆ ಪ್ರಯೋಜನ
- ಲೋಕೋಪಯೋಗಿ ಇಲಾಖೆ SCSP/TSP ಯೋಜನೆಯಡಿ ಒದಗಿಸಿದ ಅನುದಾನದಿಂದ ರೂ. 750 ಕೋಟಿ ವೆಚ್ಚದಲ್ಲಿ 100 ಡಾ.ಬಿ.ಆರ್. ಅಂಬೇಡ್ಕರ್ ವಿದ್ಯಾರ್ಥಿನಿಲಯ ಹಾಗೂ 10 KREIS (ವಸತಿ ಶಾಲೆಗಳ) ಕಟ್ಟಡಗಳ ನಿರ್ಮಾಣ.

ಹಿಂದುಳಿದ ವರ್ಗಗಳ ಕಲ್ಯಾಣ


- ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಗೆ 2022–23ನೇ ಸಾಲಿಗೆ ರೂ.2,249.66 ಕೋಟಿ ಹಂಚಿಕೆ
- ಎಲ್ಲಾ ನಿಗಮಗಳಿಗೆ 2022–23ನೇ ಸಾಲಿಗೆ ರೂ.478.09 ಕೋಟಿ ಹಂಚಿಕೆ
- 165 ಕೋಟಿ ರೂ. ವೆಚ್ಚದಲ್ಲಿ ಬಾಡಿಗೆ ಕಟ್ಟಡಗಳಲ್ಲಿರುವ ಹಿಂದುಳಿದ ವರ್ಗಗಳ 50 "ಕನಕದಾಸ" ವಿದ್ಯಾರ್ಥಿನಿಲಯಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಾಣ.

ಸ್ತ್ರೀ ಸಾಮರ್ಥ್ಯ ಯೋಜನೆ



- 33,333 ಸ್ವಸಹಾಯ ಗುಂಪುಗಳಿಗೆ ಉದ್ಯಮಶೀಲತೆಯನ್ನು ಮತ್ತಷ್ಟು ವೃದ್ಧಿಪಡಿಸಲು ತಲಾ ರೂ.1.5 ಲಕ್ಷದಂತೆ ಒಟ್ಟು ರೂ.500 ಕೋಟಿ ಸಮುದಾಯ ಬಂಡವಾಳ ನಿಧಿ ಬಿಡುಗಡೆ. ಸುಮಾರು 3.9 ಲಕ್ಷ ಮಹಿಳೆಯರಿಗೆ ಅನುಕೂಲ.
- ಅಮೃತ ಸ್ವಸಹಾಯ ಕಿರುಉದ್ದಿಮೆ ಯೋಜನೆಯಡಿ 7,500 ಮಹಿಳಾ ಸ್ವಸಹಾಯ ಗುಂಪುಗಳನ್ನು ಕಿರು ಉದ್ದಿಮೆ ಸಂಸ್ಥೆಗಳನ್ನಾಗಿ ರೂಪಿಸಲು ರೂ.75 ಕೋಟಿ ಬೀಜಧನ ಬಿಡುಗಡೆ.

ಆರೋಗ್ಯ–ಕುಟುಂಬ ಕಲ್ಯಾಣ



- ಕೋವಿಡ್ ನಿಯಂತ್ರಣಕ್ಕಾಗಿ ವಿಶೇಷ ಕ್ರಮ. 11.56 ಕೋಟಿ ಕೋವಿಡ್ ಲಸಿಕೆಗಳ ಪೂರೈಕೆ
- ಪ್ರಮುಖ ನಗರಗಳಲ್ಲಿ 438 'ನಮ್ಮ ಕ್ಲಿನಿಕ್'ಗಳ ಆರಂಭ
- ಸಮುದಾಯ ಆರೋಗ್ಯ ಕೇಂದ್ರಗಳಾಗಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳ (71 ಉತ್ತರ ಕರ್ನಾಟಕ ಭಾಗದಲ್ಲಿ) ಉನ್ನತೀಕರಣ.

ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ



- ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ: ಪ್ರತಿ ಗ್ರಾಮ ಪಂಚಾಯತಿಗೊಂದರಂತೆ ಒಟ್ಟು 27,395 'ಸ್ವಾಮಿ ವಿವೇಕಾನಂದ ಸ್ವಸಹಾಯ ಗುಂಪು'ಗಳನ್ನು ರಚಿಸಿ ಸ್ವಯಂ ಉದ್ಯೋಗ ಹಾಗೂ ಆರ್ಥಿಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಯುವಕರನ್ನು ಪ್ರೋತ್ಸಾಹಿಸುವುದು.
- 65 ಲಕ್ಷ ಗ್ರಾಮೀಣ ಯುವಕರಿಗೆ ಕೌಶಲ್ಯ ತರಬೇತಿ ಗುರಿ.

ಹೂಡಿಕೆಯಲ್ಲಿ ಕರ್ನಾಟಕ ನಂ. 1



- ವಿದೇಶಿ ನೇರ ಹೂಡಿಕೆಯಲ್ಲಿ 1ನೇ ಸ್ಥಾನ. ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ವೇದಿಕೆ ಮೂಲಕ ಹಾಗೂ ನಂತರದಲ್ಲಿ ಒಟ್ಟು **ರೂ.1.31 ಲಕ್ಷ ಕೋಟಿ** ಹೂಡಿಕೆಗಳ ಒಪ್ಪಂದಕ್ಕೆ ಸಹಿ
- ನೀತಿ ಆಯೋಗದ ಇಂಡಿಯಾ ಇನ್ನೊವೇಷನ್ ಸೂಚ್ಯಂಕ 2022ರಲ್ಲಿ **ರಾಜ್ಯಕ್ಕೆ 1ನೇ ಸ್ಥಾನ**
- ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ಕಲ್ಪಿಸಲು ವಿಶೇಷ ಉದ್ಯೋಗ ನೀತಿ.

ಅಮೃತ ಮಹೋತ್ಸವ



- ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಅಮೃತ ಭಾರತಿಗೆ ಕನ್ನಡದಾರತಿ ಕಾರ್ಯಕ್ರಮ. ಸ್ವಾತಂತ್ರ್ಯ ಹೋರಾಟಗಾರರ ಕುರಿತ **75 ಪುಸ್ತಕಗಳ** ಬಿಡುಗಡೆ.
- **ಸ್ವಾತಂತ್ರ್ಯ ಹೋರಾಟಗಾರರ 75 ಸ್ಥಳಗಳನ್ನು** ಗುರುತಿಸಿ ಸ್ಮಾರಕ ಸ್ಥಾಪನೆ. ಈ ಕುರಿತು ಪ್ರಧಾನಿ ಮೋದಿಯವರ ಮನ್–ಕಿ–ಬಾತ್ ಕಾರ್ಯಕ್ರಮದಲ್ಲಿ ಶ್ಲಾಘನೆ
- ಪ್ರಧಾನಿಯವರ **'ಹರ್ ಘರ್ ತಿರಂಗ'** ಅಭಿಯಾನ ಯಶಸ್ವಿಗೊಳಿಸಲು ಮಾಡಿದ ಮನವಿಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ಲಭಿಸಿದೆ. ಎಲ್ಲರಿಗೂ ಹೃತ್ಪೂರ್ವಕ ಅಭಿನಂದನೆಗಳು

ಶಿಕ್ಷಣಕ್ಕೆ ಮಹತ್ವ



- ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತರುವಲ್ಲಿ ರಾಜ್ಯಕ್ಕೆ ಮೊದಲ ಸ್ಥಾನ
- **ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಕೆಐಟಿ)**ಗಳಾಗಿ ರಾಜ್ಯದ **7 ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳ ಉನ್ನತೀಕರಣ**
- ರಾಜ್ಯದಲ್ಲಿ **ರೂ. 1,412 ಕೋಟಿ** ವೆಚ್ಚದಲ್ಲಿ **8,101 ಶಾಲಾ ಕೊಠಡಿ** ನಿರ್ಮಾಣದ ಐತಿಹಾಸಿಕ ಕ್ರಮ

ನೇಕಾರರು ಹಾಗೂ ಕಟ್ಟಡ ಕಾರ್ಮಿಕರಿಗೆ ನೆರವು



- ನೇಕಾರ ಸಮ್ಮಾನ್ ನೆರವಿನ ಮೊತ್ತ ರೂ.2,000 ದಿಂದ **ರೂ.5,000ಕ್ಕೆ** ಹೆಚ್ಚಳ.
- ಕಟ್ಟಡ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿ ವೇತನ ಯೋಜನೆ ಜಾರಿ. 2.97 ಲಕ್ಷ ವಿದ್ಯಾರ್ಥಿಗಳಿಗೆ ರೂ.462.12 ಕೋಟಿ

ಕೃಷಿ ಉತ್ಪಾದನೆ ಪ್ರಮಾಣದಲ್ಲಿ ಹೆಚ್ಚಳ



- **2020–21**ನೇ ಸಾಲಿನಲ್ಲಿ ದಾಖಲೆ ಪ್ರಮಾಣದ **160.28 ಲಕ್ಷ** ಟನ್ ಆಹಾರ ಧಾನ್ಯ ಉತ್ಪಾದನೆ.

ಸಾಮಾಜಿಕ ಭದ್ರತೆ



- ಸಂಧ್ಯಾ ಸುರಕ್ಷಾ, ಮನಸ್ವಿನಿ ಮತ್ತು ಮೈತ್ರಿ ಯೋಜನೆ, ವಿಧವೆಯರು ಹಾಗೂ ವಿಶೇಷಚೇತನರ ಮಾಸಿಕ ಪಿಂಚಣಿ ಮೊತ್ತ ರೂ.200 ರಷ್ಟು ಹೆಚ್ಚಳ.
- ಆ್ಯಸಿಡ್ ದಾಳಿ ಸಂತ್ರಸ್ತರ ಮಾಸಾಶನ ರೂ.3,000 ದಿಂದ ರೂ.10,000ಕ್ಕೆ ಹೆಚ್ಚಳ.
- ಮನೋವೈಕಲ್ಯ: ಶೇ 75ಕ್ಕಿಂತ ಹೆಚ್ಚಿನ ಮನೋವೈಕಲ್ಯ ಹೊಂದಿರುವವರ ಪಿಂಚಣಿ ರೂ.1,400 ರಿಂದ ರೂ.2,000ಕ್ಕೆ ಹೆಚ್ಚಳ.
- ಒಟ್ಟಾರೆ 74.22 ಲಕ್ಷ ಜನರಿಗೆ ಅನುಕೂಲ
- ಆಶಾ, ಅಂಗನವಾಡಿ ಕಾರ್ಯಕರ್ತೆಯರು /ಸಹಾಯಕರು, ಬಿಸಿಯೂಟ ತಯಾರಕರು/ ಸಹಾಯಕರು, ಗ್ರಾಮ ಸಹಾಯಕರ ಗೌರವಧನ ರೂ.1,000 ರಷ್ಟು ಹೆಚ್ಚಳ.

ನಗರಾಭಿವೃದ್ಧಿಗೆ ಆದ್ಯತೆ



- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: ಬೆಂಗಳೂರು ನಗರದ ಮೂಲಭೂತ ಸೌಕರ್ಯದ ಅಭಿವೃದ್ಧಿಗೆ **ರೂ.6,000 ಕೋಟಿ**
- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ: (ಸ್ಥಳೀಯ ಸಂಸ್ಥೆಗಳ ವ್ಯಾಪ್ತಿ) **ರೂ.3,885 ಕೋಟಿ**

ಅಸಮಾನತೆ ನಿವಾರಣೆ

- ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಅನುದಾನ ದ್ವಿಗುಣ. ರೂ.3,000 ಕೋಟಿ

75 ಅಮೃತ ಮಹೋತ್ಸವ

ಸಮಸ್ತ ಜನತೆಗೆ 76ನೇ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ವಾತಂತ್ರ್ಯೋತ್ಸವದ ಶುಭಾಶಯಗಳು



ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿದ ಮೈಲಿಗಲ್ಲುಗಳನ್ನು ವಿಶೇಷ ಪುಟ 8 ರಲ್ಲಿ ದಾಖಲಿಸಲಾಗಿದೆ.

76ನೇ ಸ್ವಾತಂತ್ರ್ಯ ಉತ್ಸವ: ಮಹತ್ವದ ಯೋಜನೆಗಳ ಘೋಷಣೆ ಸಾಧ್ಯತೆ

‘ಅಮೃತ’ ಸಂಭ್ರಮದಲ್ಲಿ ಭಾರತ

ನವದೆಹಲಿ (ಪಿಟಿಐ): ದೇಶವು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮದಲ್ಲಿ ತೇಲಾಡುತ್ತಿದೆ. ‘ಪ್ರತಿ ಮನೆಗೂ ತ್ರಿವರ್ಣ ಧ್ವಜ’ ಅಭಿಯಾನದಿಂದಾಗಿ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ದೇಶದೆಲ್ಲೆಡೆ ತ್ರಿವರ್ಣ ಧ್ವಜ ರಾರಾಜಿಸುತ್ತಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯ ಕೆಂಪು ಕೋಟೆಯಿಂದ ದೇಶದ ಜನರನ್ನು ಉದ್ದೇಶಿಸಿ ಸೋಮವಾರ ಬೆಳಿಗ್ಗೆ ಮಾತನಾಡಲಿದ್ದಾರೆ.

ಪ್ರಧಾನಿ ತಮ್ಮ ಭಾಷಣದಲ್ಲಿ ಮಹತ್ವದ ಯೋಜನೆಗಳನ್ನು ಘೋಷಿಸುವ ನಿರೀಕ್ಷೆ ಇದೆ. ವೈದ್ಯಕೀಯ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದಕ್ಕಾಗಿ ‘ಭಾರತದಲ್ಲಿ ಚಿಕಿತ್ಸೆ ಪಡೆಯಿರಿ’, ‘ಪ್ರಧಾನ ಮಂತ್ರಿ ಸಮಗ್ರ ಸ್ವಾಸ್ಥ್ಯ ಯೋಜನೆ’ ಸೇರಿ ಹಲವು ಯೋಜನೆಗಳು ಘೋಷಣೆ ಆಗಬಹುದು. ಸತತ ಒಂಬತ್ತನೇ ವರ್ಷ ಮೋದಿ ಅವರು ಸ್ವಾತಂತ್ರ್ಯೋತ್ಸವ ಭಾಷಣ ಮಾಡಲಿದ್ದಾರೆ. ಹಿಂದಿನ ವರ್ಷಗಳ ಭಾಷಣಗಳಲ್ಲಿ ಅವರು ಮಹತ್ವದ ಯೋಜನೆಗಳನ್ನು ಘೋಷಿಸಿದ್ದರು.

ದೇಶದಾದ್ಯಂತ ಬಿಗಿ ಭದ್ರತೆ ಏರ್ಪಡಿಸಲಾಗಿದೆ. 76ನೇ ಸ್ವಾತಂತ್ರ್ಯೋತ್ಸವದ ಸಲುವಾಗಿ ಮುಖ್ಯ ಕಾರ್ಯಕ್ರಮ ನಡೆಯಲಿರುವ ದೆಹಲಿಯಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ದೆಹಲಿಯಲ್ಲಿ ಸಂಭ್ರಮಾಚರಣೆಗೆ ಯಾವುದೇ ಅಡ್ಡಿ ಆತಂಕಗಳು ಎದುರಾಗುವುದನ್ನು ತಡೆಯಲು ಪೊಲೀಸರು ಸಜ್ಜಾಗಿದ್ದಾರೆ.

ಮೊಘಲರ ಕಾಲದ ಈ ಸ್ಮಾರಕದ ಸುತ್ತಲೂ 10 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಮುಖ ಗುರುತಿಸುವಿಕೆ ವ್ಯವಸ್ಥೆ (ಎಫ್‌ಆರ್‌ಎಸ್) ಇರುವ ಕ್ಯಾಮೆರಾಗಳನ್ನು ಕೆಂಪುಕೋಟೆಯ ದ್ವಾರದಲ್ಲಿ ಅಳವಡಿಸಲಾಗಿದೆ. ಹಲವು ಹಂತದ ಭದ್ರತೆ ಏರ್ಪಡಿಸಲಾಗಿದೆ. ಕೆಂಪುಕೋಟೆ ಪ್ರದೇಶದಲ್ಲಿ ಗಾಳಿಪಟ ಮತ್ತು ಇತರ ಹಾರುವ ವಸ್ತುಗಳನ್ನು ಕೆಳಕ್ಕೆ ಉರುಳಿಸುವುದಕ್ಕಾಗಿ 400ಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಕೆಂಪುಕೋಟೆ ಸುತ್ತಲಿನ ಐದು ಕಿ.ಮೀ. ಪ್ರದೇಶವನ್ನು ‘ಗಾಳಿಪಟ ನಿಷೇಧಿತ ವಲಯ’ ಎಂದು ಘೋಷಿಸಲಾಗಿದೆ.

ಕೆಂಪುಕೋಟೆಯ ಕಾರ್ಯಕ್ರಮದಲ್ಲಿ ಸುಮಾರು ಏಳು ಸಾವಿರ ಆಹ್ವಾನಿತರು ಭಾಗವಹಿಸುವ ನಿರೀಕ್ಷೆ ಇದೆ.

ಮುಂಬೈ, ಬೆಂಗಳೂರು ಸೇರಿ ದೇಶದ ಎಲ್ಲ ಮಹಾನಗರಗಳಲ್ಲಿಯೂ ಭದ್ರತೆಯನ್ನು ಬಿಗಿಗೊಳಿಸಲಾಗಿದೆ. ಬೀದಿಗಳಲ್ಲಿ ಪೊಲೀಸರನ್ನು ನಿಯೋಜಿಸುವುದರ ಜತೆಗೆ, ಡ್ರೋನ್ ತಡೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಸ್ವಾತಂತ್ರ್ಯ ದಿನದಂದು ವಿಧ್ವಂಸಕ ಕೃತ್ಯ ನಡೆಯಬಹುದು ಎಂಬ ಗುಪ್ತಚರ ಮಾಹಿತಿಯೇನೂ ಸಿಕ್ಕಿಲ್ಲ. ಆದರೆ, ಮಹತ್ವದ ಎಲ್ಲ ಕೇಂದ್ರಗಳ ಮೇಲೆ ಕಣ್ಗಾವಲು ಇರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ನವದೆಹಲಿಯ ಕೆಂಪುಕೋಟೆಯನ್ನು ಭಾನುವಾರ ರಾಷ್ಟ್ರಧ್ವಜದ ಬಣ್ಣದಿಂದ ಅಲಂಕರಿಸಲಾಗಿತ್ತು –ಎಎಫ್‌ಪಿ ಚಿತ್ರ

ಬಿಜೆಪಿ–ಕಾಂಗ್ರೆಸ್ ವಾಕ್ಸಮರ

ದೇಶ ವಿಭಜನೆಗೆ ಅಂದಿನ ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ ಹಾಗೂ ಮುಸ್ಲಿಂ ಲೀಗ್ ಕಾರಣ ಎಂದು ಬಿಜೆಪಿ ಆರೋಪಿಸಿದೆ. ಏಳು ನಿಮಿಷಗಳ ವಿಡಿಯೊದಲ್ಲಿ, ‘ದೇಶ ವಿಭಜನೆಗೆ ನೆಹರೂ ಕಾರಣ. ಭಾರತೀಯ ಸಂಸ್ಕೃತಿ, ಮೌಲ್ಯದ ಅರಿವಿಲ್ಲದವರು ವಿಭಜನೆ ಮಾಡಿದರು. ಈ ಅವಧಿಯಲ್ಲಿ ಪ್ರಾಣ ಕಳೆದುಕೊಂಡವರನ್ನು ಸ್ಮರಿಸುವ ಯತ್ನವನ್ನೂ ಕಾಂಗ್ರೆಸ್ ಮಾಡಿಲ್ಲ’ ಎಂದು ಆರೋಪಿಸಲಾಗಿದೆ.

‘ದೇಶ ವಿಭಜನೆಯ ಭಯಾನಕತೆ ನೆನಪಿನ ದಿನ’ ಆಚರಣೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ನಾಯಕರು ವಿಭಜನೆ ವೇಳೆ ಪ್ರಾಣ ಕಳೆದುಕೊಂಡವರಿಗೆ ಭಾನುವಾರ ಗೌರವ ನಮನ ಸಲ್ಲಿಸಿದರು. ಟ್ವೀಟ್ ಮಾಡಿರುವ ಪ್ರಧಾನಿ, ದೇಶ ವಿಭಜನೆಯ ವೇಳೆ ನರಳಿದ ಜನರ ಸ್ಥೈರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ‘ಭಾರತದ ಇತಿಹಾಸದ ಅಮಾನವೀಯ ಅಧ್ಯಾಯವನ್ನು ಮರೆಯಲು ಸಾಧ್ಯವಿಲ್ಲ’ ಎಂದು ಗೃಹಸಚಿವ ಅಮಿತ್ ಶಾ ಹೇಳಿದರು. ಆದರೆ, ಇಂತಹ ಆಘಾತಕಾರಿ ಘಟನೆಗಳನ್ನು ಆಡಳಿತಾರೂಢ ಪಕ್ಷವು ರಾಜಕೀಯದ ಸರಕಾಗಿ ಬಳಸಿಕೊಳ್ಳುತ್ತಿದೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಭವ್ಯ ಭಾರತ ಕಟ್ಟಲು ಮುರ್ಮು ಕರೆ

ಪ್ರತಿಯೊಬ್ಬ ನಾಗರಿಕ ಭವ್ಯ ಭಾರತ ನಿರ್ಮಾಣದ ಪಣತೊಡಬೇಕು. ದೇಶದ ಸುರಕ್ಷತೆ, ಭದ್ರತೆ, ಪ್ರಗತಿ ಮತ್ತು ಸಮೃದ್ಧಿಗಾಗಿ ದುಡಿಯಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕರೆ ನಿಡಿದ್ದಾರೆ.

ಸ್ವಾತಂತ್ರ್ಯೋತ್ಸವದ ಮುನ್ನಾ ದಿನವಾದ ಭಾನುವಾರ ದೇಶವನ್ನು ಉದ್ದೇಶಿಸಿ ಅವರು ಮಾತನಾಡಿದರು. ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ ನಂತರ ಇದು ಅವರ ಮೊದಲ ಭಾಷಣ. ‘ಈ 75 ವರ್ಷಗಳಲ್ಲಿ ಕಲಿತ ಪಾಠಗಳು, ದೇಶವು ಸ್ವಾತಂತ್ರ್ಯದ 100ನೇ ವರ್ಷದತ್ತ ಸಾಗಲು ನೆರವಿಗೆ ಬರಲಿವೆ. ದೇಶವು ನಮಗೆಲ್ಲವನ್ನೂ ನೀಡಿದೆ. ಭವ್ಯ ಭಾರತದ ನಿರ್ಮಾಣದಲ್ಲೇ ನಮ್ಮೆಲ್ಲರ ಸಾರ್ಥಕತೆ ಇದೆ’ ಎಂದು ಹೇಳಿದ್ದಾರೆ.

ಮಡಕೆ ಮುಟ್ಟಿದ್ದಕ್ಕೆ ಹಲ್ಲೆ: ಪರಿಶಿಷ್ಟ ಬಾಲಕನ ಸಾವು

ಜೋಧಪುರ (ರಾಜಸ್ಥಾನ): ಕುಡಿಯುವ ನೀರಿನ ಮಡಕೆ ಮುಟ್ಟಿದ ಎನ್ನುವ ಕಾರಣಕ್ಕಾಗಿ ಖಾಸಗಿ ಶಾಲಾ ಶಿಕ್ಷಕರೊಬ್ಬರು 9 ವರ್ಷದ ಪರಿಶಿಷ್ಟ ಜಾತಿಯ ಬಾಲಕನನ್ನು ಹೊಡೆದಿದ್ದರು. ಈ ಬಾಲಕ ಶನಿವಾರ ಮೃತಪಟ್ಟಿದ್ದಾನೆ. 5

ಫಡಣವೀಸ್‌ಗೆ ಗೃಹ ಖಾತೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ತಮ್ಮ ಸಂಪುಟಕ್ಕೆ ಸೇರ್ಪಡೆಯಾಗಿದ್ದ 18 ಮಂದಿಗೆ ಭಾನುವಾರ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ. ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಗೃಹ ಖಾತೆ ನೀಡಲಾಗಿದೆ. 5

ರಶ್ದಿ ಆರೋಗ್ಯದಲ್ಲಿ ಚೇತರಿಕೆ

ನ್ಯೂಯಾರ್ಕ್: ದುಷ್ಕರ್ಮಿಯ ಚೂರಿ ಇರಿತದಿಂದ ಗಂಭೀರವಾಗಿ ಗಾಯಗೊಂಡು ತೀವ್ರ ನಿಗಾ ಘಟಕದಲ್ಲಿದ್ದ ಲೇಖಕ ಸಲ್ಮಾನ್ ರಶ್ದಿ ಅವರ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿದೆ. ಅವರಿಗೆ ಅಳವಡಿಸಿದ್ದ ಕೃತಕ ಉಸಿರಾಟ ವ್ಯವಸ್ಥೆಯನ್ನು ಭಾನುವಾರ ತೆಗೆಯಲಾಗಿದೆ. 10

ಕೈರೊ: ಚರ್ಚ್‌ನಲ್ಲಿ ಬೆಂಕಿ ಆಕಸ್ಮಿಕ– 41 ಮಂದಿ ಸಾವು

ಕೈರೊ (ಎ.ಪಿ): ಈಜಿಪ್ಟ್‌ನ ರಾಜಧಾನಿ ಕೈರೊದಲ್ಲಿನ ಕಾಪ್ಟಿಕ್ ಚರ್ಚ್ ಒಂದರಲ್ಲಿ ಭಾನುವಾರ ಬೆಂಕಿ ಆಕಸ್ಮಿಕ ಸಂಭವಿಸಿದ್ದು, 41 ಮಂದಿ ಮೃತಪಟ್ಟಿದ್ದಾರೆ. 10

‘ಬಿಗ್ ಬುಲ್’ ಜುಂಝುನ್‌ವಾಲಾ ಇನ್ನಿಲ್ಲ

ಮುಂಬೈ (ಪಿಟಿಐ): ಷೇರುಪೇಟೆ ಹೂಡಿಕೆದಾರ, ‘ಬಿಗ್ ಬುಲ್’ ಎಂದೇ ಖ್ಯಾತರಾಗಿದ್ದ ರಾಕೇಶ್ ಜುಂಝುನ್‌ವಾಲಾ (62) ಅವರು ಭಾನುವಾರ ಬೆಳಿಗ್ಗೆ ನಿಧನರಾದರು. ಸಂಜೆ ಅವರ ಅಂತ್ಯಸಂಸ್ಕಾರ ನಡೆಯಿತು.



ಹೃದಯಾಘಾತದಿಂದಾಗಿ ಅವರು ಮೃತಪಟ್ಟರು ಎಂದು ಅವರು ಹೂಡಿಕೆ ಮಾಡಿರುವ ಆಕಾಸಾ ಏರ್‌ಲೈನ್ಸ್ ಮೂಲಗಳು ತಿಳಿಸಿವೆ. ಈ ವಿಮಾನಯಾನ ಕಂಪನಿಯ ಸೇವೆಗಳು ಈಚೆಗಷ್ಟೇ ಆರಂಭವಾಗಿದ್ದವು. ಜುಂಝುನ್‌ವಾಲಾ ಅವರು ಫೋಬ್ಸ್ ನಿಯತಕಾಲಿಕೆಯ 2021ರ ಪಟ್ಟಿಯ ಪ್ರಕಾರ ದೇಶದ 36ನೆಯ ಅತಿ ಶ್ರೀಮಂತ ವ್ಯಕ್ತಿ.ಅವರಿಗೆ ಪತ್ನಿ, ಮೂವರು ಮಕ್ಕಳು ಇದ್ದಾರೆ. ಜುಂಝುನ್‌ವಾಲಾ ಅವರು ಕೆಲವು ತಿಂಗಳುಗಳಿಂದ ಮೂತ್ರಪಿಂಡ ಸಮಸ್ಯೆಗೆ ಒಳಗಾಗಿದ್ದರು.

ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಜುಂಝುನ್‌ವಾಲಾ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ. 11

ಸಿ.ಎಂ ರಾಜ್ಯದ ಜನತೆಯ ಕ್ಷಮೆ ಯಾಚಿಸಬೇಕು: ಕಾಂಗ್ರೆಸ್

ನೆಹರೂ ಭಾವಚಿತ್ರಕ್ಕೆ ಕೊಕ್: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ರಾಜ್ಯ ಸರ್ಕಾರ ಆ.14 ರಂದು ಪ್ರಕಟಿಸಿದ ಜಾಹೀರಾತಿನಲ್ಲಿ ಸ್ವಾತಂತ್ರ್ಯ ಹೋರಾಟಗಾರ, ಪಂಡಿತ್ ಜವಾಹರಲಾಲ್ ನೆಹರೂರವರ ಭಾವಚಿತ್ರವನ್ನು ಕೈಬಿಟ್ಟಿರುವುದಕ್ಕೆ ಕಾಂಗ್ರೆಸ್ ನಾಯಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಪ್ರಮಾದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಜನತೆಯ ಕ್ಷಮೆ ಯಾಚಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಯವರಿಗೆ ಪತ್ರ ಬರೆದಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ‘ಸರ್ಕಾರಿ ಜಾಹೀರಾತಿನಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿ ಹೋರಾಟಗಾರ, ದೇಶದ ಮೊದಲ ಪ್ರಧಾನಿ, ನವಭಾರತ ನಿರ್ಮಾಣದ ಶಿಲ್ಪಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರ ಹಾಗೂ ಹೆಸರನ್ನು ಉದ್ದೇಶಪೂರ್ವಕವಾಗಿ ಪ್ರಕಟಿಸದೆ ಅಪಮಾನ ಮಾಡಿದ್ದೀರಿ. ಆ ಮೂಲಕ, ಇತಿಹಾಸ ತಿರುಚುವ ವಿಫಲ ಯತ್ನ ಮಾಡಿದ್ದೀರಿ. ಮುಖ್ಯಮಂತ್ರಿ ಸ್ಥಾನದಿಂದ ಇಂಥ ಕೀಳುಮಟ್ಟದ ರಾಜಕಾರಣ ಮಾಡಬಾರದಿತ್ತು. ಇದು ನಿಮ್ಮ ಆತ್ಮಸಾಕ್ಷಿಗೆ ಶೋಭೆ ತರುವ ಕೆಲಸವಲ್ಲ’ ಎಂದು ಟೀಕಿಸಿದ್ದಾರೆ.

‘ಅವಮಾನ ಸಹಿಸಲಾಗದು’: ಸರಣಿ ಟ್ವೀಟ್‌ನಲ್ಲಿ, ‘ಸ್ವಾತಂತ್ರ್ಯ ಹೋರಾಟಗಾರರ ಪಟ್ಟಿಯಲ್ಲಿ ನೆಹರೂ ಅವರ ಹೆಸರನ್ನು ಕೈಬಿಡುವಷ್ಟು ಕೀಳು ಮಟ್ಟಕ್ಕೆ ನೀವು ಇಳಿಯಬಾರದಿತ್ತು. ಕುರ್ಚಿ ಉಳಿಸಲು ಈ ಪರಿಯ ಗುಲಾಮಗಿರಿಯೇ’ ಎಂದು ಮುಖ್ಯಮಂತ್ರಿಯನ್ನು ಪ್ರಶ್ನಿಸಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ‘ಜನರ ತೆರಿಗೆ ಹಣದಿಂದ ನೀಡಿರುವ ಜಾಹೀರಾತಿನಲ್ಲಿ ಧೀಮಂತ ಸ್ವಾತಂತ್ರ್ಯ ಹೋರಾಟಗಾರ ನೆಹರೂ ಅವರಿಗೆ ಮಾಡಿರುವ ಅವಮಾನವನ್ನು ಸಹಿಸಲಾಗದು’ ಎಂದು ಕಿಡಿಕಾರಿದ್ದಾರೆ.

10ನೇ ಪುಟ ನೋಡಿ

ನೈಜ ಹೋರಾಟಗಾರರಿಗೆ ಸಮರ್ಪಣೆ: ಸಿ.ಎಂ

ಬೆಂಗಳೂರು:‘ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅನಾಮಧೇಯರಾಗಿ ಹೋರಾಟ ನಡೆಸಿದವರಿಗೆ ನಮನ ಸಲ್ಲಿಸಿದ್ದೇವೆ. ಜಾಹೀರಾತಿನಲ್ಲಿ ನೆಹರೂ ಅವರ ಚಿತ್ರವೂ ಇದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದ್ದಾರೆ. ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ‘ಸ್ವಾತಂತ್ರ್ಯಕ್ಕೆ ಹೋರಾಡಿದ ಕಾಂಗ್ರೆಸ್ಸಿನ ಹಲವು ಪ್ರಮುಖರ ಚಿತ್ರಗಳು ಇವೆ. ಸ್ವಾತಂತ್ರ್ಯ ಯಾವ ಒಬ್ಬ ವ್ಯಕ್ತಿಯಿಂದ ಬಂದಿಲ್ಲ. ಲಕ್ಷಗಟ್ಟಲೆ ಜನ ಭಾಗವಹಿಸಿದ್ದರು. ಸಾಕಷ್ಟು ಅನಾಮಧೇಯರು ಹೋರಾಟಕ್ಕೆ ಧುಮುಕಿ ತಮ್ಮ ಆಸ್ತಿ ಪಾಸ್ತಿ ಮತ್ತು ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಇಂತಹ ನೈಜ, ಅನಾಮಧೇಯ ಹೋರಾಟಗಾರರಿಗೆ ಜಾಹೀರಾತು ಸಮರ್ಪಿತವಾಗಿದೆ’ ಎಂದರು.

‘ಸುಮಾರು 65 ವರ್ಷ ಅಂಬೇಡ್ಕರ್, ನೇತಾಜಿ ಸುಭಾಷ್ ಚಂದ್ರ ಬೋಸ್, ವಲ್ಲಭಭಾಯಿ ಪಟೇಲ್ ಮುಂತಾದವರನ್ನು ಇವರು ಮೂಲೆಗುಂಪು ಮಾಡಿದ್ದರು. ದೇಶದ ಉದ್ದಗಲ ರಸ್ತೆಗಳು, ಕಟ್ಟಡಗಳಿಗೆ ನೆಹರೂ ಅವರ ಹೆಸರನ್ನೇ ಇಟ್ಟಿದ್ದರಲ್ಲವೇ. ಈಗ ಇವರಿಗೆ ಅಭದ್ರತೆ ಏಕೆ ಕಾಡುತ್ತಿದೆ’ ಎಂದು ಬೊಮ್ಮಾಯಿ ಪ್ರಶ್ನಿಸಿದರು.

‘ಮೇಧಾವಿ’ ಸಚಿವ ಹೇಳಿದಂತೆ ಸರ್ಕಾರ ತೆವಳುತ್ತಿಲ್ಲ: ಎಸ್‌ಟಿಎಸ್

ಪ್ರಜಾವಾಣಿ ವಾರ್ತೆ

ಮೈಸೂರು: ‘ಸರ್ಕಾರ ನಡೀತಾ ಇಲ್ಲ. ಮ್ಯಾನೇಜ್ ಮಾಡ್ತಾ ಇದ್ದೀವಷ್ಟೇ’ ಎಂಬ ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿಕೆಗೆ ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ತಿರುಗೇಟು ನೀಡಿದ್ದಾರೆ. ‘ನಾನೇ ಮೇಧಾವಿ, ನಾನೊಬ್ಬನೇ ಬುದ್ಧಿವಂತನೇ ಹೊರತು ಬೇರಾರೂ ಇಲ್ಲ ಎಂದು ಅವರು ತಿಳಿದುಕೊಂಡಿದ್ದಾರೆ. ಅದನ್ನು ತಲೆಯಿಂದ ತೆಗೆದು ಹಾಕಬೇಕು’ ಎಂದು ಖಾರವಾಗಿ ಪ್ರತಿಕ್ರಿಯಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಭಾನುವಾರ ಮಾತನಾಡಿದ ಅವರು, ‘ಆ ಮೇಧಾವಿ ಹೇಳಿದಂತೆ ಸರ್ಕಾರ ತೆವಳುತ್ತಿಲ್ಲ. ಬಹುಶಃ ಅವರ ಖಾತೆ (ಸಣ್ಣ ನೀರಾವರಿ ಇಲಾಖೆ) ಕುಂಟುತ್ತಿರಬಹುದು’ ಎಂದು ವ್ಯಂಗ್ಯವಾಡಿದರು.

‘ಯೋಚಿಸಬೇಕಿತ್ತು’: ‘ಸರ್ಕಾರ ನಡೀತಾ ಇಲ್ಲ, ತಳ್ತಾ ಇದ್ದೀವಿ ಎಂಬುದಾಗಿ ಸಚಿವ ಜೆ.ಸಿ. ಮಾಧುಸ್ವಾಮಿ ಯಾವ ಮನಸ್ಥಿತಿಯಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಈ ರೀತಿ ಹೇಳಿಕೆ ಕೊಡುವ ಮುನ್ನ ಅವರು ಸ್ವಲ್ಪ ಯೋಚಿಸಬೇಕಿತ್ತು’ ಎಂದು ಸಾರಿಗೆ, ಎಸ್‌ಸಿ, ಎಸ್‌ಟಿಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಬಳ್ಳಾರಿಯಲ್ಲಿ ಪ್ರತಿಕ್ರಿಯಿಸಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಳ ಪುಟಗಳು



ಶಿವಾನಂದ ವೃತ್ತ ಮೇಲ್ಸೇತುವೆ: ಇಂದಿನಿಂದ ಪ್ರಾಯೋಗಿಕ ಸಂಚಾರ

ಬೆಂಗಳೂರು: ಬಹುನಿರೀಕ್ಷಿತ ಶಿವಾನಂದ ಮೇಲ್ಸೇತುವೆ ಆ.15ರ ಸೋಮವಾರದಿಂದ ಪ್ರಾಯೋಗಿಕ ಸಂಚಾರಕ್ಕೆ ಮುಕ್ತಗೊಳ್ಳಲಿದೆ.

ಮೇಲ್ಸೇತುವೆಯ ಒಂದು ಭಾಗದ ರಸ್ತೆಯಲ್ಲಿ ಅಂದರೆ ಶೇಷಾದ್ರಿಪುರದಿಂದ ರೇಸ್‌ಕೋರ್ಸ್ ಕಡೆಗೆ ಸೋಮವಾರದಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತದೆ.

ಇನ್ನೊಂದು ಭಾಗದಲ್ಲಿ ಕಲ್ವರ್ಟ್ ಕೆಲಸ ಬಹುತೇಕ ಮುಗಿದಿದೆ. ಒಂದು ವಾರದಲ್ಲಿ ಪೂರ್ಣ ಸಿದ್ಧವಾಗಲಿದೆ. ನಂತರ ಮೇಲ್ಸೇತುವೆ ಉದ್ಘಾಟಿಸಿ, ಪೂರ್ಣವಾಗಿ ಸಂಚಾರಕ್ಕೆ ಮುಕ್ತಗೊಳಿಸಲಾಗುತ್ತದೆ ಎಂದು ಬಿಬಿಎಂಪಿಯ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್ ತಿಳಿಸಿದರು.




ಶಿವಾನಂದ ಮೇಲ್ಸೇತುವೆ ಪ್ರಾಯೋಗಿಕ ಸಂಚಾರಕ್ಕೆ ಸೋಮವಾರ ಮುಕ್ತಗೊಳ್ಳಲಿದೆ

'ನಿರಂತರ ಮಳೆಯಿಂದ ಮೇಲ್ಸೇತುವೆ ಕಾಮಗಾರಿ ವಿಳಂಬವಾಯಿತು. ಕೆಲವು ಡ್ರೈನ್‌ಗಳ ಕೆಲಸ ಬಾಕಿ ಇದ್ದು, ಅದನ್ನೂ ಇನ್ನೊಂದು ವಾರದಲ್ಲಿ ಮುಗಿಸಲಾಗುತ್ತದೆ' ಎಂದರು.

10 ತಿಂಗಳು ಸ್ಥಗಿತ: ಶಿವಾನಂದ ವೃತ್ತದ ಮೇಲ್ಸೇತುವೆ ಕಾಮಗಾರಿ 10 ತಿಂಗಳು ಸ್ಥಗಿತಗೊಂಡಿತ್ತು. ಮೇಲುರಸ್ತೆ ಉದ್ದವನ್ನು ಕಡಿತಗೊಳಿಸಿದ್ದ ಬಿಬಿಎಂಪಿಯ ಮಾರ್ಪಡಿಸಿದ ವಿನ್ಯಾಸಕ್ಕೆ ಭಾರತೀಯ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್‌ಸಿ) ತಜ್ಞರು ಸಮ್ಮತಿ ಸೂಚಿಸಿದ ಹಿನ್ನೆಲೆಯಲ್ಲಿ ಹೈಕೋರ್ಟ್‌ನಿಂದ ಕಾಮಗಾರಿ ಮುಂದುವರಿಸಲು ಜುಲೈ ಮೊದಲ ವಾರ ಬಿಬಿಎಂಪಿಗೆ ಸೂಚನೆ ನೀಡಿತ್ತು.

ಮೇಲ್ಸೇತುವೆ ಸ್ವಾಧೀನಪಡಿಸಿಕೊಳ್ಳಲು ಅಧಿಸೂಚನೆಗೆ ಒಪ್ಪದ ಆಸ್ತಿ ಮಾಲೀಕರು, ಬಿಬಿಎಂಪಿಯ ಪರಿಹಾರಕ್ಕೆ ಸಮ್ಮತಿಸಿರಲಿಲ್ಲ. ಹೀಗಾಗಿ, ಅವುಗಳನ್ನು ಹೊರತುಪಡಿಸಿ ಮೇಲ್ಸೇತುವೆ ಉದ್ದ ಕಡಿತಗೊಳಿಸಿ ಕಾಮಗಾರಿ ಮುಗಿಸಲು ಬಿಬಿಎಂಪಿ ಎಂಜಿನಿಯರ್‌ಗಳು ವಿನ್ಯಾಸ ಬದಲಿಸಿದ್ದರು. ಅದು ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಕಾಮಗಾರಿ ಸ್ಥಗಿತಗೊಂಡಿತ್ತು.

ಉಕ್ಕಿನ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯು 2017ರ ಅಕ್ಟೋಬರ್‌ನಲ್ಲಿ ಆರಂಭವಾಗಿತ್ತು. ಮೊದಲಿನ ಯೋಜನೆಯಂತೆ ಮೂರು ವರ್ಷಗಳ ಹಿಂದೆಯೇ ಪೂರ್ಣಗೊಳ್ಳಬೇಕಿತ್ತು.



75ನೇ ಸ್ವಾತಂತ್ರ್ಯೋತ್ಸವನ್ನು ಆಚರಿಸಲಾಗುತ್ತಿದೆ!

ವಾರ್ಡ್ ಮೀಸಲಾತಿ ಅವಾಸ್ತವ: ಆರ್‌ಪಿಐ

ಬೆಂಗಳೂರು: 'ಬಿಬಿಎಂಪಿ ವಾರ್ಡ್‌ಗಳಿಗೆ ನಿಗದಿಪಡಿಸಿರುವ ಮೀಸಲಾತಿ ಅವಾಸ್ತವವಾಗಿದ್ದು, ಸರಿಪಡಿಸಬೇಕು' ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾದ ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಆಗ್ರಹಿಸಿದರು.

ಪಕ್ಷ ಈಚೆಗೆ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಅವರು ಮಾತನಾಡಿದರು.

ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಪ್ರಯುಕ್ತ ಕಟ್ಟಡಗಳಿಗೆ ವಿದ್ಯುತ್ ದೀಪಾಲಂಕಾರ

ತ್ರಿವರ್ಣಗಳಲ್ಲಿ ಬೆಳಗಿದ ನಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ-ಮಹೋತ್ಸವದ ಪ್ರಯುಕ್ತ ನಗರದಲ್ಲಿನ ಮಳಿಗೆಗಳು, ಮನೆಗಳು ಸೇರಿ ಎಲ್ಲೆಡೆ ತ್ರಿವರ್ಣ ಧ್ವಜಗಳು ಹಾರಾಡುತ್ತಿವೆ. ಸರ್ಕಾರಿ ಕಚೇರಿಗಳು ಸೇರಿ ಬಹುಮಹಡಿ ಕಟ್ಟಡಗಳು ವಿದ್ಯುತ್ ದೀಪಾಲಂಕಾರಗಳಿಂದ ಕಂಗೊಳಿಸುತ್ತಿವೆ.

ಸ್ವಾತಂತ್ರ್ಯೋತ್ಸವ ಅಮೃತಮಹೋತ್ಸವ ಸಮಾರಂಭವನ್ನು ಸೋಮವಾರ ಅದ್ದೂರಿಯಾಗಿ ಆಚರಿಸಲು ಬಿಬಿಎಂಪಿ ಹಾಗೂ ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ. ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆಯುವ ಸಮಾರಂಭಕ್ಕೆ ಎರಡು ವರ್ಷದ ಬಳಿಕ ಸಾರ್ವಜನಿಕರಿಗೆ ಪ್ರವೇಶಾವಕಾಶ ನೀಡಲಾಗಿದೆ.

ಬೆಳಿಗ್ಗೆ 9ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ವಿವಿಧ ಸರ್ಕಾರಿ ಹಾಗೂ ಖಾಸಗಿ ಸಂಘ–ಸಂಸ್ಥೆಗಳೂ ಸ್ವಾತಂತ್ರ್ಯೋತ್ಸವ ಸಮಾರಂಭ ಹಮ್ಮಿಕೊಂಡಿವೆ.

‘ಹರ್ ಘರ್ ತಿರಂಗಾ’ ಅಭಿಯಾನದಡಿ ಶನಿವಾರ ಧ್ವಜ ಹಾರಿಸದಿದ್ದವರು ಭಾನುವಾರ ಧ್ವಜಗಳನ್ನು ಖರೀದಿಸಿ, ಮನೆಗಳಲ್ಲಿ ಧ್ವಜ ಹಾರಿಸಿದರು. ವಿಧಾನಸೌಧದ ಮುಂಭಾಗ ಸೇರಿ ನಗರದ ಹಲವು ವೃತ್ತಗಳಲ್ಲಿ ವಿವಿಧ ಗಾತ್ರಗಳ ಧ್ವಜಗಳ ಮಾರಾಟ ಭರದಿಂದ ನಡೆಯಿತು. ಬೈಕ್ ಸವಾರರು, ಆಟೊ ಚಾಲಕರು ವಾಹನಕ್ಕೆ ಧ್ವಜ ಸಿಕ್ಕಿಸಿಕೊಂಡು ಸಂಚರಿಸಿದರು. ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬಂದ ಜನರು ಧ್ವಜ ಹಿಡಿದು ಸಂಭ್ರಮಿಸಿದರು.

ರಿಚ್ಮಂಡ್, ಸಜ್ಜನ್ ರಾವ್, ರಾಜರಾಮ್ ಮೋಹನ್ ರಾಯ್ ಸೇರಿ ವಿವಿಧ ವೃತ್ತಗಳನ್ನು ಕೇಸರಿ, ಬಿಳಿ, ಹಸಿರು ಬಟ್ಟೆ ಹಾಗೂ ಬಲೂನುಗಳಿಂದ ಅಲಂಕರಿಸಲಾಗಿದೆ. ಬೃಹದಾಕಾರದ ಧ್ವಜಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನೂ ಅಳವಡಿಸಲಾಗಿದೆ. ನಗರದ ಬಿಜೆಪಿ ಶಾಸಕರ ಕಚೇರಿಗಳ ಮುಂದೆ ಸಾರ್ವಜನಿಕರು ಹಾಗೂ ವಾಹನ ಸವಾರರಿಗೆ ಉಚಿತವಾಗಿ ಧ್ವಜಗಳನ್ನು ವಿತರಿಸಲಾಯಿತು.

‘ಹರ್ ಘರ್ ತಿರಂಗಾ’ ಅಭಿಯಾನದ ಭಾಗವಾಗಿ ಮಲ್ಲೇಶ್ವರದ ಸರ್ಕಾರಿ ಕಾಲೇಜು ಮೈದಾನದಲ್ಲಿ ಭಾನುವಾರ ರಾತ್ರಿ ಸ್ಥಳೀಯ ಶಾಸಕ ಹಾಗೂ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ನೇತೃತ್ವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ತೆಲುಗು ಗಾಯಕಿ ಮಂಗ್ಲಿ (ಸತ್ಯವತಿ) ಅವರು ದೇಶಭಕ್ತಿ ಗೀತೆಗಳನ್ನು ಪ್ರಸ್ತುತಪಡಿಸಿದರು.

ವಿವಿಧ ಸಂಘ–ಸಂಸ್ಥೆಗಳು ಸೋಮವಾರ ವಾಕಥಾನ್, ಸೈಕಲ್ ಜಾಥಾ, ಬೈಕ್ ರ‍್ಯಾಲಿಗಳನ್ನು ಹಮ್ಮಿಕೊಂಡಿದ್ದು, ಭಾನುವಾರ ಅಂತಿಮ ಹಂತದ ಸಿದ್ಧತೆ ನಡೆಯಿತು.



ರಿಚ್ಮಂಡ್ ವೃತ್ತದಲ್ಲಿ ಬಟ್ಟೆ ಹಾಗೂ ಬಲೂನಿನಿಂದ ತ್ರಿವರ್ಣ ಧ್ವಜವನ್ನು ವಿನ್ಯಾಸ ಮಾಡಿರುವುದು



ಹಡ್ಸನ್ ವೃತ್ತದಲ್ಲಿ ಬೈಕ್ ಸವಾರರೊಬ್ಬರು ತ್ರಿವರ್ಣ ಧ್ವಜದೊಂದಿಗೆ ಮಕ್ಕಳ ಜತೆಗೆ ತೆರಳುತ್ತಿರುವುದು – ಪ್ರಜಾವಾಣಿ ಚಿತ್ರಗಳು

ಬಿಗಿ ಭದ್ರತೆ, ಪಥಸಂಚಲನ

ಸ್ವಾತಂತ್ರ್ಯೋತ್ಸವ ಆಚರಣೆ • 2,500ಕ್ಕೂ ಹೆಚ್ಚು ಸಿಬ್ಬಂದಿ ಗಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸ್ವಾತಂತ್ರ್ಯೋತ್ಸವ ಆಚರಣೆಯಂದು ಅಹಿತಕರ ಘಟನೆಗಳು ನಡೆಯದಂತೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದು, ‘ಗರುಡಾ’ ಹಾಗೂ ಕ್ಷಿಪ್ರ ಕಾರ್ಯಪಡೆಯ (ಆರ್‌ಎಎಫ್) ಸಿಬ್ಬಂದಿ ಸೂಕ್ಷ್ಮ ಪ್ರದೇಶಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದಾರೆ.

ಮಾಣೆಕ್ ಷಾ ಮೈದಾನದಲ್ಲಿ ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಧ್ವಜಾರೋಹಣ ನೆರವೇರಿಸಲಿದ್ದಾರೆ. ಹೆಚ್ಚು ಸುದ್ದಿ ಆಗಿರುವ ಚಾಮರಾಜಪೇಟೆ ಮೈದಾನದಲ್ಲೂ ಧ್ವಜಾರೋಹಣ ನೆರವೇರಲಿದೆ. ಕಾಂಗ್ರೆಸ್ ಪಕ್ಷದಿಂದ ‘ಸ್ವಾತಂತ್ರ್ಯ ನಡಿಗೆ’ ಮೆರವಣಿಗೆ ನಡೆಯಲಿದೆ. ಹೀಗಾಗಿ, ಹೆಚ್ಚಿನ ಸಿಬ್ಬಂದಿ ನಿಯೋಜಿಸಲಾಗಿದೆ.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ಹೆಚ್ಚುವರಿ ಪೊಲೀಸ್ ಕಮಿಷನರ್‌ಗಳು ಹಾಗೂ ಡಿಸಿಪಿಗಳು ಭದ್ರತೆ ಹೊಣೆ ಹೊತ್ತುಕೊಂಡಿದ್ದಾರೆ. ಭಾನುವಾರದಿಂದಲೇ ಕೆಲ ಸ್ಥಳಗಳಲ್ಲಿ ಪೊಲೀಸರು ಗಸ್ತು ತಿರುಗುತ್ತಿದ್ದು, ಅನುಮಾನ ಬಂದ ವ್ಯಕ್ತಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

ಸ್ಥಳ ವಿವಾದದಿಂದಾಗಿ ಚರ್ಚೆಗೆ ಗ್ರಾಸವಾಗಿದ್ದ ಚಾಮರಾಜಪೇಟೆ ಮೈದಾನ ಬಳಿ ಹೆಚ್ಚಿನ ನಿಗಾ ವಹಿಸಲಾಗಿದೆ. ತುರ್ತು ಕಾರ್ಯಾಚರಣೆಗೆ ತರಬೇತಿ ಪಡೆದಿರುವ ‘ಗರುಡಾ’ ಪಡೆ ಸಿಬ್ಬಂದಿ ಅಲ್ಲಿ ನಿಯೋಜಿಸಲಾಗಿದೆ. ಇವರ ಜೊತೆ ಕ್ಷಿಪ್ರ ಕಾರ್ಯಪಡೆಯ 240 ಸಿಬ್ಬಂದಿ ಕಾವಲು ಸಹ ಮೈದಾನಕ್ಕೆ ಇರಲಿದೆ.

ಮೈದಾನ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಭಾನುವಾರ ರಕ್ಷಣಾ ಪಡೆಗಳು, ಶಸ್ತ್ರಸಜ್ಜಿತವಾಗಿ ಪಥಸಂಚಲನ ಸಹ ನಡೆಸಿದವು. ಯಾರಾದರೂ ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾದರೆ, ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರು ಚಾಮರಾಜಪೇಟೆ ಮೈದಾನಕ್ಕೆ ಭಾನುವಾರ ಭೇಟಿ ನೀಡಿ ಭದ್ರತೆ ಪರಿಶೀಲನೆ ನಡೆಸಿದರು.

2,500ಕ್ಕೂ ಹೆಚ್ಚು ಸಿಬ್ಬಂದಿ: ‘ನಗರದ ಪ್ರತಿಯೊಂದು ಸ್ಥಳದಲ್ಲೂ ಬಿಗಿ ಭದ್ರತೆ ಇರಲಿದೆ. 2,500ಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ಆಯಾ ಠಾಣೆ ಪೊಲೀಸರು ನಿರಂತರ ಗಸ್ತು ತಿರುಗಲಿದ್ದಾರೆ. ಅಹಿತಕರ ಘಟನೆಗಳು ನಡೆದರೆ, ನಿಯಂತ್ರಣ ಕೊಠಡಿಗೆ ಮಾಹಿತಿ ನೀಡಲಿದ್ದಾರೆ. ಪರಿಸ್ಥಿತಿ ಎದುರಿಸಲು ಎಲ್ಲ ಸಿದ್ಧತೆ ಆಗಿದೆ’ ಎಂದು ತಿಳಿಸಿದರು.



ಚಾಮರಾಜಪೇಟೆ ಮೈದಾನದಲ್ಲಿ ಬಾಲಕನೊಬ್ಬ ತ್ರಿವರ್ಣ ಧ್ವಜ ಹಿಡಿದು ರಕ್ಷಣಾ ಸಿಬ್ಬಂದಿಗೆ ಶುಭಾಶಯ ಕೋರಿದ – ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

ಫಲಪುಷ್ಪ ಪ್ರದರ್ಶನಕ್ಕೆ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಡಾ.ರಾಜ್‌ಕುಮಾರ್ ಮತ್ತು ಪುನೀತ್‌ರಾಜ್‌ಕುಮಾರ್ ಸ್ಮರಣಾರ್ಥ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ನಾನಾ ದಿಕ್ಕುಗಳಿಂದ ಜನ ಸಾಗರವೇ ಹರಿದು ಬಂದಿತ್ತು.

ತೋಟಗಾರಿಕೆ ಇಲಾಖೆ ಹಾಗೂ ಮೈಸೂರು ಉದ್ಯಾನ ಕಲಾ ಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ ಪ್ರದರ್ಶನಕ್ಕೆ ಪುಷ್ಪಪ್ರಿಯರು ಹಾಗೂ ಡಾ.ರಾಜ್ ಮತ್ತು ಅಪ್ಪು ಅಭಿಮಾನಿಗಳು ಭೇಟಿ ನೀಡಿ ಕಣ್ತುಂಬಿಕೊಂಡರು.

ಜನ ಹೆಚ್ಚಿದ್ದರಿಂದ ಉದ್ಯಾನದ ನಾಲ್ಕೂ ದ್ವಾರಗಳಲ್ಲಿ ಟಿಕೆಟ್ ಕೌಂಟರ್‌ಗಳನ್ನು ಹೆಚ್ಚಿಸಲಾಗಿತ್ತು. ನರ್ಸರಿಗಳ ಬಳಿ ಸಸಿಗಳನ್ನು ಖರೀದಿಸುವಲ್ಲಿ, ಮಾರಾಟ ಮಳಿಗೆಗಳ ಬಳಿ ಜನಸಂದಣಿ ಹೆಚ್ಚಾಗಿತ್ತು. ಪ್ರದರ್ಶನದ ವೇಳೆ ಅವ್ಯವಸ್ಥೆಗಳು ನಡೆಯದಂತೆ ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು.

ವಾರಾಂತ್ಯದಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಜನಸಾಗರವೇ ಹರಿದು ಬಂದಿದ್ದರಿಂದ ತೋಟಗಾರಿಕೆ ಇಲಾಖೆ ಮತ್ತು ಪೊಲೀಸ್ ಸಿಬ್ಬಂದಿ ಜನರನ್ನು ನಿಯಂತ್ರಿಸಲು ಹರಸಾಹಸ ಪಟ್ಟರು.

ಖರೀದಿಗೆ ಮುಗಿಬಿದ್ದ ಜನ: ಉದ್ಯಾನದ ಆವರಣದಲ್ಲಿರುವ ಅಧಿಕೃತ ಮಾರಾಟ ಮಳಿಗೆಗಳಲ್ಲಿ ಆಟಿಕೆಗಳು, ಗೃಹ ಉಪಯೋಗಿ, ಅಲಂಕಾರಿಕ ಮತ್ತು ಕರಕುಶಲ ವಸ್ತುಗಳು, ಅಡುಗೆ ಪದಾರ್ಥಗಳು, ಬ್ಯಾಗ್, ಪರ್ಸ್ ಇತ್ಯಾದಿಗಳ ಖರೀದಿಗೆ ಜನ ಮುಗಿಬಿದ್ದಿದ್ದರು. ಗಾಜಿನ ಮನೆಯ ಸುತ್ತಮುತ್ತಲು ಜನ ಗಿಜಿಗುಡುತ್ತಿದ್ದರು. ಕೆಲವು ಕಡೆ ಪ್ಲಾಸ್ಟಿಕ್ ಮತ್ತು ತ್ಯಾಜ್ಯ ವಸ್ತುಗಳಿಂದ ತುಂಬಿಕೊಂಡಿತ್ತು.



ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಬಂದ ಜನ ಸಾಗರ –ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ನಾಲ್ಕು ದ್ವಾರಗಳಲ್ಲಿ ಸಂಚಾರ ದಟ್ಟಣೆ

ಲಾಲ್‌ಬಾಗ್ ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳಲ್ಲಿ ಜನ ಮತ್ತು ವಾಹನಗಳ ಸಂದಣಿ ಹೆಚ್ಚಾಗಿತ್ತು. ಹೊಸೂರು ರಸ್ತೆ, ಆರ್.ವಿ. ರಸ್ತೆ, ಸಿದ್ದಾಪುರ ರಸ್ತೆ, ಜಯನಗರ ಮಾರ್ಗದ ಕೆಲವು ರಸ್ತೆಗಳಲ್ಲಿ ಭಾರಿ ಸಂಚಾರ ದಟ್ಟಣೆ ಉಂಟಾಗಿತ್ತು.

ಬೆಳಿಗ್ಗೆಯಿಂದ ರಾತ್ರಿ 8ರವರೆಗೂ ವಾಹನ ದಟ್ಟಣೆ ಇತ್ತು. ರಸ್ತೆಯ ಇಕ್ಕೆಲಗಳಲ್ಲಿ ವಾಹನಗಳನ್ನು ನಿಲ್ಲಿಸಲಾಗಿತ್ತು. ಇದರಿಂದ ಸಂಚಾರ ದಟ್ಟಣೆ ಉಂಟಾಯಿತು. ಮೆಜೆಸ್ಟಿಕ್‌ನಿಂದ ರೇಷ್ಮೆ ಸಂಸ್ಥೆಯ ಕಡೆ ಸಂಪರ್ಕಿಸುವ ಮೆಟ್ರೊ ರೈಲುಗಳಲ್ಲಿ ಜನಜಂಗುಳಿ ಇತ್ತು. ಲಾಲ್‌ಬಾಗ್‌ನ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ವಿತರಿಸಲು ಹೆಚ್ಚಿನ ಸಿಬ್ಬಂದಿಗಳ ವ್ಯವಸ್ಥೆ ಮಾಡಲಾಗಿತ್ತು. ಟಿಕೆಟ್ ಪಡೆಯಲು ಹರಸಾಹಸ ಪಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ಪ್ರದರ್ಶನ ವೀಕ್ಷಿಸಿದವರು

1.54 ಲಕ್ಷ
ಒಂಬತ್ತು ದಿನಗಳಲ್ಲಿ ಭೇಟಿ ನೀಡಿದ ಜನ

₹1.51 ಕೋಟಿ
ಒಂಬತ್ತು ದಿನಗಳಲ್ಲಿ ಸಂಗ್ರಹವಾದ ಹಣ

1.46 ಲಕ್ಷ
ಭಾನುವಾರ ಭೇಟಿ ನೀಡಿದ ಜನ

₹78.07 ಲಕ್ಷ
ಭಾನುವಾರ ಸಂಗ್ರಹವಾದ ಹಣ

ರಾಷ್ಟ್ರಧ್ವಜದ ಮೇಲೆ ರಾಜಕಾರಣ: ಬಿಕೆಸಿ ಟೀಕೆ

ಬೆಂಗಳೂರು: ‘75ನೇ ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ‘ಆಜಾದಿ ಕಿ ಅಮೃತ ಮಹೋತ್ಸವ’ ಹೆಸರಿನಲ್ಲಿ ಮನೆಗಳು, ಕಚೇರಿಗಳು, ಶಿಕ್ಷಣ ಸಂಸ್ಥೆಗಳು ಹಾಗೂ ಇತರ ಸ್ಥಳಗಳ ಮೇಲೆ ತ್ರಿವರ್ಣ ಧ್ವಜ ಹಾರಿಸಬೇಕೆಂಬ ಕೇಂದ್ರ– ರಾಜ್ಯ ಸರ್ಕಾರಗಳ ಕ್ರಮ ಸ್ವಾಗತಾರ್ಹವಾದರೂ ಅನುಸರಿಸುತ್ತಿರುವ ಮಾರ್ಗಗಳು ಹಾಗೂ ಜನರನ್ನು ಪ್ರೇರೇಪಿಸುತ್ತಿರುವ ರೀತಿ ಆಕ್ಷೇಪಾರ್ಹವಾಗಿದೆ’ ಎಂದು ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್ ಅಭಿಪ್ರಾಯಪಟ್ಟಿದ್ದಾರೆ.

‘ರಾಷ್ಟ್ರೀಯ ಹಬ್ಬಗಳಂದು ಈ ಹಿಂದಿನಿಂದಲೂ ಸ್ವಯಂಪ್ರೇರಣೆಯಿಂದ ರಾಷ್ಟ್ರಧ್ವಜ ಹಾರಿಸುತ್ತಾ ಬರಲಾಗಿದೆ. ರಾಷ್ಟ್ರಧ್ವಜ ಹಾರಿಸುವ ವಿಷಯ, ದೇಶಭಕ್ತಿಯ ಹೆಸರಲ್ಲಿ ಈ ಹಿಂದೆಂದೂ ಅಧಿಕಾರ ರಾಜಕಾರಣದ ಸಾಧನವಾಗಿ ಬಳಕೆ ಆಗಿಲ್ಲ’ ಎಂದಿದ್ದಾರೆ.

‘ಬಸವನಗುಡಿಯಲ್ಲಿ ಗಾಂಧೀಜಿಯವರ ತತ್ವಕ್ಕೆ ವಿರುದ್ಧವಾಗಿ ಪಾಲಿಸ್ಟರ್ ಧ್ವಜಗಳನ್ನು ಸ್ಪರ್ಧಾತ್ಮಕ ಬೆಲೆಗೆ ಮಾರಾಟ ಮಾಡುತ್ತಿದ್ದದ್ದು ಅಸಹ್ಯ ಮೂಡಿಸಿತು. ಸರ್ಕಾರಿ ಇಲಾಖೆಗಳು, ನಗರಸಭೆ, ಕಾರ್ಪೊರೇಷನ್, ನಿಗಮ ಮಂಡಳಿಗಳಿಗೆ ರಾಷ್ಟ್ರಧ್ವಜಗಳ ಮಾರಾಟಕ್ಕೆ ಗುರಿ ನಿಗದಿಮಾಡಿರುವುದು ಸೇರಿ ಎಲ್ಲ ಘಟನೆಗಳು ರಾಷ್ಟ್ರಧ್ವಜದ ಬಗ್ಗೆ ಜನರಿಗಿದ್ದ ಭಾವನಾತ್ಮಕ ಗೌರವ, ಹೆಮ್ಮೆಗೆ ಧಕ್ಕೆ ತಂದಿವೆ’ ಎಂದಿದ್ದಾರೆ.

‘ಒಂದು ಸರ್ಕಾರ ಅಥವಾ ಪ್ರಭುತ್ವದಿಂದ ಜಾರಿಗೊಳಿಸಲ್ಪಟ್ಟ ‘ದೇಶಭಕ್ತಿ’, ತನ್ನದೇ ಆದ ಸ್ವಹಿತಾಸಕ್ತಿ ಸಾಧನೆಗೆ ರಾಜಕೀಯವಾಗಿ ಪಕ್ಷಪಾತದ ಸಾಧನವಾಗಲಿದೆ’ ಎಂದೂ ಹೇಳಿದ್ದಾರೆ.

ತರಕಾರಿಯಲ್ಲಿ ಮೂಡಿದ ಧ್ವಜ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪ್ರಮುಖ ಆಹಾರ ಮತ್ತು ಕೃಷಿ ತಂತ್ರಜ್ಞಾನ ಸಂಸ್ಥೆ ‘ವೇ ಕೂಲ್ ಫುಡ್ಸ್’ ವತಿಯಿಂದ ಸಮೀಪದ ಕನ್ನಮಂಗಲದ ವಿತರಣಾ ಕೇಂದ್ರದ ಬಳಿ 7,632 ಚದರಅಡಿಗಳಷ್ಟು ವಿಸ್ತಾರವಾದ ‘ಆಹಾರ ಧ್ವಜ’ ರಚಿಸಿದೆ.

ಭಾರತ ಅಗತ್ಯಕ್ಕಿಂತ ಹೆಚ್ಚು ಆಹಾರ ಉತ್ಪಾದಿಸುತ್ತಿರುವ ರಾಷ್ಟ್ರವಾಗಿ ಯಶಸ್ವಿಯಾಗಿ ಸ್ಥಿತ್ಯಂತರಗೊಂಡಿರುವ ಸಂಕೇತವಾಗಿ ಈ ಆಹಾರದ ಧ್ವಜ ರೂಪಿಸಲಾಗಿದೆ. ಇಂದು ಭಾರತ ಹಣ್ಣುಗಳು ಮತ್ತು ತರಕಾರಿಗಳ ಅತಿದೊಡ್ಡ ಉತ್ಪಾದನೆಯ ರಾಷ್ಟ್ರಗಳಲ್ಲಿ ಒಂದಾಗಿದೆ. ಧ್ವಜ ರಚನೆಯಲ್ಲಿ ಬಳಸಲಾಗುತ್ತಿರುವ ಹಣ್ಣುಗಳು ಮತ್ತು ತರಕಾರಿಗಳನ್ನು ಕಾರ್ಯಕ್ರಮದ ನಂತರ ಅಕ್ಷಯ ಪಾತ್ರ ಫೌಂಡೇಶನ್‌ಗೆ ನೀಡಲಾಯಿತು.

ಮನೆ, ಮನೆಯಲ್ಲಿ ತ್ರಿವರ್ಣ ಧ್ವಜದ ಅಭಿಯಾನದ ಭಾಗವಾಗಿ, ವೇ ಕೂಲ್ ಫುಡ್ಸ್ ಸಂಸ್ಥೆ ಭಾರತದಲ್ಲಿ ಬೆಳೆದ ತಾಜಾ ಉತ್ಪನ್ನಗಳಾದ ಗಜ್ಜರಿ, ಮೂಲಂಗಿ, ಹಸಿರು ಬೆಂಡೆಕಾಯಿ, ಬೀನ್ಸ್, ದಪ್ಪ-ಮೆಣಸಿನಕಾಯಿ ಮುಂತಾದವುಗಳ ಉತ್ತಮ ಆಯ್ಕೆಯೊಂದಿಗೆ ಧ್ವಜದ ತ್ರಿವರ್ಣಗಳನ್ನು ಯಶಸ್ವಿಯಾಗಿ ಮರುಸೃಷ್ಟಿಸಿದೆ.

ಧ್ವಜ ನಿರ್ಮಿಸಲು 20 ಟನ್‌ಗಳಿಗಿಂತ ಹೆಚ್ಚು ತಾಜಾ ಉತ್ಪನ್ನಗಳನ್ನು ಬಳಸಲಾಗಿತ್ತು. ಇದು ಭಾರತದ ಬಹುಮುಖಿ ವ್ಯಕ್ತಿತ್ವ ಮತ್ತು ಕೃಷಿ ಉತ್ಪನ್ನದ ವೈವಿಧ್ಯವನ್ನು ಪ್ರದರ್ಶಿಸುತ್ತದೆ, ಧ್ವಜಕ್ಕೆ ಕೇಸರಿ ಬಣ್ಣವನ್ನು ಗಜ್ಜರಿಗಳಿಂದ, ಮೂಲಂಗಿ ಮತ್ತು ಆಲೂಗಡ್ಡೆ ತುಂಡುಗಳಿಂದ ಬಿಳಿ ಬಣ್ಣವನ್ನು ರೂಪಿಸಲಾಯಿತು. ಕ್ಯಾಪ್ಸಿಕಂ, ಬೀನ್ಸ್ ಮತ್ತು ಬೆಂಡೆಕಾಯಿಗಳೊಂದಿಗೆ ಹಸಿರು ಬಣ್ಣವನ್ನು ರೂಪಿಸಲಾಗಿತ್ತು.



ವಿವಿಧ ತರಕಾರಿಗಳಿಂದ ತಯಾರಿಸಿರುವ ರಾಷ್ಟ್ರಧ್ವಜ

ಬಿಜೆಪಿಯಿಂದ ಇಂದು ಅಮೃತ ಭಾರತಿ

ಬೆಂಗಳೂರು: ಸ್ವಾತಂತ್ರ್ಯದ 75ನೇ ವರ್ಷದ ನಿಮಿತ್ತ ಕಂಠೀರವ ಕ್ರೀಡಾಂಗಣದಲ್ಲಿ ಸೋಮವಾರ ನಡೆಯುವ ‘ಅಮೃತ ಭಾರತಿಗೆ ಕರುನಾಡ ಜಾತ್ರೆ’ ಕಾರ್ಯಕ್ರಮದಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ತಿಳಿಸಿದ್ದಾರೆ.

ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದ ಅವರು, ಬೂತ್ ಮಟ್ಟದಿಂದ ನಗರದ ಮಟ್ಟದವರೆಗೆ ಹಾಗೂ ರಾಜ್ಯದ ರಾಜಧಾನಿಯವರೆಗೆ ಈ ಆಚರಣೆ ನಡೆಯಲಿದೆ. ಪ್ರಧಾನ ಕಾರ್ಯಕ್ರಮ ಕಂಠೀರವ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಈ ವೇಳೆ ಸ್ವಾತಂತ್ರ್ಯ ಹೋರಾಟಗಾರರನ್ನು ಸ್ಮರಿಸಲಾಗುವುದು. ಅವರ ವೀರಗಾಥೆ, ಶೌರ್ಯಕಥನವನ್ನು ತಿಳಿಸಲಾಗುವುದು ಎಂದರು.

ವಿಭಜನೆ ಘಟನೆಯ ಸ್ಮರಣೆ: ಛಾಯಾಚಿತ್ರ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಲ್ಲ ವಲಯಗಳಲ್ಲಿ ಜಾಗೃತಿ ಅಭಿಯಾನ ಹಾಗೂ ವಿಭಜನೆ ದುರಂತದ ಸ್ಮರಣೆಯ ಛಾಯಾಚಿತ್ರ ಪ್ರದರ್ಶನವನ್ನು ಭಾನುವಾರ ಆಯೋಜಿಸಲಾಗಿತ್ತು.

1947ರಲ್ಲಿ ಭಾರತ ಮತ್ತು ಪಾಕಿಸ್ತಾನ ವಿಭಜನೆಯಿಂದ ನೊಂದ ಲಕ್ಷಾಂತರ ಜನರ ಸಂಕಟ, ನೋವು ಮತ್ತು ನೋವನ್ನು ಬೆಳಕಿಗೆ ತರುವ ಸಲುವಾಗಿ ‘ವಿಭಜನೆಯ ದುರಂತದ ಸ್ಮರಣೆಯ ದಿನ’ ಆಯೋಜಿಸಲಾಗುತ್ತದೆ.

ಯಲಹಂಕ ವಲಯದ ಆರ್.ಎಂ.ಝಡ್ ಗ್ಯಾಲೆರಿಯಾ, ದಾಸರಹಳ್ಳಿ ವಲಯ ಶೆಟ್ಟಿಹಳ್ಳಿಯ ಶಿವಕುಮಾರ ಸ್ವಾಮೀಜಿ ಯೋಗಮಂದಿರ, ಬೊಮ್ಮನಹಳ್ಳಿ ವಲಯದ ಎಚ್.ಎಸ್.ಆರ್ ಬಿಡಿಎ ಕಾಂಪ್ಲೆಕ್ಸ್, ಮಹದೇವಪುರ ವಲಯದ ಫಿನಿಕ್ಸ್ ಮಾಲ್, ಆರ್.ಆರ್. ನಗರ ವಲಯ ಯಶವಂತಪುರದಲ್ಲಿನ ರಾಯಲ್ ಮಾರ್ಟ್ ಬಳಿ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು.

ಎಚ್.ಎಸ್.ಆರ್ ಬಿಡಿಎ ಕಾಂಪ್ಲೆಕ್ಸ್ ಬಳಿ ಏರ್ಪಡಿಸಿದ್ದ ಛಾಯಾಚಿತ್ರ ಪ್ರದರ್ಶನಕ್ಕೆ ಸುರಾನಾ ವಿದ್ಯಾಲಯದ ವಿದ್ಯಾರ್ಥಿಗಳು ಭೇಟಿ ನೀಡಿ ಛಾಯಾಚಿತ್ರ ಪ್ರದರ್ಶನವನ್ನು ವೀಕ್ಷಿಸಿದರು.

ಜಾಗೃತಿ ಜಾಥಾ: ಬಿಬಿಎಂಪಿಯ ಎಲ್ಲಾ ವಾರ್ಡ್‌ಗಳಲ್ಲಿ ಜಾಗೃತಿ ಜಾಥಾ ನಡೆಯಿತು. ಪೂರ್ವ ವಲಯದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 3 ಸಾವಿರ ವಿದ್ಯಾರ್ಥಿಗಳು ಮತ್ತು ಎಸ್.ಪಿ.ಸಿ, ಎನ್.ಎಸ್.ಎಸ್ ಮತ್ತು ಶಾಲಾ ಕಾಲೇಜು ಸಮವಸ್ತ್ರ 2 ಸಾವಿರ ಸೇರಿ 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳುಜಾಥಾದಲ್ಲಿ ಭಾಗವಹಿಸಿದ್ದರು.

ಕ್ಲೀವ್ ಲ್ಯಾಂಡ್ ಟೌನ್ ಬಿಬಿಎಂಪಿ ಶಿಕ್ಷಣ ಸಂಸ್ಥೆಗಳ ಆವರಣದಿಂದ ಪ್ರಾರಂಭವಾದ ಜಾಥಾ ಫ್ರೇಜರ್ ಟೌನ್‌ನ ಪ್ರಮುಖ ರಸ್ತೆಗಳಲ್ಲಿ ಸಾಗಿದ್ದು, ಬ್ಯಾಂಡ್ ಸೆಟ್, ತಮಟೆ ವಾದನ ಗಮನಸೆಳೆದವು. ರಾಜಾಜಿನಗರ, ಪದ್ಮನಾಭನಗರ ಸೇರಿದಂತೆ ಇನ್ನಿತರೆ ಪ್ರದೇಶಗಳಲ್ಲಿ ಸ್ವಚ್ಛತಾ ಅಭಿಯಾನ ನಡೆಯಿತು.



ಬಿಬಿಎಂಪಿ ಆಯೋಜಿಸಿದ್ದ ವಿಭಜನೆ ದುರಂತದ ಸ್ಮರಣೆ ಕುರಿತ ಛಾಯಾಚಿತ್ರ ಪ್ರದರ್ಶನ ವೀಕ್ಷಿಸಿದ ನಾಗರಿಕರು

‘ಭಾರತದ ಸಂವಿಧಾನ ಶ್ರೇಷ್ಠ’

ಬೆಂಗಳೂರು: ‘ಭಾರತದ ಸಂವಿಧಾನ ಶ್ರೇಷ್ಠವಾದದ್ದು. ಪ್ರಸ್ತುತ ಅಗತ್ಯ ಮತ್ತು ಭವಿಷ್ಯಕ್ಕೂ ಸಂವಿಧಾನದ ಆಶಯಗಳು ಪ್ರಸ್ತುತವಾಗಿವೆ’ ಎಂದು ಹಿರಿಯ ವಕೀಲ ವಿ.ಸುಧೀಶ್ ಪೈ ಹೇಳಿದರು.

ಸ್ವಾತಂತ್ರ್ಯೋತ್ಸವದ ಅಂಗವಾಗಿ ಸಾರ್ವಜನಿಕ ವ್ಯವಹಾರಗಳ ಕೇಂದ್ರವು (ಪಿಎಸಿ) ‘ಭಾರತದ ಸಂವಿಧಾನ: ಸಾಮಾಜಿಕ ಅನುಬಂಧ’ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

‘ಒಂದು ಬಾರಿ ರಚಿಸಿದ ಸಂವಿಧಾನ ಸುಮಾರು 19 ವರ್ಷ ಪ್ರಸ್ತುತವಾಗಿರುತ್ತದೆ. ಕೆಲವೇ ಸಂವಿಧಾನಗಳು 50 ವರ್ಷಗಳವರೆಗೆ ಅನ್ವಯವಾಗಿವೆ. ಆದರೆ, ಭಾರತ ಸಂವಿಧಾನ ಇಂದಿಗೂ ಮತ್ತು ಭವಿಷ್ಯದ ಅಗತ್ಯಕ್ಕೆ ತಕ್ಕಂತೆ ರೂಪಿಸಿರುವುದು ಶ್ಲಾಘನೀಯ’ ಎಂದರು.

ಎಂ.ಎಸ್.ರಾಮಯ್ಯ ಅಡ್ವಾನ್ಸ್ಡ್ ಲರ್ನಿಂಗ್ ಸೆಂಟರ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಂ.ಆರ್. ಶ್ರೀನಿವಾಸ ಮೂರ್ತಿ ಅವರು, ‘ಸಾಮಾಜಿಕ ಅಸಮಾನತೆ ತೊಡೆದುಹಾಕುವ ಯತ್ನಗಳು ನಡೆಯುತ್ತಿವೆ. ಆದರೆ, ಆರ್ಥಿಕ ಅಸಮಾನತೆ ಹೆಚ್ಚುತ್ತಿದೆ. ಆದಾಯದಲ್ಲಿ ಅಸಮಾನತೆ ಹೆಚ್ಚಿದರೆ ಅರಾಜಕತೆ ಸೃಷ್ಟಿಯಾಗಬಹುದು ಎಂದರು.

ಪಿಎಸಿ ಅಧ್ಯಕ್ಷ ಡಾ.ಎ.ರವೀಂದ್ರ, ‘ಐಟಿ ಫಾರ್ ಚೇಂಜ್’ನ ಅನಿತಾ ಗುರುಮೂರ್ತಿ, ತಕ್ಷಶೀಲಾ ಸಂಸ್ಥೆಯ ಪ್ರಣಯ್ ಕೋಟಸ್ಥಾನೆ ಇದ್ದರು.

ಭಾಗವಹಿಸುವವರಿಗೆ ಉಚಿತ ಮೆಟ್ರೊ ಪ್ರಯಾಣದ ವ್ಯವಸ್ಥೆ: ಡಿ.ಕೆ.ಶಿವಕುಮಾರ್

ಕಾಂಗ್ರೆಸ್ ‘ಸ್ವಾತಂತ್ರ್ಯ ನಡಿಗೆ’ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಅಂಗವಾಗಿ ಸೋಮವಾರ (ಆಗಸ್ಟ್ 15) ಹಮ್ಮಿಕೊಂಡಿರುವ ‘ಸ್ವಾತಂತ್ರ್ಯ ನಡಿಗೆ’ಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸುವ ನಿರೀಕ್ಷೆಯಿದೆ.

ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾರ್ವಜನಿಕರಿಗೆ ಪಕ್ಷದ ವತಿಯಿಂದ ಉಚಿತ ಮೆಟ್ರೊ ಪ್ರಯಾಣದ ವ್ಯವಸ್ಥೆ ಕಲ್ಪಿಸಲಾಗಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮೆಜೆಸ್ಟಿಕ್‌ನ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಮಧ್ಯಾಹ್ನ 2 ಗಂಟೆಗೆ ನಡಿಗೆ ಆರಂಭವಾಗಿ ಬಸವನಗುಡಿ ನ್ಯಾಷನಲ್ ಮೈದಾನದವರೆಗೆ (ಕೆ.ಆರ್.ವೃತ್ತ, ಟೌನ್‌ಹಾಲ್, ಮಿನರ್ವ ವೃತ್ತ ಮೂಲಕ) 7.5 ಕಿ.ಮೀ ಸಾಗಲಿದೆ. ಕಾರ್ಯಕ್ರಮ ಅನುಷ್ಠಾನ ಸಮಿತಿ ಅಧ್ಯಕ್ಷ ಜಿ.ಪರಮೇಶ್ವರ ನೇತೃತ್ವದಲ್ಲಿ ಸಿದ್ಧತೆ ಪೂರ್ಣಗೊಂಡಿದೆ.

75 ಸಾವಿರಕ್ಕೂ ಹೆಚ್ಚು ಜನರು ನಡಿಗೆಯಲ್ಲಿ ಹೆಜ್ಜೆ ಹಾಕಲು ನೋಂದಣಿ ಮಾಡಿಕೊಂಡಿದ್ದಾರೆ. ನಡಿಗೆಯಲ್ಲಿ ಹೆಜ್ಜೆ ಹಾಕುವ ಎಲ್ಲರಿಗೂ ಟಿ ಶರ್ಟ್, ಕ್ಯಾಪ್, ಕಿಟ್ ವಿತರಿಸಲು ಉದ್ದೇಶಿಸಲಾಗಿದೆ. ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಸಂಜೆ 6 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದ್ದು, ಯಾವುದೇ ರಾಜಕೀಯ ಭಾಷಣಕ್ಕೆ ಇರುವುದಿಲ್ಲ ಅವಕಾಶ. ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮಾತ್ರ ಸೀಮಿತವಾಗಲಿದ್ದು, ಹರಿಹರನ್, ಸಾಧುಕೋಕಿಲ ನೇತೃತ್ವದಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಮೆಟ್ರೊ ಟಿಕೆಟ್: ‘ನಾವು ಪಕ್ಷದ ವತಿಯಿಂದ ಮೆಟ್ರೊಗೆ ಹಣ ಪಾವತಿಸಿ ಟಿಕೆಟ್ ಖರೀದಿಸಿ ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಉಚಿತವಾಗಿ ನೀಡುತ್ತಿದ್ದೇವೆ. ಬೆಂಗಳೂರಿಗೆ ವಿವಿಧ ಭಾಗಗಳಿಂದ ಬರುವವರು ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ಬರಲು ಹಾಗೂ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಮುಕ್ತಾಯದ ನಂತರ ಹಿಂದಿರುಗಲು ಮೆಟ್ರೊ ಟಿಕೆಟ್ ವ್ಯವಸ್ಥೆ ಮಾಡಲಾಗಿದೆ’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

ಖಂಡನೀಯ: ‘ಸ್ವಾತಂತ್ರ್ಯ ಹೋರಾಟಗಾರ ಟಿಪ್ಪು ಸುಲ್ತಾನ್ ಅವರ ಕಟ್ ಔಟ್ ಅನ್ನು ಕಿಡಿಗೇಡಿಗಳು ನಾಶ ಮಾಡಿದ್ದಾರೆ. ಪೊಲೀಸರು ಇರುವಾಗಲೇ ಹರಿದಿದ್ದಾರೆ. ಈ ಬಗ್ಗೆ ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸಿದ್ದೇನೆ. ಕೃತ್ಯ ಯಾರು ಎಸಗಿದ್ದಾರೆ ಎನ್ನುವುದು ಗೊತ್ತಿದೆ. ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಹೇಳಿದರು.

‘ಪುರಾತತ್ವ ಇಲಾಖೆ ಅಡಿಯಲ್ಲಿ ಟಿಪ್ಪು ಸುಲ್ತಾನ್ ಅರಮನೆ ಇದೆ. ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ವಿಶೇಷ ಅಲಂಕಾರ ಮಾಡಲಾಗುತ್ತದೆ. ಆದರೂ ಇಂಥ ಘಟನೆಗಳು ನಡೆಯುತ್ತಿರುವುದು ನೋವು ತಂದಿದೆ’ ಎಂದರು.

ಟಿಪ್ಪು ಅವರ ಸ್ಮರಣೆ ಅಲ್ಪಸಂಖ್ಯಾತರ ಓಲೈಕೆ ಎಂಬ ಬಿಜೆಪಿ ಆರೋಪದ ಬಗ್ಗೆ ಕೇಳಿದ ಪ್ರಶ್ನೆಗೆ, ‘ಸ್ವಾತಂತ್ರ್ಯಕ್ಕಾಗಿ ಎಲ್ಲ ಸಮುದಾಯದವರೂ ಹೋರಾಟ ಮಾಡಿದ್ದಾರೆ. ಈ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಡುವ ವಿಚಾರ ಹೋರಾಟಗಾರರಲ್ಲಿ ಇತ್ತು, ಜಾತಿ ಧರ್ಮದ ವಿಚಾರ ಅಲ್ಲ’ ಎಂದರು.

ವಾಹನ ನಿಲುಗಡೆ ವ್ಯವಸ್ಥೆ

ಬೆಂಗಳೂರು: ‘ತುಮಕೂರು ರಸ್ತೆಯಿಂದ (ಬೆಳಗಾವಿ, ಬಾಗಲಕೋಟೆ, ಹಾವೇರಿ, ಬೀದರ್, ಹುಬ್ಬಳ್ಳಿ-ಧಾರವಾಡ, ಕೊಪ್ಪಳ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು, ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಚಿಕ್ಕಮಗಳೂರು, ಹಾಸನ, ಬಿಜಾಪುರ, ರಾಯಚೂರು, ವಿಜಯನಗರ, ಶಿವಮೊಗ್ಗ) ನಗರಕ್ಕೆ ಬರುವವರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದ (ಬಿಐಇಸಿ) ಆವರಣದಲ್ಲಿ ವಾಹನ ನಿಲುಗಡೆ ಮಾಡಬಹುದು. ನಾಗಸಂದ್ರ ಮೆಟ್ರೊ ನಿಲ್ದಾಣದಿಂದ ಮೆಜೆಸ್ಟಿಕ್ ಮೆಟ್ರೊ ನಿಲ್ದಾಣಕ್ಕೆ ಬಂದು ನಡಿಗೆಯಲ್ಲಿ ಪಾಲ್ಗೊಳ್ಳಬಹುದು’ ಎಂದು ಕಾಂಗ್ರೆಸ್ ಪ್ರಕಟಣೆ ತಿಳಿಸಿದೆ.

‘ಮೈಸೂರು ರಸ್ತೆಯಿಂದ (ರಾಮನಗರ, ಕೊಡಗು, ಮೈಸೂರು, ಚಾಮರಾಜನಗರ) ಬರುವವರು, ಕೆಂಗೇರಿ ಬಳಿಯ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಬಳಿ ವಾಹನ ನಿಲ್ಲಿಸಬಹುದು. ಅಲ್ಲಿಂದ ಮೆಜೆಸ್ಟಿಕ್‌ಗೆ ಮೆಟ್ರೊದಲ್ಲಿ ಬರಬಹುದು. ಕನಕಪುರ ರಸ್ತೆ ಮಾರ್ಗವಾಗಿ ಬರುವವರು ಕೋಣನಕುಂಟೆ ಮೆಟ್ರೊ ನಿಲ್ದಾಣದ ಮೂಲಕ ಮೆಜೆಸ್ಟಿಕ್ ತಲುಪಬಹುದು. ಕೆ.ಆರ್. ಪುರ ಕಡೆಯಿಂದ ಬರುವವರು ಐಟಿಐ ಮೈದಾನದಲ್ಲಿ ವಾಹನ ನಿಲ್ಲಿಸಿ, ಬೈಯಪ್ಪನಹಳ್ಳಿ ಮೆಟ್ರೊ ಮೂಲಕ ಬರಬಹುದು’ ಎಂದೂ ಹೇಳಿದೆ.

ನಗರದಲ್ಲಿ ಇಂದು

ಸ್ವಾತಂತ್ರ್ಯ ದಿನಾಚರಣೆ: ಉಪಸ್ಥಿತಿ: ಎಸ್.ಆರ್.ವಿಶ್ವನಾಥ್, ಎಂ.ಬಿ.ರಾಜೇಶ್‌ಗೌಡ, ಆಯೋಜನೆ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಸ್ಥಳ: ಬಿಡಿಎ ಕೇಂದ್ರ ಕಚೇರಿ, ಬೆಳಿಗ್ಗೆ 7.30

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ ಆಚರಣೆ: ಧ್ವಜಾರೋಹಣ: ನಿರ್ಮಲ್‌ಕುಮಾರ್.ಕೆ.ಆರ್., ಅತಿಥಿಗಳು: ಆರ್. ಪಾರ್ಥಸಾರಥಿ, ಉಪಸ್ಥಿತಿ: ಎನ್.ಎಸ್. ವಿಜಯ, ಆಯೋಜನೆ ಮತ್ತು ಸ್ಥಳ: ಭಾರತ್ ವಿದ್ಯಾ ಸಂಸ್ಥೆ, ಜಯನಗರ, ಬೆಳಿಗ್ಗೆ 8.30

ಸ್ವಾತಂತ್ರ್ಯ ದಿನಾಚರಣೆ: ಅತಿಥಿಗಳು: ಗೊ.ರು. ಚನ್ನಬಸಪ್ಪ, ಸಿ.ಆರ್. ಸಂಪತ್ ಕುಮಾರಿ, ವೈ.ಸಿ. ಕಮಲ, ಆಯೋಜನೆ: ನ್ಯಾಷನಲ್ ಕಾಲೇಜು, ಜಯನಗರ, ಬೆಳಿಗ್ಗೆ 8.30.

ಸ್ವಾತಂತ್ರ್ಯ ದಿನಾಚರಣೆ: ಅತಿಥಿಗಳು: ಎಚ್.ಎನ್.ನಾಗಮೋಹನ ದಾಸ್, ಅಧ್ಯಕ್ಷತೆ: ಎ.ಎಚ್. ರಾಮರಾವ್, ಆಯೋಜನೆ: ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಸ್ಥಳ: ನ್ಯಾಷನಲ್ ಹೈಸ್ಕೂಲ್ ಆಟದ ಮೈದಾನ, ಬೆಳಿಗ್ಗೆ 8.30

ಸ್ವಾತಂತ್ರ್ಯ ದಿನಾಚರಣೆ: ಧ್ವಜಾರೋಹಣ: ಎಸ್.ರಾಜೇಂದ್ರ ಪ್ರಸಾದ್, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಳಿಗ್ಗೆ 9

76ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ: ಧ್ವಜಾರೋಹಣ: ಕೊಂಡಜ್ಜಿ.ಬ. ಷಣ್ಮುಖಪ್ಪ, ಅತಿಥಿಗಳು: ಎಂ.ಎ.ಖಾಲಿದ್, ರಾಧಾ ವೆಂಕಟೇಶ್, ಚಿನ್ನಸ್ವಾಮಿ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕೇಂದ್ರ ಕಚೇರಿ, ಶಾಂತಿಗೃಹ ಅರಮನೆ ರಸ್ತೆ, ಬೆಳಿಗ್ಗೆ 9

76ನೇ ಸ್ವಾತಂತ್ರ್ಯೋತ್ಸವ ಸಮಾರಂಭ: ಧ್ವಜಾರೋಹಣ: ಡಿ.ವಿ.. ಶೈಲೇಂದ್ರ ಕುಮಾರ್, ಅಧ್ಯಕ್ಷತೆ: ಎಚ್. ಶರತ್‌ಚಂದ್ರ, ಆಯೋಜನೆ: ವಿಲ್ಸನ್ ಗಾರ್ಡನ್ ವಿದ್ಯಾ ಸಂಸ್ಥೆ, ಸ್ಥಳ: ಹೊಂಬೇಗೌಡನಗರದ ಕೆಂಪು ಮೈದಾನ, ಬೆಳಿಗ್ಗೆ 9.30

ಧ್ವಜಾರೋಹಣ ಹಾಗೂ 75 ಅಡಿ ವಿಸ್ತೀರ್ಣದ ಧ್ವಜ ಪ್ರದರ್ಶನ ಮತ್ತು ಮೆರವಣಿಗೆ: ಆಯೋಜನೆ ಮತ್ತು ಸ್ಥಳ: ಸಪ್ನಾ ಬುಕ್ ಹೌಸ್, ಗಾಂಧಿನಗರ, ಬೆಳಿಗ್ಗೆ 9.30

ಸ್ವಾತಂತ್ರ್ಯ ದಿನಾಚರಣೆ: ಧ್ವಜಾರೋಹಣ: ಎಂ.ಆರ್.ಸೀತಾರಾಮ್, ಆಯೋಜನೆ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬೆಳಿಗ್ಗೆ 9.30

ಸ್ವಾತಂತ್ರ್ಯದ ಅಮೃತ ಮಹೋತ್ಸವ: ಧ್ವಜಾರೋಹಣ: ಸುಧೀರ್ ಗಾದಿಯಾ, ಅಧ್ಯಕ್ಷತೆ: ರಂಜಿತ್ ಸೋಲಂಕಿ, ಆಯೋಜನೆ: ಮಾತೃಶ್ರೀ ಮನೋವಿಕಾಸ ಕೇಂದ್ರ, ಬುದ್ಧಿಮಾಂದ್ಯ ಮಕ್ಕಳ ವಸತಿ ವಿಶೇಷ ಶಾಲೆ, ಕುಮಾರಪಾರ್ಕ ರಸ್ತೆ, ಬೆಳಿಗ್ಗೆ 10

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ ಸ್ವಾತಂತ್ರ್ಯ ಮಹೋತ್ಸವ: ಮಾಲಾರ್ಪಣೆ: ಬಸವರಾಜ ಬೊಮ್ಮಾಯಿ, ಸಿದ್ದರಾಮಯ್ಯ, ಉಪಸ್ಥಿತಿ: ರಾಕೇಶ್‌ಸಿಂಗ್, ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ವಾಟಾಳ್ ನಾಗರಾಜ್, ಎಚ್.ಎಂ. ರೇವಣ್ಣ, ಆಯೋಜನೆ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನ, ಸ್ಥಳ: ದೇವರಾಜ ಅರಸು ವೃತ್ತ (ಖೋಡೆ ಸರ್ಕಲ್) ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣ ಎದುರು, ಬೆಳಿಗ್ಗೆ 10

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ: ಧ್ವಜಾರೋಹಣ: ಪ್ರಸನ್ನ ಹೆಗ್ಗೋಡು, ಚಾಲನೆ: ಸಿ.ಸೋಮಶೇಖರ್, ಕೃತಿಗಳ ಲೋಕಾರ್ಪಣೆ: ವೂಡೇ.ಪಿ.ಕೃಷ್ಣ, ಎಸ್.ಜಿ. ರವೀಂದ್ರ, ಆಯೋಜನೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಸ್ಥಳ: ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 8.30 ವೇದಿಕೆ ಕಾರ್ಯಕ್ರಮ ಬೆಳಿಗ್ಗೆ 10.30

‘ಸಂಪೂರ್ಣ ಸ್ವಾತಂತ್ರ್ಯದೆಡೆಗೆ ನಮ್ಮ ಜಾಗೃತಿ ನಡಿಗೆ’ ಸ್ವಾತಂತ್ರ್ಯ ದಿನಾಚರಣೆ ಅಮೃತೋತ್ಸವ ಸಭೆ: ಉದ್ಘಾಟನೆ: ಪ್ರಸನ್ನಾನಂದ ಸ್ವಾಮೀಜಿ, ಅಧ್ಯಕ್ಷತೆ: ಎಂ.ವೆಂಕಟಸ್ವಾಮಿ, ಗೊಲ್ಲಹಳ್ಳಿ ಶಿವಪ್ರಸಾದ್, ಪಾವಗಡ ಶ್ರೀರಾಮ್, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಸ್ಥಳ: ಫ್ರೀಡಂ ಪಾರ್ಕ್ ಮೈದಾನ, ಗಾಂಧಿನಗರ, ಬೆಳಿಗ್ಗೆ 11.30

ಸ್ವಾತಂತ್ರ್ಯ ದಿನಾಚರಣೆ: ಅತಿಥಿಗಳು: ಆರ್. ಮಂಜುನಾಥ್, ಆಯೋಜನೆ: ಸ್ಟೀಮ್ ಆಸ್ಪತ್ರೆ, ಸ್ಥಳ: ಕಮ್ಮಗೊಂಡನಹಳ್ಳಿ, 1ನೇ ಮುಖ್ಯರಸ್ತೆ, ಜಾಲಹಳ್ಳಿ ಪಶ್ಚಿಮ, ಬೆಳಿಗ್ಗೆ 11

ಸ್ವಾತಂತ್ರ್ಯ ದಿನಾಚರಣೆ: ಉದ್ಘಾಟನೆ: ವಿ.ಗೋಪಾಲಗೌಡ, ಅತಿಥಿಗಳು: ಸಂ.ಅಮಾನುಲ್ಲಾ ಖಾನ್, ಆಯೋಜನೆ: ವಿಮಾ ಕಾರ್ಪೊರೇಷನ್ ನೌಕರರ ಸಂಘ, ಸ್ಥಳ: ಪುರಭವನ, ಮಧ್ಯಾಹ್ನ 1.30

ಸ್ವಾತಂತ್ರ್ಯೋತ್ಸವ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿ: ಅಧ್ಯಕ್ಷತೆ: ವಿ.ಸೋಮಣ್ಣ, ಉಪನ್ಯಾಸ: ರಾಜಶೇಖರ ಮಠಪತಿ, ಉಪಸ್ಥಿತಿ: ಶೈಲಜಾ ಸೋಮಣ್ಣ, ಆಯೋಜನೆ: ವಿ.ಸೋಮಣ್ಣ ಪ್ರತಿಷ್ಠಾನ, ಸ್ಥಳ: ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ರೀಡಾಂಗಣ, ಮಾರೇನಹಳ್ಳಿ ಜಿ.ಕೆ.ಡಬ್ಲ್ಯು ಲೇಔಟ್, ಸಂಜೆ 4.30



ನಿತ್ಯಾ.ಪಿ.

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ನಿತ್ಯಾ.ಪಿ., ಆಯೋಜನೆ: ಶಿವಪ್ರಿಯಾ ನೃತ್ಯ ಶಾಲೆ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ವೈಯಾಲಿ ಕಾವಲ್, ಸಂಜೆ 5

‘ತಾಯಿ ಭಾರತಿಗೆ ಅಮೃತದಾರತಿ’ ದೇಶ ಭಕ್ತಿ ಗೀತೆಗಳ ಗಾಯನ: ಅತಿಥಿಗಳು: ನಾ.ದಾಮೋದರ್ ಶೆಟ್ಟಿ, ಸತೀಶ್ ಹಂಪಿಹೊಳ್ಳಿ, ಆಯೋಜನೆ: ಅಖಿಲ ಕರ್ನಾಟಕ ಸುಗಮ ಸಂಗೀತ ಸಂಸ್ಥೆಗಳ ಒಕ್ಕೂಟ, ಸ್ಥಳ: ಯೋಗ ಸಭಾಂಗಣ, ಆರ್.ಬಿ.ಐ ಲೇಔಟ್, ಸಂಜೆ 5.30

ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ದಾಮೋದರ ಮಾವಜೊ, ಗಿರೀಶ್ ಕಾಸರವಳ್ಳಿ, ಗುರುರಾಜ ದೇಶಪಾಂಡೆ, ಆಯೋಜನೆ: ಬುಕ್ ಬ್ರಹ್ಮ, ಸ್ಥಳ: ಪೂರ್ವಾಂಕರ ಸಭಾಂಗಣ, ಸುಚಿತ್ರ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬಿ.ವಿ. ಕಾರಂತ ರಸ್ತೆ ಬನಶಂಕರಿ, ಸಂಜೆ 4.30

ಬಾನ್ಸುರಿ ವಾದನ: ಪ್ರಸ್ತುತಿ: ಗೌರೀಶ್ ಅನಂತ ಹೆಗಡೆ, ತಬಲಾ: ವಿನಾಯಕ ಅನಂತ ಹೆಗಡೆ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ಮಹಾತ್ಮ ಗಾಂಧಿ ಉದ್ಯಾನ, ಭಾರತ್ ನಗರ, ಮಾಗಡಿ ಮುಖ್ಯರಸ್ತೆ, ಸಂಜೆ 5.30



ಗೌರೀಶ್ ಅನಂತ ಹೆಗಡೆ

ಮೈಕೊ ಶಿವಣ್ಣ ನೆನಪುಗಳು: ಅತಿಥಿಗಳು: ಆರ್.ಭೀಮಸೇನ್, ನಾಗತಿಹಳ್ಳಿ ಚಂದ್ರಶೇಖರ್, ಎಸ್.ಜಿ. ಸಿದ್ದರಾಮಯ್ಯ, ಎಲ್.ಎನ್.ಮುಕುಂದ್‌ರಾಜ್, ಸುರೇಶ್ ಆನಗಳ್ಳಿ, ಆಯೋಜನೆ: ರಂಗಚಂದಿರ ಹಾಗೂ ಸಮನ್ವಯ ಸಾಮಾಜಿಕ ಮತ್ತು ಸಾಂಸ್ಕೃತಿಕ ತಂಡಗಳು, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5


‘ರಂಗೋತ್ಸವ’ ಕ್ರಾಂತಿಕಾರಿ ಮತ್ತು ಪೌರಾಣಿಕ ನಾಟಕಗಳ ಪ್ರದರ್ಶನ: ರೊಟ್ಟಿ ಋಣ. ನಾಟಕ ನಿರ್ದೇಶನ: ವೆಂಕಟರಮಣಯ್ಯ.ಡಿ., ಸ್ಮಶಾನ ಕುರುಕ್ಷೇತ್ರಂ ನಾಟಕ ನಿರ್ದೇಶನ: ಎಚ್.ಎನ್. ಆನಂದಮೂರ್ತಿ, ಆಯೋಜನೆ: ನಾಟ್ಯ ಸರಸ್ವತಿ ಶಾಂತಲಾ ಕನ್ನಡ ಕಲಾ ಸಂಘ, ಸ್ಥಳ: ವೀರಾಂಜನೇಯಸ್ವಾಮಿ, ಬಸವೇಶ್ವರಸ್ವಾಮಿ ದೇವಸ್ಥಾನದ ಸನ್ನಿಧಿ, ಕೆ.ಜಿ. ಲಕ್ಕೇನಹಳ್ಳಿ, ಸಂಜೆ 6

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವ: ಅಧ್ಯಕ್ಷತೆ: ಸಿ.ಕೆ.ರವಿಚಂದ್ರ, ಆಯೋಜನೆ: ರಾಜ್ಯ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಬಾಗ್ ಪಶ್ಚಿಮ ದ್ವಾರದ ಬಳಿ,

‘ಅದೃಶ್ಯಂ’ ನಾಟಕ ಪ್ರದರ್ಶನ: **ಅಭಿನಯ:** ನಾರಾಯಣ ಭಟ್, ಮಂಜುಳಾ ನಾರಾಯಣ, ಸಂಗೀತ: ಪ್ರಮೋದ್ ಸಾಗರ್, ಬೆಳಕು: ಮಂಜುನಾಥ ಮಡಿಕೇರಿ, ಪ್ರಸಾಧನ: ರಾಮಕೃಷ್ಣ ಕನ್ನರಪಾಡಿ, ನಿರ್ದೇಶನ: ಎಸ್.ಎಲ್.ಎನ್. ಸ್ವಾಮಿ, ಆಯೋಜನೆ: ಯು.ಕೆ. ಆರ್ಟ್ಸ್ ಅ್ಯಂಡ್ ಕಲ್ಚರಲ್ ಟ್ರಸ್ಟ್, ಸ್ಥಳ: ಕೆ.ಎಚ್. ಕಲಾಸೌಧ ಹನುಮಂತನಗರ, ಮಧ್ಯಾಹ್ನ: 3.30 ಹಾಗೂ ಸಂಜೆ 6.30

‘ತ್ರಿರಾಗ’ ಸಂಗೀತ ಕಾರ್ಯಕ್ರಮ: ಗಾಯನ: ಮೈತಿಲಿ ಅನಂತರಾಮ್, ವೀಣೆ: ಗೀತಾ ನವಲೆ, ಆಯೋಜನೆ: ಕಲಾಪ್ರೇಮಿ ಫೌಂಡೇಷನ್, ಸ್ಥಳ: ಸೇವಾ ಸದನ ಸಭಾಂಗಣ, ಸಂಜೆ 6.30

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ನಾವು ನಮ್ಮ ತಪ್ಪುಗಳನ್ನು ಭೂತಗನ್ನಡಿಯಲ್ಲಿ ನೋಡಿಕೊಂಡು, ಇತರರ ತಪ್ಪುಗಳನ್ನು ದೂರದಿಂದ ನೋಡುವುದನ್ನು ರೂಢಿಸಿಕೊಂಡಾಗ ಮಾತ್ರ ಇಬ್ಬರ ತಪ್ಪಿನ ಬಗೆಗೂ ಸ್ಪಷ್ಟತೆ ಬರುತ್ತದೆ.

–ಮಹಾತ್ಮ ಗಾಂಧಿ

'ಅಮೃತ ಮಹೋತ್ಸವ' ಮಂಥನ ಸಂಭ್ರಮದ ಜೊತೆ ವಿವೇಕವೂ ಅಗತ್ಯ

ಸ್ವಾತಂತ್ರ್ಯದ 'ಅಮೃತ ಮಹೋತ್ಸವ' ಸಂದರ್ಭವು ದೇಶದ ಉದ್ದಗಲಕ್ಕೂ ಸಂಭ್ರಮದ ತರಂಗಗಳನ್ನು ಎಬ್ಬಿಸಿದೆ. ಪ್ರತಿವರ್ಷದ ಸ್ವಾತಂತ್ರ್ಯೋತ್ಸವ ಆಚರಣೆ ಸಾಮಾನ್ಯವಾಗಿ ಶಾಲೆ, ಕಾಲೇಜುಗಳು ಹಾಗೂ ಸರ್ಕಾರಿ ಕಚೇರಿಗಳಿಗೆ ಸೀಮಿತವಾಗಿರುತ್ತಿತ್ತು. ಅಮೃತ ಮಹೋತ್ಸವ ಸಂದರ್ಭದಲ್ಲಿ ಅದು ಜನಸಾಮಾನ್ಯರ ಸಂಭ್ರಮವಾಗಿಯೂ ರೂಪುಗೊಂಡಿದೆ; ಮನೆ ಮನೆಗಳಲ್ಲಿ ರಾಷ್ಟ್ರಧ್ವಜ ಹಾರುವ ಮೂಲಕ, ದೇಶಪ್ರೇಮದ ಅಭಿವ್ಯಕ್ತಿ ಹಾಗೂ ದೇಶದ ಸಮಗ್ರತೆಯ ಅನಾವರಣಕ್ಕೆ ಈ ವಿಶೇಷ ಸಂದರ್ಭ ಪ್ರೇರಣೆಯಾಗಿ ಪರಿಣಮಿಸಿದೆ. ಸ್ವಾತಂತ್ರ್ಯದ ಸಿದ್ಧಿಯ ಹಿಂದೆ ಲಕ್ಷಾಂತರ ಜನರ ತ್ಯಾಗ ಮತ್ತು ಬಲಿದಾನವಿದೆ. ಆ ಕಾರಣದಿಂದಾಗಿಯೇ, ಅಮೃತ ಮಹೋತ್ಸವ ಸಂದರ್ಭವನ್ನು ಸಂಭ್ರಮದ ಆಚರಣೆಯ ರೂಪದಲ್ಲಷ್ಟೇ ನೋಡುವುದು ಸಾಧ್ಯವಿಲ್ಲ. ಈ ಸಂದರ್ಭ, ತ್ಯಾಗ ಮತ್ತು ಬಲಿದಾನಗೈದವರ ಸ್ಮರಣೆಗೆ ಅವಕಾಶ ಕಲ್ಪಿಸಬೇಕು ಹಾಗೂ ಆ ಸ್ಮರಣೆ ನಾಗರಿಕರಲ್ಲಿ ಹೊಸ ಸ್ಫೂರ್ತಿಗೆ ಕಾರಣವಾಗಬೇಕು. ಸ್ವತಂತ್ರ ಭಾರತದ ಏಳೂವರೆ ದಶಕಗಳ ಪಯಣದಲ್ಲಿ ದೇಶ ಅಸಾಧಾರಣ ಸವಾಲುಗಳನ್ನು ಎದುರಿಸಿದೆ. ಆ ಸವಾಲುಗಳ ಅವಲೋಕನ ಮತ್ತು ಸಾಧನೆ–ಸಿದ್ಧಿಯ ವಿಶ್ಲೇಷಣೆಯೂ ಅಮೃತ ಮಹೋತ್ಸವ ಸಂದರ್ಭದಲ್ಲಿ ನಡೆಯಬೇಕು.



'ಅಮೃತಪ್ರಜ್ಞೆ' ನಮ್ಮೊಳಗೆ ಜಾಗೃತವಾಗಿದ್ದು, ರಾಜಕಾರಣಿಗಳಲ್ಲಿ ಆತ್ಮಾವಲೋಕನಕ್ಕೆ ಹಾಗೂ ಜನಸಾಮಾನ್ಯರಲ್ಲಿ ನಾಗರಿಕಪ್ರಜ್ಞೆಯ ಜಾಗೃತಿಗೆ ಪ್ರೇರಣೆ ನೀಡಬೇಕು

ಸ್ವಾತಂತ್ರ್ಯ ಸಂಭ್ರಮದ ಬೆನ್ನಿಗೇ ಎದುರಾದ ಭಾರತ ಮತ್ತು ಪಾಕಿಸ್ತಾನದ ವಿಭಜನೆ ಉಂಟುಮಾಡಿದ ಕಠಿಣ ಸವಾಲುಗಳನ್ನು ಎದುರಿಸುವುದರೊಂದಿಗೆ ಭಾರತದಲ್ಲಿ ಪ್ರಜಾಪ್ರಭುತ್ವದ ಶಕೆ ಆರಂಭವಾಯಿತು. ಧರ್ಮಾಧಾರಿತ ವಿಭಜನೆಯಷ್ಟೇ ಅಲ್ಲ; ಸಂಸ್ಕೃತಿ, ಭಾಷೆ ಮತ್ತು ಗಡಿ ಆಧಾರಿತವಾಗಿಯೂ ಸ್ವತಂತ್ರ ಭಾರತ ವಿಭಜಿತವಾಗಿತ್ತು. ಇವುಗಳೊಂದಿಗೆ ದೇಶದುದ್ದಗಲಕ್ಕೂ ಅಸ್ತಿತ್ವದಲ್ಲಿದ್ದ ಐದುನೂರಕ್ಕೂ ಹೆಚ್ಚು ರಾಜರ ಸಂಸ್ಥಾನಗಳನ್ನು ಒಕ್ಕೂಟ ವ್ಯವಸ್ಥೆಯಡಿ ತರುವ ದೊಡ್ಡ ಸವಾಲು ಪ್ರಜಾಪ್ರಭುತ್ವ ಸರ್ಕಾರದ ಎದುರಿಗಿತ್ತು. ಬಹುತ್ವ ಭಾರತದ ಎಲ್ಲ ಸಮುದಾಯದವರನ್ನೂ ಸಮಾನವಾಗಿ ನಡೆಸಿಕೊಳ್ಳುವ ಸಂವಿಧಾನವನ್ನು ರಚಿಸುವುದು ಕೂಡ ಬಹು ದೊಡ್ಡ ಕಸರತ್ತೇ ಆಗಿತ್ತು. ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಯಾವ ಕ್ಷಣದಲ್ಲಾದರೂ ಕುಸಿದುಬೀಳಬಹುದು ಎಂದು ದಿನಗಣನೆ ಮಾಡುತ್ತಿದ್ದ ವಿಶ್ವಸಮುದಾಯದ ಎದುರು ಸ್ವಂತಿಕೆಯಿಂದ ತಲೆಯೆತ್ತಿ ನಿಲ್ಲುವ ಸವಾಲೂ ಸರ್ಕಾರವನ್ನು ನಡೆಸುವವರ ಮುಂದಿತ್ತು. ಈ ಎಲ್ಲ ಆಡಳಿತಾತ್ಮಕ ಸವಾಲುಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸುವುದರ ಜೊತೆಗೆ, ಏರುತ್ತಿರುವ ಜನಸಂಖ್ಯೆ ಮತ್ತು ಆಹಾರ ಉತ್ಪಾದನೆಯ ಸಮತೋಲನ ಸಾಧಿಸಲು ನಡೆದ ಕೃಷಿಕ್ರಾಂತಿ, ದೇಶದ ಅಭಿವೃದ್ಧಿಯ ಬೆನ್ನೆಲುಬಿನ ರೂಪದಲ್ಲಿ ನಡೆದ ಕೈಗಾರಿಕಾ ಕ್ರಾಂತಿಯನ್ನು ಗಮನಿಸಬೇಕು. ಪ್ರತೀ ಚುನಾವಣೆಯೂ ದೇಶದ ಪ್ರಜಾಪ್ರಭುತ್ವವನ್ನು ಬಲಪಡಿಸಲು ಪೂರಕವಾಗಿರುವುದು ಕೂಡ ಸ್ವತಂತ್ರ ಭಾರತದ ಗಮನಾರ್ಹ ಸಾಧನೆಗಳಲ್ಲೊಂದು. ಹಲವು ಆತಂಕಗಳ ನಡುವೆಯೂ ಭಾರತದ ಪ್ರಜಾಪ್ರಭುತ್ವದ ಸೌಂದರ್ಯ, ಸಹಿಷ್ಣುತೆಯಂತಹ ಗುಣ ಹಾಗೂ ಪ್ರಬುದ್ಧತೆ ಕಳೆದ ಏಳೂವರೆ ದಶಕಗಳಲ್ಲಿ ಮತ್ತೆ ಮತ್ತೆ ಸಾಬೀತಾಗಿದೆ. ಸ್ವತಂತ್ರ ಭಾರತದ ಕುರಿತು ಹೆಮ್ಮೆ ಹಾಗೂ ಎಚ್ಚರ ಮೂಡಿಸುವಂತಿರುವ ಈ ಸಾಧನೆಗಳಲ್ಲಿ, ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ವಿವೇಕದ ಪಾತ್ರವೂ ಇರುವುದನ್ನು ಜನ ಮರೆಯಬಾರದು.

ಭಾರತಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಜೀವವನ್ನೇ ಮುಡಿಪಾಗಿಟ್ಟ ಸ್ವಾತಂತ್ರ್ಯ ಹೋರಾಟಗಾರರು ಕಂಡ ಕನಸುಗಳು, ಅವರ ಆಶೋತ್ತರಗಳು ಸ್ವತಂತ್ರ ಭಾರತದಲ್ಲಿ ಎಷ್ಟರ ಮಟ್ಟಿಗೆ ಸಾಕಾರಗೊಂಡಿವೆ ಎನ್ನುವ ಪ್ರಶ್ನೆಗೆ ದೊರೆಯುವ ಉತ್ತರಗಳು ಆಶಾದಾಯಕವಾಗಿಯೇನೂ ಇಲ್ಲ. 1947ರ ವಿಭಜನೆಯು ಬೇರೆ ಬೇರೆ ರೂಪಗಳಲ್ಲಿ ಅಮೃತ ಮಹೋತ್ಸವ ಸಂದರ್ಭದಲ್ಲೂ ಜೀವಂತವಾಗಿದೆ. ಕೋಮುಸೌಹಾರ್ದದ ನೆಲೆಗಟ್ಟಿನ ಮೇಲೆ ಸ್ವತಂತ್ರ ಭಾರತದ ಅಭಿವೃದ್ಧಿಯ ಸೌಧವನ್ನು ರೂಪಿಸುವ ಪ್ರಯತ್ನ ಮತ್ತೆ ಮತ್ತೆ ಹಿನ್ನಡೆ ಅನುಭವಿಸುತ್ತಿದೆ. ಸ್ವತಂತ್ರ ಭಾರತದ ಪರಿಕಲ್ಪನೆಗೆ ಗಾಸಿಯಾಗುತ್ತಿದೆ. ರಾಜಕಾರಣದಲ್ಲಿ ಅಧಿಕಾರಕ್ಕಾಗಿ ಧರ್ಮನಿರಪೇಕ್ಷತೆ ನೇಪಥ್ಯಕ್ಕೆ ಸರಿದು, ಕೋಮುದ್ವೇಷ ಮುನ್ನೆಲೆಗೆ ಬಂದಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಮತ್ತೆ ಮತ್ತೆ ಹಿನ್ನಡೆಯಾಗುತ್ತಿದೆ. ಕೇಂದ್ರ ಸರ್ಕಾರ 'ಮೇಕ್ ಇನ್ ಇಂಡಿಯಾ' ಮಂತ್ರ ಜಪಿಸುತ್ತಿದ್ದರೂ, ಗಾಂಧಿ ಹಂಬಲಿಸಿದ ಸ್ವರಾಜ್ಯ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿಲ್ಲ. ಸಂವಿಧಾನದ ಒತ್ತಾಸೆಯ ನಡುವೆಯೂ ಆರ್ಥಿಕ ಹಾಗೂ ಸಾಮಾಜಿಕ ತರತಮಗಳನ್ನು ಕೊನೆಗೊಳಿಸುವ ಪ್ರಯತ್ನಗಳು ಯಶಸ್ವಿಯಾಗಿಲ್ಲ. ಈ ವಿದ್ಯಮಾನಗಳು 'ಅಮೃತ ಮಹೋತ್ಸವ' ಸಂದರ್ಭದಲ್ಲಿ ನಮ್ಮನ್ನು ಚಿಂತನೆಗೆ ಹಚ್ಚಬೇಕು. ಸ್ವತಂತ್ರ ಭಾರತಕ್ಕೆ ಎಪ್ಪತ್ತೈದು ವರ್ಷಗಳು ತುಂಬಿದ ಸಂದರ್ಭವು ಕೆಲವು ದಿನಗಳ ಆಚರಣೆಗೆ ಅಥವಾ ಮನೆ ಮನೆಗಳಲ್ಲಿ ಧ್ವಜಾರೋಹಣ ಮಾಡುವುದಕ್ಕೆ ಸೀಮಿತಗೊಳ್ಳಬಾರದು. 'ಅಮೃತಪ್ರಜ್ಞೆ' ನಮ್ಮೊಳಗೆ ಜಾಗೃತವಾಗಿರಬೇಕು. ಸ್ವಾತಂತ್ರ್ಯ ಚಳವಳಿಯ ಪ್ರಮುಖ ಫಲಾನುಭವಿಗಳಾದ ರಾಜಕಾರಣಿಗಳಲ್ಲಿ, ತ್ಯಾಗ–ಬಲಿದಾನದ ಪರಂಪರೆ ತಮ್ಮ ಮಾತು–ಕೃತಿಯಲ್ಲಿ ಎಷ್ಟರಮಟ್ಟಿಗೆ ಅನುಷ್ಠಾನದಲ್ಲಿದೆ ಎನ್ನುವ ಆತ್ಮಾವಲೋಕನಕ್ಕೆ ಹಾಗೂ ಜನಸಾಮಾನ್ಯರಲ್ಲಿ ನಾಗರಿಕಪ್ರಜ್ಞೆಯ ಜಾಗೃತಿಗೆ ಪ್ರೇರಣೆ ದೊರೆತಲ್ಲಿ, 'ಅಮೃತ ಮಹೋತ್ಸವ' ಆಚರಣೆ ಸಾರ್ಥಕವಾಗುತ್ತದೆ.

ದಿನದ ಟ್ವೀಟ್

ದಿಟ್ಟತನಕ್ಕೆ ಮಾದರಿ



ಸಲ್ಮಾನ್ ರಶ್ದಿ ದಿಟ್ಟತನದಿಂದ ಬಾಳ್ವೆ ನಡೆಸಿದ್ದಾರೆ. ತಮ್ಮನ್ನು, ತಮ್ಮ ಕಲೆಯನ್ನು ಹಾಗೂ ತಮ್ಮ ನಿಲುವುಗಳನ್ನು ಬೆದರಿಸಿ ಸುಮ್ಮನಾಗಿಸಲು ಆಸ್ಪದ ಕೊಟ್ಟಿಲ್ಲ. ನನ್ನ ಚಿಂತನೆಗಳಲ್ಲಿ ಅವರು ಇದ್ದಾರೆ. ಅವರ ಚೇತರಿಕೆಗಾಗಿ ಪ್ರಾರ್ಥಿಸುತ್ತೇನೆ.

ಬಿಲ್ ಕ್ಲಿಂಟನ್, ಅಮೆರಿಕದ ಮಾಜಿ ಅಧ್ಯಕ್ಷ

ಕಿಡಿನುಡಿ



ಡಾ. ಅಂಬೇಡ್ಕರ್ 1900ರಲ್ಲಿ ಹೀಗೆ ಹೇಳಿದ್ದರು- 'ಶಾಲೆಯಲ್ಲಿ ನಾನು ನಲ್ಲಿಯನ್ನು ಮುಟ್ಟಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಸವರ್ಣೀಯ ವ್ಯಕ್ತಿಯೊಬ್ಬ ನಲ್ಲಿ ತಿರುಗಿಸದ ಹೊರತು, ನನ್ನ ಬಾಯಾರಿಕೆಯನ್ನು ತಣಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ'.

2022ರಲ್ಲಿ, ರಾಜಸ್ಥಾನದಲ್ಲಿ ಪ್ರಬಲ ಜಾತಿಗೆ ಸೇರಿದ ಶಿಕ್ಷಕರೊಬ್ಬರು ತಮ್ಮ ಮಡಕೆಯಿಂದ ನೀರು ಕುಡಿದನೆಂಬ ಕಾರಣಕ್ಕೆ ಪರಿಶಿಷ್ಟ ಸಮುದಾಯದ ಬಾಲಕನೊಬ್ಬನ ಕೊಲೆಯನ್ನೇ ಮಾಡಿದ್ದಾರೆ.

ಅನುರಾಗ್ ಭಾಸ್ಕರ್, ಸಹಾಯಕ ಪ್ರಾಧ್ಯಾಪಕ

25 ವರ್ಷಗಳ ಹಿಂದೆ

ಶುಕ್ರವಾರ, 15-8-1997

• ಭ್ರಷ್ಟಾಚಾರದ ವಿರುದ್ಧ ಹೋರಾಡಲು ರಾಷ್ಟ್ರಪತಿ ಕರೆ

ನವದೆಹಲಿ, ಆಗಸ್ಟ್ 14– ಭ್ರಷ್ಟಾಚಾರ, ಕೋಮುವಾದ, ಜಾತೀಯತೆ ಮತ್ತು ರಾಜಕೀಯದಲ್ಲಿನ ಅಪರಾಧೀಕರಣದ ವಿರುದ್ಧ ಹೋರಾಡಲು ಮುಂದಾಗಬೇಕು ಎಂದು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಇಂದು ರಾಷ್ಟ್ರದ ಜನತೆಗೆ ಕರೆ ನೀಡಿದರು.

ಐವತ್ತು ವರ್ಷಗಳಲ್ಲಿ ಅನೇಕ ವೈಫಲ್ಯಗಳ ನಡುವೆ ಅಪಾರ ಸಾಧನೆಯನ್ನು ಮಾಡಿಕೊಂಡು, ರಾಷ್ಟ್ರದ ಏಕತೆಯನ್ನು ಕಾಪಾಡಿಕೊಂಡು ಬಂದಿದ್ದರೂ, ಭ್ರಷ್ಟಾಚಾರ ಎಂಬುದು ನಮ್ಮ ರಾಜಕೀಯ ಮತ್ತು ಸಮಾಜವನ್ನು ತಿಂದು ಹಾಕುತ್ತಿದೆ. ಆದ್ದರಿಂದ ಅದರ ವಿರುದ್ಧ ಹೋರಾಟ ಮಾಡಬೇಕೆಂದು ಅವರು ಹೇಳಿದರು.

• ಮಧ್ಯರಾತ್ರಿ ಮೊಳಗಿದ ಗಾಂಧಿವಾಣಿ

ನವದೆಹಲಿ, ಆಗಸ್ಟ್ 14– ಮಧ್ಯರಾತ್ರಿ 12 ಗಂಟೆಯಲ್ಲಿ ಸಂಸತ್ತಿನ ಸೆಂಟ್ರಲ್ ಹಾಲ್‌ನಲ್ಲಿ ಚರಿತ್ರೆಯ ಪುನರಾವರ್ತನೆ. ಐವತ್ತು ವರ್ಷಗಳ ಹಿಂದೆ ಬ್ರಿಟಿಷರ ಕಪಿಮುಷ್ಟಿಯಿಂದ ದೇಶವನ್ನು ಸ್ವತಂತ್ರಗೊಳಿಸಿದ ರಾಷ್ಟ್ರಪಿತ ಗಾಂಧೀಜಿ, ನೆಹರೂ ಹಾಗೂ ಸುಭಾಷ್ ಚಂದ್ರ ಬೋಸ್ ಅವರ ವೀರವಾಣಿ ಮತ್ತೆ ಮೊಳಗಿತು.

ಈ ಅವಿಸ್ಮರಣೀಯ ಗಳಿಗೆ ಇಡೀ ಸೆಂಟ್ರಲ್ ಹಾಲ್‌ನಲ್ಲಿ ನೆರೆದಿದ್ದ ಸದಸ್ಯರನ್ನು ಪುಳಕಿತಗೊಳಿಸಿತು. ಸುವರ್ಣ ಸ್ವಾತಂತ್ರ್ಯೋತ್ಸವಕ್ಕೆ ಈ ಮಹಾನ್ ನಾಯಕರ ಸ್ಫೂರ್ತಿಯುತ ಭಾಷಣವೇ ನಾಂದಿಯಾಯಿತು.

50 ವರ್ಷಗಳ ಹಿಂದೆ

ಮಂಗಳವಾರ, 15-8-1972

• ಬಡತನ ನಿವಾರಣೆಗಾಗಿ ಸಮ್ಮಿಳಿತ ಯತ್ನಕ್ಕೆ ರಾಷ್ಟ್ರಪತಿ ಗಿರಿ ಕರೆ

ನವದೆಹಲಿ, ಆಗಸ್ಟ್ 14– ಬಡತನ ಸಮಸ್ಯೆ ಎದುರಿಸುವುದರಲ್ಲಿ ಯುದ್ಧಕಾಲದ ಚಟುವಟಿಕೆಗಳಿಂದ ವಿವೇಚಿತ ಮತ್ತು ಸಂಯುಕ್ತ ಪ್ರಯತ್ನ ನಡೆಸಬೇಕೆಂದು ರಾಷ್ಟ್ರಪತಿ ವಿ.ವಿ. ಗಿರಿ ಅವರು ರಾಷ್ಟ್ರದ ಪ್ರತೀ ವ್ಯಕ್ತಿಗೂ ಕರೆ ನೀಡಿದರು.

ಇಂದು ಮಧ್ಯರಾತ್ರಿ 12 ಗಂಟೆಗೆ ಸ್ವಲ್ಪ ಮುಂಚೆ ಚರಿತ್ರಾರ್ಹ ಪಾರ್ಲಿಮೆಂಟ್ ಕೇಂದ್ರ ಭವನದಿಂದ ಸ್ವಾತಂತ್ರ್ಯೋತ್ಸವ ಬೆಳ್ಳಿಹಬ್ಬದ ಸಂದೇಶ ನೀಡಿದ ರಾಷ್ಟ್ರಪತಿಗಳು, ಆದಷ್ಟು ಎಚ್ಚರಿಕೆಯಿಂದಲೂ ಮತ್ತು ಆದಷ್ಟು ಸರಳ ವಿಧಾನಗಳಿಂದಲೂ ಬಡತನ ಹತ್ತಿಕ್ಕುವ ಅಗಾಧ ಹೊಣೆ ನಿರ್ವಹಿಸಬೇಕೆಂದು ಹೇಳಿದರು.

ಇತಿಹಾಸದ ನೆನಪಿನಲ್ಲಿ ಭವಿಷ್ಯಕ್ಕೆ ಸಜ್ಜಾಗುವುದು ಸ್ವಾತಂತ್ರ್ಯ ಸಂಭ್ರಮದ ಉದ್ದೇಶ

ಅಭಿಯಾನವಾದ ಮಹೋತ್ಸವ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ಭಾರತವು ರಾಜಕೀಯ ಸ್ವಾತಂತ್ರ್ಯ ಪಡೆದುಕೊಂಡು 75 ವರ್ಷಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ದೇಶದೆಲ್ಲೆಡೆ ಹಬ್ಬದ ಸಂಭ್ರಮ ಮನೆ ಮಾಡಿದೆ. ವರ್ಷವಿಡೀ ವಿವಿಧ ಕಾರ್ಯಕ್ರಮಗಳನ್ನು ನಡೆಸಿ ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸಲಾಗಿದೆ. 'ಪ್ರತೀ ಮನೆಗೂ ತ್ರಿವರ್ಣ ಧ್ವಜ' ಅಭಿಯಾನದ ಮೂಲಕ ಕಳೆದ ಎರಡು ವಾರಗಳಲ್ಲಿ ಹಬ್ಬದ ಸಂಭ್ರಮವು ಶಿಖರ ತಲುಪಿದೆ. ಈ ಮಹತ್ವಪೂರ್ಣ ಮೈಲಿಗಲ್ಲನ್ನು 'ಜನ ಅಭಿಯಾನ'ವಾಗಿ ಪರಿವರ್ತಿಸುವ ಪ್ರಯತ್ನ ಮಾಡಲಾಗಿದೆ. ನಮ್ಮ ವರ್ತಮಾನದ ಸಂದರ್ಭದಲ್ಲಿ ಇತಿಹಾಸವನ್ನು ನೆನಪಿಸಿಕೊಂಡು ಭವಿಷ್ಯಕ್ಕೆ ಸಿದ್ಧರಾಗುವುದೇ ಈ ಚಾರಿತ್ರಿಕ ಮತ್ತು ಸ್ಮರಣೀಯ ಕ್ಷಣಗಳ ಸುತ್ತಲೂ ಇರುವ ಸಂಭ್ರಮದ ಉದ್ದೇಶವಾಗಿದೆ.

ಮಹತ್ವದ ದಿನಗಳು ಇತಿಹಾಸದ ಪ್ರಮುಖ ಘಟನೆಗಳನ್ನು ಸ್ಮರಿಸಲು ಅಥವಾ ಸಂಭ್ರಮಿಸಲು ಸದಾ ಅವಕಾಶ ಕೊಡುತ್ತವೆ. ಗಣರಾಜ್ಯ ದಿನ ಮತ್ತು ಸ್ವಾತಂತ್ರ್ಯ ದಿನವು ರಾಷ್ಟ್ರೀಯ ಸಂಭ್ರಮದ ಕ್ಷಣಗಳು. ಈ ವರ್ಷದ ಸ್ವಾತಂತ್ರ್ಯ ದಿನವು ಎಂದಿಗಿಂತಲೂ ಭಿನ್ನ. ಈ ಬಾರಿಯ ಸ್ವಾತಂತ್ರ್ಯ ದಿನವು ಅಮೃತ ಮಹೋತ್ಸವವಾಗಿರುವುದರಿಂದ, ಔಪಚಾರಿಕ ಆಚರಣೆಯ ಬದಲು ಸುಯೋಜಿತ ಪ್ರಕ್ರಿಯೆಯನ್ನಾಗಿ ರೂಪಿಸಲಾಗಿದೆ. ಸರ್ಕಾರದ ಸಂಸ್ಥೆಗಳು, ಖಾಸಗಿ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಮುದ್ರಣ, ವಿದ್ಯುನ್ಮಾನ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳು ಸಾಮೂಹಿಕವಾಗಿ ಮತ್ತು ಸ್ವತಂತ್ರವಾಗಿ ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮವನ್ನು ಅಭಿಯಾನವಾಗಿ ಆಚರಿಸುತ್ತಿವೆ. ಚಾರಿತ್ರಿಕ ಘಟನೆಯೊಂದರ ಸೂಕ್ಷ್ಮವಾದ ಮತ್ತು ಮಹತ್ವದ್ದಾದ ಆಚರಣೆಯು ಗಣನೀಯವಾದ ಪರಿಣಾಮಗಳನ್ನು ಹೊಂದಿದೆ.

ಇತಿಹಾಸ, ವರ್ತಮಾನ ಮತ್ತು ಭವಿಷ್ಯ: ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮವು ಏಕೆ ಮಹತ್ವದ್ದಾಗಿದೆ? 2011ರ ಜನಗಣತಿಯ ಆಧಾರದಲ್ಲಿ ಲೆಕ್ಕ ಹಾಕಿದರೆ ಈಗ ನಮ್ಮಲ್ಲಿ ಇರುವವರಲ್ಲಿ ಶೇಕಡ 2ರಷ್ಟಕ್ಕಿಂತ ಕಡಿಮೆ ಜನರು ಮಾತ್ರ ಸ್ವಾತಂತ್ರ್ಯ ಸಿಗುವ ಮೊದಲು ಜನಿಸಿದವರು. ಆರು ಜನರಲ್ಲಿ ಒಬ್ಬರು (ಶೇ 15ರಷ್ಟು) ಸ್ವಾತಂತ್ರ್ಯ ಬಂದ ಬಳಿಕದ ಮೊದಲ ಕಾಲು ಶತಮಾನದಲ್ಲಿ ಜನಿಸಿದವರು (1947ರಿಂದ 1972). ಮೂರನೇ ಒಂದರಷ್ಟು ಜನರು (ಶೇ 34ರಷ್ಟು) ಸ್ವಾತಂತ್ರ್ಯದ 25 ಮತ್ತು 50ನೇ ವರ್ಷದ ಸಂಭ್ರಮಾಚರಣೆ ನಡುವೆ ಜನಿಸಿದವರು (1972ರಿಂದ 1997). ಸುಮಾರು ಅರ್ಧ ಭಾಗದಷ್ಟು ಜನರು (ಶೇ 49ರಷ್ಟು) ಕೊನೆಯ 25 ವರ್ಷಗಳಲ್ಲಿ ಜನಿಸಿದವರು.

ಈಗಿನ ಜನಸಂಖ್ಯೆಯಲ್ಲಿ ಶೇ 98ರಷ್ಟು ಜನರು ಸ್ವಾತಂತ್ರ್ಯ ಬಂದ ನಂತರವೇ ಜನಿಸಿದವರು ಎಂಬುದು ಸ್ವಾತಂತ್ರ್ಯದ 75ನೇ ವರ್ಷಾಚರಣೆಯನ್ನು ಬಹಳ ಮಹತ್ವದ್ದಾಗಿಸಿದೆ. 1947ರಿಂದ 1972ರ ನಡುವೆ ಜನಿಸಿದವರು ಪಲ್ಲಟದ ಕ್ಷಣಗಳಿಗೆ ಸಾಕ್ಷಿಗಳಾಗಿದ್ದ ತಮ್ಮ ಹೆತ್ತವರು ಮತ್ತು ತಾತಂದಿರ ಬಾಯಿಯಿಂದ ಸ್ವಾತಂತ್ರ್ಯ ಹೋರಾಟದ ಸಂಕಷ್ಟದ ಕತೆಗಳನ್ನು ಕೇಳಿಸಿಕೊಂಡಿದ್ದಾರೆ. 1972ರ ನಂತರ ಜನಿಸಿದವರು, ಸ್ವಾತಂತ್ರ್ಯ ಹೋರಾಟಕ್ಕೆ ಸಾಕ್ಷಿಗಳಾಗಿದ್ದ ತಮ್ಮ ತಾತಂದಿರಿಂದ ಸ್ವಾತಂತ್ರ್ಯ ಹೋರಾಟದ ಕತೆಗಳನ್ನು ಕೇಳಿಸಿಕೊಂಡಿದ್ದಾರೆ. ತಲೆಮಾರುಗಳು ಕಳೆದಂತೆಲ್ಲ ನಮ್ಮ ಮನೆಗಳಲ್ಲಿನ ಇಂತಹ ಕಥನಗಳನ್ನು ಮೌಖಿಕವಾಗಿ ಕೇಳುವುದು ಕಡಿಮೆಯಾಯಿತು ಮತ್ತು ಅವುಗಳಲ್ಲಿ ಇದ್ದ ವೈಯಕ್ತಿಕ ಆಪ್ತತೆಯೂ ಕಡಿಮೆಯಾಯಿತು. ಸ್ವಾತಂತ್ರ್ಯ ಸಿಕ್ಕ ಬಳಿಕ ಜನಿಸಿದ ತಲೆಮಾರುಗಳ ಜನರು ಇತಿಹಾಸದ ನಂಟಿನೊಂದಿಗೆ ವರ್ತಮಾನದ ಕುರಿತು ಚಿಂತಿಸಿ, ಭವಿಷ್ಯಕ್ಕೆ ಸಜ್ಜಾಗಲು ಸ್ವಾತಂತ್ರ್ಯದ ಅಮೃತ ಮಹೋತ್ಸವವು ಅವಕಾಶ ಒದಗಿಸಿಕೊಟ್ಟಿದೆ.

ಬಹುತ್ವಕ್ಕೆ ಪ್ರಾತಿನಿಧ್ಯ: ಸ್ವಾತಂತ್ರ್ಯದ 75ನೇ ವರ್ಷದ ಆಚರಣೆಯು 'ಅದ್ದೂರಿ ಸಂಭ್ರಮದ ಕ್ಷಣ'ವಷ್ಟೇ ಆಗದೆ 'ಚಿಂತನೆಗೆ ಪ್ರೇರಣೆ ನೀಡುವ ಪ್ರಕ್ರಿಯೆ'ಯಾಗಿ ಅದನ್ನು ಪರಿವರ್ತಿಸುವುದಕ್ಕಾಗಿ ಸ್ವಾತಂತ್ರ್ಯ ಚಳವಳಿಯ ವೈವಿಧ್ಯಮಯ ಆಯಾಮಗಳನ್ನು ಕಟ್ಟಿಕೊಡುವುದಕ್ಕೆ ಬಹಳ ಮಹತ್ವ ಇದೆ. ಸ್ವಾತಂತ್ರ್ಯ ಚಳವಳಿಯ ಕೇಂದ್ರದಲ್ಲಿ ಏನಿತ್ತು ಎಂಬುದರ ಅಭಿವ್ಯಕ್ತಿಯು ಸ್ವಾತಂತ್ರ್ಯ ಹೋರಾಟದ ಬಗೆಗಿನ ನಮ್ಮ ಸಾಮೂಹಿಕ ಕಲ್ಪನೆಯಾಗಿ ಬಿಂಬಿತವಾಗಬೇಕೇ ಹೊರತು 'ನನ್ನ' ಅಥವಾ 'ನಿಮ್ಮ/ಅವರ' ಕಲ್ಪನೆಯಾಗಿ ಅಲ್ಲ. ಈ ಬಹುತ್ವದ ಧ್ವನಿಗಳಲ್ಲಿಯೇ ನಮ್ಮ ಸ್ವಾತಂತ್ರ್ಯ ಹೋರಾಟದ ಸಮೃದ್ಧಿಯೂ ಸ್ವತಂತ್ರ ಭಾರತದ ಕಳೆದ 75 ವರ್ಷಗಳ ಪಯಣವೂ ಅಡಗಿದೆ.

ನಮ್ಮ ಇತಿಹಾಸದ ಪಠ್ಯಗಳಲ್ಲಿ ದಾಖಲಾಗದ, ದಿಟ್ಟ ಸ್ವಾತಂತ್ರ್ಯ ಹೋರಾಟಗಾರರ ಕಥನಗಳಿಗೆ ಒತ್ತು ನೀಡುವುದು ಈ ದಿಸೆಯಲ್ಲಿ ಮುಖ್ಯವಾದುದು. ವಸಾಹತುಶಾಹಿ ಆಳ್ವಿಕೆಯ ವಿರುದ್ಧದ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಿದ, ಆದರೆ ರಾಜಕೀಯ ಬಣ್ಣ ಪಡೆದುಕೊಂಡಿರದ ಸಾಮಾಜಿಕ–ಸಾಂಸ್ಕೃತಿಕ ಚಳವಳಿಗಳ ಕಡೆಯೂ ಗಮನಹರಿಸಿ, ಬಹುತ್ವವನ್ನು ಕಟ್ಟಿಕೊಡಬೇಕಿದೆ.

ಎಲ್ಲ ರಾಜಕೀಯ ಧಾರೆಗಳು, ಸಾಮಾಜಿಕ ದೃಷ್ಟಿಕೋನಗಳು, ಆರ್ಥಿಕ ನಿಲುವುಗಳು, ಸಾಂಸ್ಕೃತಿಕ ವೈವಿಧ್ಯಗಳಿಗೆ ಹಲವು ಶಿಕ್ಷಣ ಮತ್ತು ಸಾಮಾಜಿಕ ಸಂಸ್ಥೆಗಳು ತಮ್ಮ ಅಮೃತ ಮಹೋತ್ಸವದ ಸಂಭ್ರಮಾಚರಣೆಯಲ್ಲಿ ನ್ಯಾಯಯುತ ಒತ್ತು ನೀಡಿವೆ. ವಿವಿಧ ಭಾಗಗಳ ಇಂತಹ ಪ್ರಾಮಾಣಿಕ ಧ್ವನಿಗಳು ದೇಶದೆಲ್ಲೆಡೆ ಅನುರಣಿಸಿದವು. ದೇಶವು ನಿಜವಾಗಿಯೂ ಪ್ರತಿನಿಧಿಸುತ್ತಿರುವ 'ವಿಶ್ವಾಸಾರ್ಹತೆ, ವೈವಿಧ್ಯ ಮತ್ತು ಬಹುತ್ವ'ದ ವಿಸ್ತಾರ ನೋಟವನ್ನು ಇದು ಯುವ ತಲೆಮಾರಿಗೆ ನೀಡಿದೆ. ಬಹುತ್ವದ ಈ ರೀತಿಯ ಪ್ರಾತಿನಿಧ್ಯವು ಹೆಚ್ಚು ವ್ಯಾಪಕವೂ ಹೆಚ್ಚು ಸುಸ್ಥಿರವೂ ಆಗಬೇಕು ಎಂಬ ಬಯಕೆ ವ್ಯಕ್ತವಾಗಿದೆ.

ಭಾರತವು 21ನೇ ಶತಮಾನದ ಭಾರತಕ್ಕಾಗಿ ಸ್ವಾತಂತ್ರ್ಯದ ಸಂಭ್ರಮಾಚರಣೆ ನಡೆಸುತ್ತಿದೆ; ಇಂತಹ ಆಚರಣೆಯು, ಸ್ವಾತಂತ್ರ್ಯ ಪಡೆದ 50 ವರ್ಷಗಳ ಬಳಿಕ ಹುಟ್ಟಿದವರಿಗೆ ಇತಿಹಾಸದ ದರ್ಶನ ಮಾಡಿಸುತ್ತದೆ (ಈ ವರ್ಗವೇ ದೇಶದ ಜನಸಂಖ್ಯೆಯ ಅರ್ಧದಷ್ಟಿದೆ). ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಹೊಸ ಮತ್ತು ಸೃಜನಶೀಲ ವಿಧಾನಗಳಿಗೆ ಮುನ್ನುಡಿ ಬರೆದಿದೆ. ಎನ್‌ಇಪಿ–2020 ಅನ್ನು ಸೃಜನಶೀಲವಾಗಿ ಮತ್ತು ಆವಿಷ್ಕಾರಕವಾಗಿ (ಯಾಂತ್ರಿಕವಾಗಿ ಅಲ್ಲದೆ) ಅನುಷ್ಠಾನಕ್ಕೆ ತರುವುದು ನಮ್ಮ ಮುಂದಿರುವ ಸವಾಲು. ಅಮೃತ ಮಹೋತ್ಸವವು ಈ ದಿಸೆಯಲ್ಲಿ ಮೊದಲ ಪ್ರಯತ್ನ. ಇದನ್ನು ಇನ್ನಷ್ಟು ಗಟ್ಟಿಗೊಳಿಸಬೇಕಾಗಿದೆ ಮತ್ತು ಸುಸ್ಥಿರಗೊಳಿಸಬೇಕಾಗಿದೆ.

ಇಂತಹ ಅಭಿಯಾನಗಳನ್ನು ಸುಸ್ಥಿರಗೊಳಿಸಲು ಎಲ್ಲ ಭಾಗೀದಾರರನ್ನೂ ಒಳಗೊಂಡ ಎಚ್ಚರಿಕೆಯಲ್ಲಿ ರೂಪಿಸಿದ ಯೋಜನೆ ಬೇಕಾಗಿದೆ. 'ಪ್ರತೀ ಮನೆಗೂ ತ್ರಿವರ್ಣ ಧ್ವಜ' ಅಭಿಯಾನವು ಭಾರತದ ಎಲ್ಲ ಪೌರರನ್ನೂ ಒಳಗೊಂಡ ಅಭಿಯಾನದಂತೆ ಕಾಣಿಸುತ್ತಿದೆ. ಅದು ಜನ ಅಭಿಯಾನದ ಸ್ವರೂಪ ಪಡೆಯಬೇಕಿದ್ದರೆ ಸರ್ಕಾರ ಅಥವಾ ಅದನ್ನು ಮೊದಲು ಪ್ರಸ್ತಾಪಿಸಿದ ರಾಜಕೀಯ ಪಕ್ಷವಷ್ಟೇ ಇದು ತನ್ನದು ಎಂದರೆ ಸಾಲದು. ಇಂತಹ ಅಭಿಯಾನವು ಎಲ್ಲರನ್ನೂ ಒಳಗೊಳ್ಳಬೇಕು, ಇದರ ಯಶಸ್ಸು ಸಮುದಾಯವು ಅದನ್ನು ತನ್ನದೆಂದು ಭಾವಿಸುವುದರ ಮೇಲಿದೆ. ಎಲ್ಲರ ಭಾಗವಹಿಸುವಿಕೆ, ಎಲ್ಲರ ಒಳಗೊಳ್ಳುವಿಕೆ ಮತ್ತು ಎಲ್ಲರೂ ತನ್ನದೆಂದು ಭಾವಿಸುವುದು ಮುಖ್ಯ. ಈ 21ನೇ ಶತಮಾನದಲ್ಲಿ ಒಂದು ಘಟನೆಯು ಪ್ರಕ್ರಿಯೆಯಾಗಿ ಪರಿವರ್ತನೆಯಾಗಲು ಎಲ್ಲರ ಒಳಗೊಳ್ಳುವಿಕೆ ಮತ್ತು ಎಲ್ಲರ ಭಾಗವಹಿಸುವಿಕೆಯ ಅಗತ್ಯ ಇದೆ. ಹಾಗಿದ್ದರೆ ಮಾತ್ರ ಇದು 'ನಮ್ಮ' ಅಭಿಯಾನ ಆಗಬಹುದು.

ಇಂತಹ ಚಾರಿತ್ರಿಕ ಸಂದರ್ಭದಲ್ಲಿ ಭಿನ್ನ ಸೈದ್ಧಾಂತಿಕ ದೃಷ್ಟಿಕೋನಗಳು ಮತ್ತು ವ್ಯಕ್ತಿಗತ ನೋಟದಲ್ಲಿ 'ಇತಿಹಾಸಗಳನ್ನು' ಧ್ರುವೀಕರಿಸದೆ 'ನಮ್ಮ ಚಾರಿತ್ರಿಕ ಪರಂಪರೆ'ಯನ್ನು ಬಿಂಬಿಸುವುದೇ ಅರ್ಥಪೂರ್ಣ.



ಚುರುಮುರಿ



ಸ್ವಾತಂತ್ರ್ಯ ಬೇಕು!

• ಗುರು ಪಿ.ಎಸ್.

'ಯಾಕ್ರೀ, ವಾಟ್ಸ್‌ಆ್ಯಪ್ ಡೀಪಿ ಚೇಂಜ್ ಮಾಡ್ಕೊಂಡಿದೀರಿ' ಪೊಲೀಸ್ ಆಫೀಸರ್ ರೀತಿ ಕೇಳಿದಳು ಹೆಂಡತಿ.

'ಅಯ್ಯೋ, ಡೀಪಿ ಚೇಂಜ್ ಮಾಡಿಕೊಳ್ಳೋವಷ್ಟೂ ಸ್ವಾತಂತ್ರ್ಯ ಇಲ್ಲವಾ ನನಗೆ...' ಸಿಟ್ಟಿನಲ್ಲೇ ಕೇಳಿದೆ.

'ಡೀಪಿ ಚೇಂಜ್ ಮಾಡಲೇಬಾರದು ಅಂತ ಅಲ್ಲ... ಮೊದಲು ನನ್ನ ಫೋಟೊ ಹಾಕ್ಕೊಂಡಿದ್ದವರು, ಈಗ ಜೈಲಿನ ಸರಳುಗಳ ಚಿತ್ರ ಹಾಕ್ಕೊಂಡಿದೀರಲ್ಲ ಅದರರ್ಥ ಏನು ಅಂತ?'

'ದೇಶಕ್ಕೆ ದೇಶವೇ ಅಮೃತ ಮಹೋತ್ಸವದ ಸಡಗರದಲ್ಲಿದ್ದರೆ, ನನಗೆ ಮಾತ್ರ ಇನ್ನೂ ನಿನ್ನಿಂದ ಸ್ವಾತಂತ್ರ್ಯ ಸಿಕ್ಕಿಲ್ಲ ಅಂತ...'

'ಹೌದು ಬಿಡಿ, ನಿಮಗಷ್ಟೇ ಅಲ್ಲ ತುಂಬಾ ಜನರಿಗೆ ಇನ್ನೂ ಸ್ವಾತಂತ್ರ್ಯ ಸಿಗಬೇಕಿದೆ...'

'ಹಾಗಂದ್ರೇನು ಮಾರಾಯ್ತಿ?'

'ನೋಡಿ, ನಮ್ ರಾಜಕೀಯ ನಾಯಕರಿಗೇ ಇನ್ನೂ ಕೆಲವು ವಿಚಾರಗಳಲ್ಲಿ ಸ್ವಾತಂತ್ರ್ಯ ಸಿಕ್ಕಿಲ್ಲ. ಅಧಿಕಾರ ಇಲ್ಲದಿರೋ ಲೀಡರ್ಸ್‌ಗೆ ಮುಂದಿನ ಸಿಎಂ ನಾನೇ ಅಂತ ಹೇಳೋ ಸ್ವಾತಂತ್ರ್ಯ ಸಿಕ್ಕಿಲ್ಲ. ಅಧಿಕಾರ ಇರೋ ನಾಯಕರಿಗೆ, ಹಿಂದಿ ಭಾಷೆಗಿಂತ ಕನ್ನಡವೇ ಮೇಲು ಅಂತ ಧೈರ್ಯವಾಗಿ ಹೇಳೋ ಸ್ವಾತಂತ್ರ್ಯ ಇಲ್ಲ...' ವೇದಾಂತಿಯಂತೆ ಹೇಳತೊಡಗಿದಳು.

'ಏನು, ಫ್ಲ್ಯಾಗ್‌ಗಳನ್ನ ಮಾರಾಟ ಮಾಡೋದು ಬಿಟ್ಟು, ರಾಜಕೀಯ ಎಲ್ಲ ಮಾತಾಡೋದು ಕಲಿತುಬಿಟ್ಟಿದೀಯ...'

'ಅಪ್‌ಡೇಟ್ ಆಗಬೇಕ್ರಿ. ನಿಮ್ಮಂಗೆ ಬರೀ ಮನೆ, ಮಕ್ಕಳು, ಆಫೀಸು, ಕೆಲಸ ಅಂತ ಯೋಚಿಸ್ತಾ ಕೂತರೆ ದೇಶದ ಬಗ್ಗೆ ಯೋಚಿಸೋರು ಯಾರು?' ವ್ಯಂಗ್ಯವಾಗಿ ತಿರುಗೇಟು ಕೊಟ್ಟಳು.

'ನೀನು ದೊಡ್ಡ ದೇಶಪ್ರೇಮಿ ಅಂತ ಗೊತ್ತಾಯ್ತು ಬಿಡು. ಹೋಗ್ಲಿ, ಇಂಡಿಪೆಂಡೆನ್ಸ್ ಡೇ ಸ್ಪೆಷಲ್ ಏನು?'

'ನಮ್ಮ ಕಸ್ಟಮರ್‌ಗಳಿಗೆ ವಿಶೇಷ ರಿಯಾಯಿತಿ ಕೊಡೋಣ ಅಂತ. ಪೇಪರ್‌ನಲ್ಲಿ ಆ್ಯಡ್ ಕೊಡ್ತೀನಿ, ಇಂಡಿಪೆಂಡೆನ್ಸ್ ಡೇ ಸೇಲ್ ಅಂತ...'

'ಮಾರಾಯ್ತಿ, ಇಷ್ಟು ದಿನ ಸೇಲ್ ಮಾಡಿರೋದೇ ಸಾಕು, ಇರೋದನ್ನಾದರೂ ಉಳಿಸು' ಎಂದೆ. ಇಬ್ಬರೂ ನಗಲಾರಂಭಿಸಿದೆವು!

ಸಂಗತ

ಆ ಕಂದನ ಕಣ್ಣಲ್ಲೂ ನಾಳೆಗಳ ಕನಸಿದೆ

ದೇಶದ ಹೋರಾಟದ ಹಾದಿಯ ಅರಿವಿನ ನೆರಳಲ್ಲಿ ನಮಗೆ ಇರಬೇಕಾದ ಗುರಿ, ಆದ್ಯತೆ, ಬದ್ಧತೆಗಳ ಕುರಿತು ಪರಾಮರ್ಶಿಸಿಕೊಳ್ಳಬೇಕು

• ಸತೀಶ್ ಜಿ.ಕೆ. ತೀರ್ಥಹಳ್ಳಿ

ಹೌದು, ಸ್ವತಂತ್ರ ಭಾರತವೆಂಬ ವಿಶಾಲ ಆಲದ ಮರಕ್ಕೆ 75 ವಸಂತಗಳು ತುಂಬಿಕೊಂಡವು. ಪ್ರತಿಯೊಬ್ಬ ಭಾರತೀಯನಿಗೂ ಇದು ಹೆಮ್ಮೆಯ ದಿನ. ಕಾರಣವಿದೆ, ಕ್ರಿಸ್ತಪೂರ್ವದಲ್ಲಿ ಗ್ರೀಕ್ ದೊರೆ ಅಲೆಗ್ಸಾಂಡರನನ್ನು ಎದುರಿಸುವುದರೊಂದಿಗೆ ಆರಂಭಗೊಂಡ ನಮ್ಮ ಭಾರತದ ಸ್ವಾತಂತ್ರ್ಯ ಹೋರಾಟವು ಜಾಗತಿಕ ಚರಿತ್ರೆಯಲ್ಲಿ ಅತ್ಯಂತ ಸುದೀರ್ಘ ಹೋರಾಟ ಎನಿಸಿಕೊಂಡಿದೆ. ಈ ಹೋರಾಟದಲ್ಲಿ ಸಾವಿರಾರು ಜನರ ಬೆವರಿದೆ, ನೆತ್ತರಿದೆ, ತ್ಯಾಗವಿದೆ. ದೊಡ್ಡಸಂಖ್ಯೆಯಲ್ಲಿ ಬಲಿದಾನಗಳು ಕೂಡ. ಆದರೆ ಅಂತಿಮವಾಗಿ ಆಧುನಿಕ ಶಸ್ತ್ರಾಸ್ತ್ರಗಳಿಂದ ಅತ್ಯಂತ ಬಲಾಢ್ಯರೂ ಸರ್ವಸನ್ನದ್ಧರೂ ಆಗಿದ್ದ ಬ್ರಿಟಿಷರು ಕೆಲವು ದೇಶದ್ರೋಹಿಗಳ ಕುತಂತ್ರ, ಒಳಒಪ್ಪಂದಗಳ ಲಾಭ ಪಡೆದು ಸ್ವಾತಂತ್ರ್ಯ ಹೋರಾಟಗಾರರ ಪಟ್ಟುಗಳನ್ನು ಹಿಮ್ಮೆಟ್ಟಿಸುವ ಸಂದರ್ಭವಿತ್ತು. ಹಾಗೆ ಮತ್ತಷ್ಟು ದೂರವೇ ಉಳಿಯಬಹುದಾಗಿದ್ದ ಸ್ವಾತಂತ್ರ್ಯವನ್ನು ಗಾಂಧೀಜಿ ಶಾಂತಿ, ಅಹಿಂಸೆ, ಸತ್ಯಾಗ್ರಹ ಮಾದರಿಯ ವಿಶ್ವವಿನೂತನ ಅಸ್ತ್ರ ಪ್ರಯೋಗಿಸಿ ಹೋರಾಟಕ್ಕೆ ತಾರ್ಕಿಕ ಅಂತ್ಯ ನೀಡುವಂತಾಗಿದ್ದು ಈಗ ಇತಿಹಾಸ. ಸರ್ವಜನಾಂಗದ ತ್ಯಾಗ, ಬಲಿದಾನಗಳ ಫಲವೇ ನಮ್ಮ ಈ ಸ್ವತಂತ್ರ ಭಾರತ. ಅವರೆಲ್ಲರನ್ನೂ ಕೃತಜ್ಞತೆಯಿಂದ ಸ್ಮರಿಸುವ ಸಮಯವಿದು.

ಹೌದು, ನಮ್ಮದು ಹತ್ತಾರು ಧರ್ಮ, ನೂರಾರು ಜಾತಿ, ಸಾವಿರಾರು ಭಾಷೆ ಹಿನ್ನೆಲೆಯ ಜನರೆಲ್ಲ ಕೂಡಿ ಬಾಳಿದ ಪುಣ್ಯನೆಲ. ಹಾಗಾಗಿ ಇದು ಏಕವರ್ಣದಲ್ಲಿ ಚಿತ್ರಿಸಿದ ಆಕೃತಿಯಾಗಿರದೆ ಹಲವು ಬಣ್ಣಗಳನ್ನು ತುಂಬಿಕೊಂಡ ರಂಗೋಲಿಯಂತಿದೆ. ಭರತದೇಶದ ರಚನೆ, ಸ್ವರೂಪ, ಬೆಳವಣಿಗೆ, ಉನ್ನತಿಯಲ್ಲಿ ಎಲ್ಲ ವರ್ಗದವರ ಬೆವರು, ನೆತ್ತರು, ಬಲಿದಾನಗಳ ಪಾಲೂ ಇದೆ. ಕಥೆಗಾರ ದಿವಂಗತ ಗೌರೀಶ ಕಾಯ್ಕಿಣಿ ಅವರ ಹೇಳಿಕೆ ಅರ್ಥಗರ್ಭಿತ– 'ನಮ್ಮದು ಒಂದೇ ಕೂಳ್ಗಂಬದ ಮೇಲೆ ನಿಂತ ಡೇರೆಯಲ್ಲ, ಸಾವಿರ ಕಂಬಗಳನ್ನಾಶ್ರಯಿಸಿದ ಚಪ್ಪರ'.

ತಿಳಿಯಬೇಕಾದ್ದೇನೆಂದರೆ, ಸ್ವತಂತ್ರಗೊಂಡ ದೇಶವನ್ನು ಮುನ್ನಡೆಸುವುದೂ ಸಲೀಸಾಗಿರಲಿಲ್ಲ. ಆಡಳಿತಗಾರರಿಗೆ ದೇಶವನ್ನು ಮತ್ತೆ ಸಶಕ್ತವಾಗಿ ಕಟ್ಟುವ ಕಠಿಣ ಸವಾಲು ಎದುರಿಗಿತ್ತು. ಪರಕೀಯ ದಾಳಿಯಿಂದ ಗಾಸಿಗೊಂಡಿದ್ದ ದೇಶದಲ್ಲಿ ಭೀಕರವಾಗಿದ್ದ ಬಡತನ- ಹಸಿವು, ನಿರುದ್ಯೋಗ, ಅಸ್ಪೃಶ್ಯತೆ, ಸಾಮಾಜಿಕ ತಾರತಮ್ಯ, ಮತೀಯ ಗಲಭೆಗಳನ್ನೆಲ್ಲಾ ಮೀರುವ ಸವಾಲುಗಳಿದ್ದವು. ಕೃಷಿ, ಬೃಹತ್ ನೀರಾವರಿ ಯೋಜನೆಗಳು, ಬೃಹತ್ ಕೈಗಾರಿಕೆ, ಉನ್ನತ ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ವಿಜ್ಞಾನ-ತಂತ್ರಜ್ಞಾನ ವಲಯಗಳಲ್ಲಿ ದೇಶ ಗಟ್ಟಿ ಹೆಜ್ಜೆಯನ್ನೇ ಊರಲಾರಂಭಿಸಿತು. ಆಹಾರೋದ್ಯಮ ಕ್ಷೇತ್ರದಲ್ಲಿ ಕ್ರಾಂತಿಗಳೇ ನಡೆದುಹೋದವು. ಕೆಲವೇ ಉದ್ಯಮಿಗಳ ಹಿಡಿತದಲ್ಲಿದ್ದ ಬ್ಯಾಂಕ್‌ಗಳು ರಾಷ್ಟ್ರೀಕರಣಗೊಂಡವು. ಬಲಾಢ್ಯ ಭೂಒಡೆಯರುಗಳಿಂದ ಪಡೆದು ಭೂರಹಿತರಿಗೆ ಕೃಷಿಭೂಮಿ ಹಂಚಿದ ಭೂಸುಧಾರಣೆ ಕಾಯ್ದೆಯು ದೇಶದ ಕ್ರಾಂತಿಕಾರಿ ಘಟನೆಯೇ ಸರಿ.

ಯುದ್ಧಗಳು, ಸಾಂಕ್ರಾಮಿಕ ರೋಗ, ನೈಸರ್ಗಿಕ ವಿಕೋಪಗಳನ್ನೆಲ್ಲ ಎದುರಿಸುತ್ತಲೇ ಯಶಸ್ವಿ ಪರಮಾಣು ಪ್ರಯೋಗಗಳಿಂದ ದೇಶ ಸ್ವಾವಲಂಬಿಯಾಗಿ ಬೀಗಿತು. ಬಾಹ್ಯಾಕಾಶ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿತು. ವಿಶ್ವಶಾಂತಿ ಸಾರುವ ಅಲಿಪ್ತನೀತಿಯೊಂದಿಗೆ ಭಾರತವೊಂದು ಪರಿಪೂರ್ಣ ವಿದೇಶಾಂಗ ನೀತಿಯನ್ನು ಹೊಂದಿರುವ ನೆಲವಾಗಿ ವಿಶ್ವ ಸಮುದಾಯದೆದುರು ಮಾನ್ಯವಾಯಿತು.

ಸೊನ್ನೆಯಿಂದ ಶುರುವಾದ ದಾರಿಯಲ್ಲಿನ ಪ್ರಗತಿಯ ದೃಢ ಹೆಜ್ಜೆಗಳು ಮುಂದಿನ ಕೆಲವು ದಶಕಗಳಲ್ಲಿ ಭಾರತವನ್ನು ವಿಶ್ವಭೂಪಟದಲ್ಲಿ ಗುರುತಿಸುವಂತೆ ಮಾಡಿದವು. ಸಾಮಾಜಿಕ ನ್ಯಾಯವನ್ನು ಮುಂದಿನ ಹಲವಾರು ಸಂವೇದನಾಶೀಲ ನೇತಾರರು ಎತ್ತಿಹಿಡಿದರು. ಅಲ್ಲಿಂದ ಇಲ್ಲಿಯವರೆಗೂ ಹಲವು ನ್ಯೂನತೆಗಳ ನಡುವೆ ಸರ್ವರನ್ನೂ ಒಳಗೊಳ್ಳುವ ಶ್ರೇಯೋಭಿವೃದ್ಧಿಯ ಕಾರ್ಯಕ್ರಮಗಳನ್ನು ದೇಶಕ್ಕೆ ಕೊಡುಗೆಯಿತ್ತರು.



ನಿರ್ಲಕ್ಷ್ಯ ತಾಳುವ ಮುನ್ನ ಇವತ್ತಿನ ಯುವಸಮೂಹವು ಸ್ವಾತಂತ್ರ್ಯದ ಮಹತ್ವವನ್ನು ತಿಳಿಯಬೇಕೆಂದರೆ, ಸದ್ಯ ಸ್ವಾತಂತ್ರ್ಯ ಕಳೆದುಕೊಂಡು ಸರ್ವಾಧಿಕಾರಿಗಳ ಶೋಷಣೆ, ದಬ್ಬಾಳಿಕೆ, ಕ್ರೌರ್ಯಗಳಿಂದ ನಿತ್ಯ ನರಳುತ್ತಿರುವ ದೇಶಗಳ ಕಡೆಗೊಮ್ಮೆ ಕಣ್ಣಾಯಿಸಬೇಕು. ಅಫ್ಘಾನಿಸ್ತಾನದಂತಹ ದೇಶವಾಸಿಗಳ ದಾರುಣ ಬದುಕು ನೋಡಿ ನಾವು ಕಲಿಯಬೇಕಾದ್ದು ಬಹಳಷ್ಟಿದೆ.

ಅಮೃತ ಮಹೋತ್ಸವದ ಆಚರಣೆಯ ಹೊತ್ತಿನಲ್ಲಿ ಹಲವು ವಿಷಾದಗಳೂ ಶ್ರೀಸಾಮಾನ್ಯನನ್ನು ಕಾಡುತ್ತವೆ. ಬೆಲೆ ಏರಿಕೆಯಲ್ಲಿ ಜನಸಾಮಾನ್ಯರ ಬದುಕು ದುಸ್ತರವಾಗುತ್ತಿರುವಾಗಲೇ ಚುನಾವಣೆ-ಅಧಿಕಾರದ ಸುತ್ತ ಗಿರಕಿ ಹೊಡೆಯುತ್ತಿರುವ ನಮ್ಮ ಪ್ರಜಾಪ್ರಭುತ್ವ ನಿಜಕ್ಕೂ ಅಪಾಯದಲ್ಲಿದೆ. ಕೋಮುಗಲಭೆಗಳಲ್ಲಿ ದೇಶ ತಲ್ಲಣಿಸುವುದು ನಿಂತಿಲ್ಲ. ಹಾಗಾಗಿ ಈಗಷ್ಟೇ ಬೆಳಕು ಕಾಣುತ್ತಿರುವ ಅದೆಷ್ಟೋ ಶೋಷಿತವರ್ಗಗಳು ಮೈಮರೆತರೆ ಮತ್ತೆ ಜೀತಕ್ಕೆ ನೂಕಲ್ಪಡುತ್ತವೆ. ನಮ್ಮ ಎಳೆಯರಿಗೆ ದೇಶದ ಚರಿತ್ರೆಯನ್ನು ಸ್ವಾತಂತ್ರ್ಯ ಹೋರಾಟದ ಸಂಯಮದಿಂದ ಅರ್ಥೈಸಿಕೊಳ್ಳುವುದು ಮುಖ್ಯವಾಗಬೇಕು.

ದೇಶಾಭಿಮಾನವೆಂದರೆ ಬರೀ ಬಣ್ಣ, ಬಾವುಟ, ಭೂಪಟ, ಭಾಷಣ, ಘೋಷಣೆ ಅಂದುಕೊಂಡರೆ ಅಪಾಯ. ನೆಲಜಲದೊಟ್ಟಿಗೆ ದೇಶವಾಸಿಗಳ ಬದುಕು-ಬವಣೆ, ದುಡಿಮೆ, ತ್ಯಾಗ, ಸಂತೋಷ, ಸಂಬಂಧ, ಹಾಡು-ಪಾಡು ಎಲ್ಲದರ ಮಿಳಿತದಲ್ಲಿ ದೇಶವಿದೆ.

ರಸ್ತೆಬದಿಯ ಜೋಪಡಿ ಎದುರಿಗೆ ಬಾವುಟ ಹಿಡಿದು ಕಂಬಕ್ಕಾಗಿ ಹುಡುಕುವಾಗಲೂ ಆ ಕಂದಮ್ಮನ ಕಣ್ಣಲ್ಲಿ ಅಮೃತಮಹೋತ್ಸವದ ಹೊಳಪಿದೆ. ನಾಳೆಗಳ ಕನಸಿದೆ. ಈಡೇರುವಂತಾಗಲಿ.

ವಾಚಕರ ವಾಣಿ

ತಪ್ಪು ಸಂದೇಶ ರವಾನೆಯಾಗದಿರಲಿ

ಸ್ವಾತಂತ್ರ್ಯೋತ್ಸವದ ಮುನ್ನಾ ದಿನವಾದ ಭಾನುವಾರ ರಾಜ್ಯದ ಪ್ರಮುಖ ದಿನಪತ್ರಿಕೆಗಳ ಮುಖಪುಟದಲ್ಲಿ ರಾರಾಜಿಸಿದ ಕರ್ನಾಟಕ ಸರ್ಕಾರದ ಜಾಹೀರಾತು ವಿವಾದಿತ ಎನ್ನದೇ ವಿಧಿಯಿಲ್ಲ. ಯಾರಾದರೂ ತಪ್ಪಿ ನಡೆದರೆ ಉತ್ತರ ಕರ್ನಾಟಕದ ಆಡು ಮಾತಿನಲ್ಲಿ 'ಇದು ಧರ್ಮ ಅಲ್ಲ ಲೇ, ತಮ್ಮಾ' ಎಂದು ಬುದ್ಧಿ ಹೇಳುವುದುಂಟು. ಸದರಿ ಜಾಹೀರಾತಿನಲ್ಲಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರವನ್ನು ಉದ್ದೇಶಪೂರ್ವಕವಾಗಿಯೇ ಕೈಬಿಟ್ಟಂತಿದೆ. ಹಾಗಾದರೆ ದೇಶಕ್ಕೆ ನೆಹರೂ ಅವರ ಕೊಡುಗೆ ಏನೇನೂ ಇಲ್ಲವೆ?

ಹಟಕ್ಕೆ ಬಿದ್ದವರಂತೆ ಸಾವರ್ಕರ್ ಚಿತ್ರವನ್ನು ಮೊದಲ ಸಾಲಿನಲ್ಲೇ ಪ್ರಕಟಿಸಲಾಗಿದೆ. ಸರ್ಕಾರದ ಈ ನಡೆಯಲ್ಲಿ ಅಜೆಂಡಾ ಆಧಾರಿತ ರಾಜಕೀಯದ ಛಾಯೆ ಇರುವುದು ಸ್ಪಷ್ಟ. ನೆಹರೂ ಭಾವಚಿತ್ರ ಕೈಬಿಟ್ಟ ಪ್ರಮಾದಕ್ಕೆ ಮುಖ್ಯಮಂತ್ರಿಯವರು ರಾಜ್ಯದ ಜನರ ಕ್ಷಮೆ ಕೇಳಬೇಕು. ಇಲ್ಲವಾದರೆ ತಪ್ಪು ಸಂದೇಶ ರವಾನೆಯಾಗುವುದು ಖಚಿತ.

ಈರಪ್ಪ ಎಂ. ಕಂಬಳಿ, ಬೆಂಗಳೂರು

ಹದ್ದು ಮೀರಿದ ಭಾಷೆ ತರವೇ?

ಒಂದಾನೊಂದು ಕಾಲದಲ್ಲಿ ಪೂರ್ಣ ಉಚ್ಚರಿಸಲು ಸಹ ಸಂಕೋಚಪಡುತ್ತಿದ್ದ ಪದಗಳನ್ನು 'ಭಾಷಾ ಮರ್ಯಾದೆ' ಬಿಟ್ಟು ಇಂದು ಪುಂಖಾನುಪುಂಖವಾಗಿ ರಾಜಕಾರಣಿಗಳು ಬಳಸುತ್ತಾರೆ. ಒಬ್ಬ ರಾಜಕೀಯ ಮುಖಂಡ 'ಕರ್ನಾಟಕದಲ್ಲಿ ಬಿಜೆಪಿ ಆಡಳಿತದಲ್ಲಿ ನೌಕರಿ ಪಡೆಯಬೇಕಾದರೆ ಯುವಕರು ಲಂಚ ಕೊಡಬೇಕು' ಎಂದು ಹೇಳಿರುವುದು ಮಾತ್ರವಲ್ಲ, 'ಯುವತಿಯರು ಮಂಚ ಏರಬೇಕು' ಎಂದು ಸಹ ಹೇಳಿಬಿಟ್ಟಿದ್ದಾರೆ. ಬಿಜೆಪಿ ಆಡಳಿತದಲ್ಲಿ ನೌಕರಿ ಪಡೆದ ಯುವಕರೆಲ್ಲ ಲಂಚ ಕೊಟ್ಟವರು ಮತ್ತು ಯುವತಿಯರೆಲ್ಲ ಮಂಚ ಏರಿದವರು ಎನ್ನುವ ಅತ್ಯಂತ ಅಸಭ್ಯ ಅರ್ಥವನ್ನು ಇದು ಕೊಡುತ್ತದೆ. ಲಂಚ ಕೊಡುವುದು, ಅಧಿಕಾರ ಸಿಕ್ಕಾಗ ಅದನ್ನು ಪಡೆಯುವುದು ಈಗ ನೌಕರಶಾಹಿಯಲ್ಲಿ ಸಾಮಾನ್ಯ. ಆದರೆ ಮಂಚ ಏರಿದವರು ಎಂದರೆ? ನೌಕರಿ ಪಡೆದ ಮಹಿಳಾ ಸಮುದಾಯವನ್ನೇ ಇಂಥವರು ಎಂದು ಬೊಟ್ಟು ಮಾಡಿ ತೋರಿಸಿದಂತಲ್ಲವೇ?

ಬಳಿಕವೂ ಮುಖಂಡರು ತಾವು ಹೀಗೆ ಹೇಳಿದ್ದು ಆವೇಶದ ಭರದಲ್ಲಿ ಎನ್ನದೆ ತಮ್ಮ ಹೇಳಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಇಲ್ಲಿ ಮಣ್ಣಿನ ಹೆಂಟೆ ಕಲ್ಲಿಗೆ ಬಡಿಯಲಿ, ಕಲ್ಲೇ ಮಣ್ಣಿನ ಹೆಂಟೆಗೆ ಬಡಿಯಲಿ ಪುಡಿಯಾಗುವುದು ಮಣ್ಣಿನ ಹೆಂಟೆ ಎನ್ನುವುದನ್ನು ಮುಖಂಡರು ಮರೆತಿರುವುದು ವಿಷಾದಕರ.

ಸತ್ಯಬೋಧ, ಬೆಂಗಳೂರು

ದೇಶಿ ವಸ್ತು ಖರೀದಿಗೆ ಸಿಗಲಿ ಆದ್ಯತೆ

ಇತ್ತೀಚೆಗೆ ನನ್ನ ಚಪ್ಪಲಿ ಕಿತ್ತುಹೋಯಿತು. ರಿಪೇರಿ ಮಾಡಿಸೋಣ ಅಂತ ಸುಮಾರು ಕಡೆ ಸುತ್ತಾಡಿದರೂ ರಿಪೇರಿ ಮಾಡುವವರು ಸಿಗಲಿಲ್ಲ. ಕೊನೆಗೆ ಹೊಸ ಚಪ್ಪಲಿ ತಂದೆ. ನಮ್ಮ ವಿದ್ಯುತ್ ಇಸ್ತ್ರಿ ಪೆಟ್ಟಿಗೆ ಕೆಟ್ಟು ಹೋಯಿತು. ಅದರ ರಿಪೇರಿಗೆ ₹ 500ರಿಂದ 600 ಖರ್ಚಾಗುತ್ತೆ, ಆದರೆ ಗ್ಯಾರಂಟಿ ಇಲ್ಲ ಅಂದರು. ಹೊಸ ಇಸ್ತ್ರಿ ಪೆಟ್ಟಿಗೆ ಕೊಂಡೆ. ಹೀಗೆ ಯಾವುದೇ ವಸ್ತು, ಉಪಕರಣ ರಿಪೇರಿಗೆ ಬಂದರೂ ರಿಪೇರಿ ಮಾಡಲು ಆಗುವುದಿಲ್ಲ ಅಥವಾ ಅದು ಕಾರ್ಯಸಾಧು ಅಲ್ಲ ಅಥವಾ ರಿಪೇರಿ ಮಾಡುವವರು ಸಿಗುವುದಿಲ್ಲ. ಟಿ.ವಿ ಕೆಟ್ಟುಹೋದರೆ ಹೊಸ ಟಿ.ವಿ ತರುವುದು, ಫ್ರಿಜ್ ಕೆಟ್ಟು ಹೋದರೆ ಹೊಸ ಫ್ರಿಜ್ ತರುವುದು, ಬಾಲ್ ಪೆನ್‌ನಲ್ಲಿ ಇಂಕ್ ಮುಗಿದು ಹೋದರೆ, ರಿಫಿಲ್ ಹಾಕುವುದಿಲ್ಲ. ಪೆನ್ ಬಿಸಾಕಿ ಹೊಸದು ತರುವುದು. ಹೀಗೆ ರಿಪೇರಿಗಿಂತ ಹೊಸದು ಕೊಳ್ಳುವುದಕ್ಕೇ ಆದ್ಯತೆ ಸಿಗುತ್ತಿದೆ.

ನಾವೆಲ್ಲ ಚಿಕ್ಕವರಿದ್ದಾಗ ಕೊಡೆ ರಿಪೇರಿ, ಚಪ್ಪಲಿ ರಿಪೇರಿ, ಪಾತ್ರೆ ಕಲಾಯಿ ಮಾಡುವವರು, ಚಾಕು ಚೂಪು ಮಾಡುವವರು ಹೀಗೆ ಹಲವಾರು ರೀತಿಯ ಸಣ್ಣಸಣ್ಣ ಕುಶಲಕರ್ಮಿಗಳು ತಮ್ಮ ಜೀವನೋಪಾಯವಾಗಿ ಈ ಕೆಲಸಗಳನ್ನು ಮಾಡುತ್ತಿದ್ದರು. ಅಮೆರಿಕದಲ್ಲಿ ರಿಪೇರಿ ಅಂತ ಇಲ್ಲ, ಏನಾದರೂ ಕೆಟ್ಟು ಹೋದರೆ ಅಲ್ಲೇ ಬಿಸಾಕಿ ಹೊಸದು ತರುತ್ತಾರೆ ಎಂದು ನಮ್ಮ ಬಾಲ್ಯದಲ್ಲಿ ಕೇಳುತ್ತಿದ್ದೆವು. ಆರ್ಥಿಕ ಚಟುವಟಿಕೆಗಳಿಂದ ಉತ್ಪಾದನಾರಂಗಕ್ಕೆ ಉತ್ತೇಜನ ಸಿಗುತ್ತದೆ. ಆದರೆ ಇದು ಸಾಧ್ಯವಾಗುವುದು ದೇಶಿ ವಸ್ತುಗಳನ್ನು ಖರೀದಿಸಿದರೆ ಮಾತ್ರ. ಚೀನಾ, ಜಪಾನ್‌ನಂತಹ ದೇಶಗಳಿಂದ ಆಮದು ಮಾಡಿಕೊಂಡ ವಸ್ತುಗಳನ್ನು ಕೊಂಡರೆ ಆ ದೇಶಗಳು ಉದ್ಧಾರವಾಗುತ್ತವೆಯೇ ವಿನಾ ನಮ್ಮ ದೇಶವಲ್ಲ.

ಟಿ.ವಿ.ಬಿ.ರಾಜನ್, ಬೆಂಗಳೂರು

ಬದಲಿ

'ಎಸಿಬಿ ರದ್ದು' (ಪ್ರ.ವಾ., ಆ. 12). ಸ್ವಾಗತಯೋಗ್ಯ ಸುದ್ದಿ. ಅದಕ್ಕೆ ಬದಲಿ? ರಚನೆಯಾಗಲಿ ಯಾವುದಾದರೂ 'ಎಬಿಸಿಡಿ' ಅಥವಾ 'ಎಕ್ಸ್‌ವೈಜಡ್'!

ಸಿ.ಪಿ.ಕೆ., ಮೈಸೂರು

ಅತಂತ್ರ ಸ್ಥಿತಿಯ ಪರಿಣಾಮ...

'ಸರ್ಕಾರ ನಡೀತಾ ಇಲ್ಲ. ಇಲ್ಲಿ, ಮ್ಯಾನೇಜ್ ಮಾಡ್ತಾ ಇದೀವಿ ಅಷ್ಟೇ' ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಹೇಳಿದ್ದಾರೆ ಎನ್ನಲಾದ ಆಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವುದು ರಾಜ್ಯ ಸರ್ಕಾರಕ್ಕೆ ನಿಜಕ್ಕೂ ಮುಜುಗರ ತರುವಂತಹುದು. ಆ ಪಕ್ಷದ ಒಂದಷ್ಟು ಶಾಸಕರನ್ನು ಈ ಪಕ್ಷದ ಒಂದಷ್ಟು ಶಾಸಕರನ್ನು ಸೆಳೆದುಕೊಂಡು ಅಧಿಕಾರ ಹಿಡಿಯುವ ಯಾವುದೇ ಪಕ್ಷದ ನೇತೃತ್ವದ ಸರ್ಕಾರದಿಂದ ಇದಕ್ಕಿಂತ ಹೆಚ್ಚಿನದೇನನ್ನು ನಿರೀಕ್ಷಿಸಲು ಸಾಧ್ಯ?

ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಸ್ಪಷ್ಟ ಬಹುಮತ ದೊರೆಯದ ಕಾರಣ ಉಂಟಾದ ಅತಂತ್ರ ಸ್ಥಿತಿಯ ಪರಿಣಾಮಗಳನ್ನು ಜನ ಅನುಭವಿಸಬೇಕಾಗಿದೆ. ಇಂತಹ ಬೆಳವಣಿಗೆಗಳು ಮತದಾರರಲ್ಲಿ ಎಚ್ಚರ ಮೂಡಿಸಬೇಕು. ಮುಂದಿನ ಚುನಾವಣೆಯಲ್ಲಿ ಪ್ರಜ್ಞಾವಂತಿಕೆಯಿಂದ ಮತ ಚಲಾಯಿಸಲು ಮತ್ತು ಸೇವಾಬದ್ಧತೆಯುಳ್ಳ ಪ್ರತಿನಿಧಿಗಳನ್ನು ಆರಿಸಲು ಪ್ರೇರಣೆ ನೀಡಬೇಕು.

ವಿಶ್ವನಾಥ್ ಕೆ.ಟಿ, ದೊಡ್ಡಬಳ್ಳಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಕುವೆಂಪು ಕವನ ಉಲ್ಲೇಖಿಸಿದ ಮುರ್ಮು

ಪ್ರಜಾವಾಣಿ ವಾರ್ತೆ

ನವದೆಹಲಿ: ಭವ್ಯ ಭಾರತದ ನಿರ್ಮಾಣದಲ್ಲಿ ದೇಶದ ಯುವಜನರು ರಾಷ್ಟ್ರಕವಿ ಕುವೆಂಪು ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೇಳಿದ್ದಾರೆ.

ಸ್ವಾತಂತ್ರ್ಯೋತ್ಸವದ ಮುನ್ನಾದಿನ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಕುವೆಂಪು ಅವರ ಕವನದ ಸಾಲುಗಳನ್ನು ಉಲ್ಲೇಖಿಸಿದರು.

'ನಾನು ಅಳಿವೆ, ನೀನು ಅಳಿವೆ/ ನಮ್ಮ ಎಲುಬುಗಳ ಮೇಲೆ/ ಮೂಡುವುದು ಮೂಡುವುದು/ ನವಭಾರತದ ಲೀಲೆ' ಎಂಬ ಕುವೆಂಪು ಅವರ ಕವನದ ಸಾಲುಗಳನ್ನು ಉಲ್ಲೇಖಿಸಿ, ಅದರಲ್ಲಿರುವ ಆದರ್ಶಗಳನ್ನು ಪಾಲಿಸುವಂತೆ ಕರೆ ನೀಡಿದರು.

'ಭಾರತಕ್ಕೆ ಸ್ವಾತಂತ್ರ್ಯ ಬಂದಾಗ, ಪ್ರಜಾಪ್ರಭುತ್ವ ರಾಷ್ಟ್ರವಾಗಿ ಅದು ಉಳಿಯುವುದಿಲ್ಲ ಎಂದು ವಿಶ್ವದ ಪ್ರಮುಖ ನಾಯಕರು ಹೇಳಿದ್ದರು. ಭಾರತವು ಬಡ, ಕಡಿಮೆ ಸಾಕ್ಷರತೆಯ ದೇಶ ಎಂಬುದೇ ಅವರ ಈ ಭಾವನೆಗೆ ಕಾರಣವಾಗಿತ್ತು. ಆದರೆ, ಭಾರತೀಯರಾದ ನಾವು ಅಂತಹ ನಾಯಕರ ಮಾತುಗಳನ್ನು ಸುಳ್ಳಾಗಿಸಿದೆವು. ಈಗ ಪ್ರಜಾಪ್ರಭುತ್ವ ಎಂಬುದು ನಮ್ಮ ನೆಲದಾಳಕ್ಕೆ ಇಳಿದಿರುವುದು ಮಾತ್ರವಲ್ಲ, ಸಮೃದ್ಧವಾಗಿ ಬೆಳೆದಿದೆ' ಎಂದು ಅವರು ಹೇಳಿದ್ದಾರೆ.

> **ನಾವು ಭಾರತೀಯತೆಯನ್ನು ಸಂಭ್ರಮಿಸುತ್ತಿದ್ದೇವೆ. ಭಾರತವು ಸಂಪೂರ್ಣ ವೈವಿಧ್ಯಮಯವಾಗಿದೆ. ಆದರೆ, ಏಕ ಭಾರತ-ಶ್ರೇಷ್ಠ ಭಾರತ ಎಂಬ ಧ್ಯೇಯ ನಮ್ಮೆಲ್ಲರನ್ನು ಒಗ್ಗೂಡಿಸಿದೆ**
> **ದ್ರೌಪದಿ ಮುರ್ಮು,** ರಾಷ್ಟ್ರಪತಿ

'ತುಳಿತಕ್ಕೆ ಒಳಗಾದವರಿಗೆ ಮತ್ತು ಹಿಂದುಳಿದವರಿಗೆ ಸಹಾನುಭೂತಿ ತೋರುವುದು ಇಂದಿನ ಭಾರತದ ಅಗತ್ಯವಾಗಿದೆ. ನಮ್ಮ ರಾಷ್ಟ್ರೀಯ ಮೌಲ್ಯಗಳನ್ನು ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳ ರೂಪದಲ್ಲಿ ಸೇರಿಸಲಾಗಿದೆ. ದೇಶದ ಪ್ರತಿಯೊಬ್ಬ ನಾಗರಿಕನೂ ಮೂಲಭೂತ ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳಬೇಕು ಮತ್ತು ಅವುಗಳನ್ನು ಪಾಲಿಸಬೇಕು. ಆಗ ಮಾತ್ರ ದೇಶವು ಮತ್ತಷ್ಟು ಎತ್ತರಕ್ಕೆ ಹೋಗುತ್ತದೆ' ಎಂದು ಕರೆ ನೀಡಿದ್ದಾರೆ.

'2047ರ ವೇಳೆಗೆ ನಾವು ಭವ್ಯ ಭಾರತವನ್ನು ನಿರ್ಮಿಸಬೇಕಿದೆ. ಯುವ ಜನರು ದೇಶಕ್ಕಾಗಿ ತ್ಯಾಗ ಮಾಡಬೇಕು, ನಾಗರಿಕರನ್ನು ಸಬಲರನ್ನಾಗಿ ಮಾಡಬೇಕು. ಅಂಬೇಡ್ಕರ್ ಅವರ ಧ್ಯೇಯಗಳಿಗೆ ಸ್ಪಷ್ಟರೂಪವನ್ನು ನೀಡಬೇಕು' ಎಂದು ಹೇಳಿದ್ದಾರೆ.

11 ಖಾತೆಗಳನ್ನು ತಮ್ಮ ಬಳಿಯೇ ಇಟ್ಟುಕೊಂಡ ಸಿ.ಎಂ ಶಿಂದೆ

ಫಡಣವೀಸ್‌ಗೆ ಗೃಹ, ಹಣಕಾಸು ಖಾತೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ತಮ್ಮ ಸಂಪುಟಕ್ಕೆ ಸೇರ್ಪಡೆಯಾಗಿದ್ದ 18 ಮಂದಿಗೆ ಭಾನುವಾರ ಖಾತೆಗಳನ್ನು ಹಂಚಿಕೆ ಮಾಡಿದ್ದಾರೆ.

ನಗರಾಭಿವೃದ್ಧಿ ಸೇರಿದಂತೆ ಒಟ್ಟು 11 ಖಾತೆಗಳನ್ನು ಶಿಂದೆ ಅವರು ತಮ್ಮ ಬಳಿಯೇ ಇಟ್ಟುಕೊಂಡಿದ್ದಾರೆ.

'ಉಪ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೆ ಗೃಹ ಖಾತೆ ನೀಡಲಾಗಿದೆ. ಹಣಕಾಸು ಹಾಗೂ ಯೋಜನಾ ಖಾತೆಯ ಜವಾಬ್ದಾರಿಯನ್ನೂ ಅವರಿಗೆ ವಹಿಸಲಾಗಿದೆ' ಎಂದು ಮುಖ್ಯಮಂತ್ರಿಯವರ ಕಾರ್ಯಾಲಯದ (ಸಿಎಂಒ) ಪ್ರಕಟಣೆ ತಿಳಿಸಿದೆ.

> **ಖಾತೆ ಹಂಚಿಕೆ ಬಗ್ಗೆ ಬಿಜೆಪಿ ಹಾಗೂ ಶಿಂದೆ ಬಣದವರ ನಡುವೆ ಭಿನ್ನಾಭಿಪ್ರಾಯವಿಲ್ಲ. ಅಗತ್ಯವಿದ್ದರೆ ಖಾತೆಗಳನ್ನು ಪರಸ್ಪರ ಬದಲಾವಣೆ ಮಾಡಿಕೊಳ್ಳಬಹುದು**
> **ದೇವೇಂದ್ರ ಫಡಣವೀಸ್**
> ಮಹಾರಾಷ್ಟ್ರ ಉಪ ಮುಖ್ಯಮಂತ್ರಿ

ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ, ಸಾರಿಗೆ, ಮಾರುಕಟ್ಟೆ, ಸಾಮಾಜಿಕ ನ್ಯಾಯ, ವಿಪತ್ತು ನಿರ್ವಹಣೆ-ಪರಿಹಾರ ಮತ್ತು ಪುನರ್ವಸತಿ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಪರಿಸರ ಮತ್ತು ಹವಾಮಾನ ಬದಲಾವಣೆ, ಅಲ್ಪಸಂಖ್ಯಾತರ ಅಭಿವೃದ್ಧಿ, ಸಾಮಾನ್ಯ ಆಡಳಿತ ಹಾಗೂ ಲೋಕೋಪಯೋಗಿ (ಸಾರ್ವಜನಿಕ ವಲಯದ ಉದ್ಯಮಗಳು) ಖಾತೆಗಳು ಶಿಂದೆ ಅವರ ಬಳಿ ಇವೆ.

ಕಾನೂನು, ಜಲಸಂಪನ್ಮೂಲ, ವಸತಿ ಹಾಗೂ ಇಂಧನ ಖಾತೆಗಳನ್ನು ಫಡಣವೀಸ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ 41 ದಿನಗಳ ನಂತರ ಶಿಂದೆ ಅವರು ಬಿಜೆಪಿ ಹಾಗೂ ಶಿವಸೇನಾ ಗುಂಪಿನ ತಲಾ 9 ಶಾಸಕರನ್ನು ತಮ್ಮ ಸಂಪುಟಕ್ಕೆ ಸೇರ್ಪಡೆ ಮಾಡಿಕೊಂಡಿದ್ದರು. ಹೋದ ಮಂಗಳವಾರ ಇವರೆಲ್ಲಾ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು.



'ಹರ್ ಘರ್ ತಿರಂಗ ಅಭಿಯಾನದ ಅಂಗವಾಗಿ ಮಧ್ಯಪ್ರದೇಶದ ಜಬಲ್‌ಪುರದ ಜನರು ಭಾನುವಾರ ರಾಷ್ಟ್ರಧ್ವಜ ಹಿಡಿದು ನರ್ಮದಾ ನದಿಯಲ್ಲಿ ಈಜಿದರು –ಪಿಟಿಐ ಚಿತ್ರ

ಐಎಸ್ ಬೆಂಬಲಿತ ನಾಲ್ವರು ಉಗ್ರರ ಬಂಧನ

ಚಂಡೀಗಡ (ಪಿಟಿಐ): ಸ್ವಾತಂತ್ರ್ಯ ದಿನಾಚರಣೆ ಮುನ್ನಾ ದಿನ ದೆಹಲಿ ಪೊಲೀಸರು ಮತ್ತು ಪಂಜಾಬ್ ಪೊಲೀಸರು ಜಂಟಿ ಕಾರ್ಯಾಚರಣೆ ಮೂಲಕ ಪಾಕಿಸ್ತಾನದ ಗುಪ್ತಚರ ಸಂಘಟನೆ ಐಎಸ್ ಬೆಂಬಲಿತ ಉಗ್ರರ ಸಂಚನ್ನು ವಿಫಲಗೊಳಿಸಿ, ನಾಲ್ವರು ಭಯೋತ್ಪಾದಕರನ್ನು ಬಂಧಿಸಿದ್ದಾರೆ.

ಬಂಧಿತರರಿಂದ ಮೂರು ಗ್ರೆನೇಡ್‌ಗಳು, ಒಂದು ಐಇಡಿ ಮತ್ತು ಎರಡು ಪಿಸ್ತೂಲ್ ಜತೆಗೆ 40 ಜೀವಂತ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬಂಧಿತರಲ್ಲಿ ಕೆನಡಾ ಮೂಲದ ಆರ್ಶ್ ದಲ್ಲಾ ಮತ್ತು ಆಸ್ಟ್ರೇಲಿಯಾ ಮೂಲದ ಗುರ್ಜಂತ್ ಸಿಂಗ್ ಕೂಡ ಇದ್ದಾರೆ ಎಂದು ಪಂಜಾಬ್ ಪೊಲೀಸರು ಟ್ವೀಟ್ ಮಾಡಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ವೇಳೆ ಭಯೋತ್ಪಾದಕ ಕೃತ್ಯ ನಡೆಸಲು ಉಗ್ರರು ಸಂಚು ಮಾಡಿದ್ದರು. ಪಂಜಾಬ್ ಮತ್ತು ಹರಿಯಾಣ ಹಾಗೂ ಚಂಡೀಗಡದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.



ಪಾರ್ವತಿಯನ್ನು ಹಡೆದ ಮೇನಾದೇವಿ

ಹಿಮವಂತ ಮತ್ತು ಮೇನಾದೇವಿ ದಂಪತಿ ತಮ್ಮ ಮಗಳಾಗಿ ಮಹೇಶ್ವರಿ ಜನಿಸುವಂತೆ ಭಕ್ತಿಯಿಂದ ಧ್ಯಾನಿಸಿದರು. ಇವರ ಕೋರಿಕೆಯಂತೆ ಮಹೇಶ್ವರಿ ಮತ್ತೆ ಜನ್ಮ ತಾಳಲು ನಿರ್ಧರಿಸಿದಳು. ಹಿಂದಿನ ಜನ್ಮದಲ್ಲಿ ತಂದೆಯಾಗಿದ್ದ ದಕ್ಷನಿಂದ ಅವಮಾನಿತಳಾಗಿ ಯೋಗಸಮಾಧಿಯಿಂದ ಶರೀರವನ್ನು ತ್ಯಜಿಸಿದ್ದ ಉಮಾದೇವಿ, ಈಗ ತನ್ನ ಮಾತನ್ನು ಈಡೇರಿಸಲು ಹಿಮವಂತನ ಪತ್ನಿಯ ಗರ್ಭದಲ್ಲಿ ಜನಿಸಲು ಸಂಕಲ್ಪಮಾಡಿದಳು. ಇದಕ್ಕಾಗಿ ಉಮಾದೇವಿಯು ಹಿಮವಂತನ ಮನಸ್ಸಿನಲ್ಲಿ ಪೂರ್ಣಾಂಶದಿಂದ ನೆಲಸಿದಳು. ಜಗನ್ಮಾತೆಯ ಅನುಗ್ರಹದಿಂದ ಮೇನಾದೇವಿಯು ಉಮಾದೇವಿಯ ಅಂಶವುಳ್ಳ ಗರ್ಭವನ್ನು ಧರಿಸಿದಳು.

ಮೇನಾದೇವಿಯು ಗರ್ಭವನ್ನು ಧರಿಸಿದಾಗ ಅವಳಲ್ಲಿ ಅನೇಕ ಗರ್ಭಲಕ್ಷಣಗಳು ಕಾಣಿಸಿದವು. ಅವಳ ಶರೀರವು ಕೃಶವಾಯಿತು, ಆಭರಣಗಳನ್ನು ಹೊರಲಾರದಂತಾದಳು. ಶರೀರವು ಬಿಳುಪೇರಿ, ಚುಕ್ಕೆಗಳಡಗಿದ ಉಷಃಕಾಲದಂತೆ ಅವಳು ತೋರುತ್ತಿದ್ದಳು. ಮಣ್ಣಿನ ವಾಸನೆ ಮೇನಾದೇವಿ ಮುಖದಿಂದ ಹೊರಸೂಸುತ್ತಿತ್ತು. ಗರ್ಭಿಣಿಯಾಗಿದ್ದ ಮೇನಾದೇವಿ ಪತಿ ಹಿಮವಂತನ ಮನಸ್ಸನ್ನು ರಂಜಿಸುತ್ತಿದ್ದರೆ, ಪತ್ನಿಯ ಬಸಿರ ಬಯಕೆ ಏನೆಂಬುದನ್ನು ತಿಳಿಯಲು ಹಿಮವಂತ ಉತ್ಸುಕನಾಗುತ್ತಿದ್ದ. ಸಖಿಯರಿಂದ ಮೇನಾದೇವಿ ಬಯಕೆ ತಿಳಿದುಕೊಂಡು, ಪತ್ನಿ ಬಯಸಿದುದೆಲ್ಲವನ್ನೂ ತಂದುಕೊಡುತ್ತಿದ್ದ. ಗರ್ಭವತಿಯಾದ ಪತ್ನಿಯನ್ನು ಹಿಮವಂತನು ರತ್ನಗರ್ಭದ ಭೂಮಿಯಂತೆ ಜಾಗ್ರತೆಯಿಂದ ನೋಡಿಕೊಳ್ಳುತ್ತಿದ್ದ. ಪತ್ನಿಯನ್ನು ಅಗ್ನಿ ಅಡಗಿರುವ ಶಮಿಯಂಥ ಪವಿತ್ರಳೆಂದು ಭಾವಿಸಿ ಪೂಜ್ಯಭಾವನೆಯಿಂದ ವರ್ತಿಸುತ್ತಿದ್ದ.

ಗರ್ಭವ್ಯಥೆಯನ್ನು ದಾಟಿ ಮೇನಾದೇವಿಯ ಉದರವು ಬೆಳೆದು ದೊಡ್ಡದಾಗತೊಡಗಿತು. ಹಿಮವಂತ ತನ್ನ ಮಡದಿಯ ಗರ್ಭಸಂಸ್ಕಾರಕ್ಕಾಗಿ ಅನೇಕ ಧರ್ಮಕಾರ್ಯಗಳನ್ನು ಮಾಡಿದ. ಒಂದು ಶುಭದಿವಸ ಹಿಮವಂತನು, ಮಳೆಗರೆಯಲು ಸಿದ್ಧವಾದ ಮೇಘ ತುಂಬಿದ ಆಕಾಶದಂತೆ ಪ್ರಸವಕ್ಕೆ ಸಿದ್ಧಳಾದ ಮೇನಾದೇವಿಯನ್ನು ನೋಡಿದ. ಮೇನಾದೇವಿಗೆ ಪ್ರಸವಕಾಲವು ಸಮೀಪಿಸಿತು ಎಂಬುದನ್ನು ದೃಢಪಡಿಸಿಕೊಂಡ. ಮೇನಾದೇವಿ ತುಂಬು ಗರ್ಭವತಿಯಾಗಿದ್ದ ಸಮಯದಲ್ಲಿ ವಿಷ್ಣು, ಬ್ರಹ್ಮ ಮುಂತಾದ ದೇವತೆಗಳು, ಮುನಿಗಳು ಹಿಮವಂತನ ಮನೆಗೆ ಬಂದು ಮೇನಾದೇವಿಯ ಗರ್ಭದಲ್ಲಿರುವ ಜಗನ್ಮಾತೆಯನ್ನು ಸ್ತುತಿಸಿದರು.

'ಜಗನ್ಮಾತೆಯಾದ ಓ ದುರ್ಗಾದೇವಿ, ನಿನಗೆ ಜಯವು. ನೀನು ಸತ್ಯವ್ರತಳೂ ಸತ್ಯಪರಳೂ ಮನೋವಾಕ್ಯಗಳೆಂಬ ತ್ರಿಕರಣ ಶುದ್ಧಿಯುಳ್ಳವಳೂ ಆಗಿರುವೆ. ನೀನು ಸತ್ಯಸ್ವರೂಪಳು, ಸತ್ಯನಿಷ್ಠಳು, ಸತ್ಯದಲ್ಲಿ ಪ್ರೀತಿಯುಳ್ಳವಳು, ಸತ್ಯಕಾರಣಳು. ನಿನಗಿಂತಲೂ ಸತ್ಯವಾದ ವಸ್ತುವಿಲ್ಲ, ಸತ್ಯವೇ ನಿನ್ನ ಕಣ್ಣುಗಳು. ನೀನು ಶಿವನ ಪ್ರಿಯಮಡದಿಯು, ದೇವತೆಗಳ ದುಃಖವನ್ನು ಪರಿಹರಿಸುವ ಜಗನ್ಮಾತೆ. ಸರ್ವವ್ಯಾಪಕಳು, ಭಕ್ತವತ್ಸಲಳು, ಈಗ ನೀನು ನಿಶ್ಚಯಿಸಿದಂತೆ ಅವತರಿಸಿ ದೇವತೆಗಳ ಕಾರ್ಯವನ್ನು ನಡೆಸಿಕೊಡಬೇಕು. ನಿನ್ನ ಅನುಗ್ರಹದಿಂದ ನಾವು ಸನಾಥರಾಗಿರುವೆವು. ಪುಣ್ಯವಂತರೆಲ್ಲರೂ ನಿನ್ನಿಂದಲೇ ಸುಖವನ್ನು ಪಡೆಯುವರು. ನೀನಿಲ್ಲದೇ ಜಗತ್ತಿನಲ್ಲಿ ಯಾವುದೂ ಶೋಭಿಸಲಾರದು' ಎಂದು ಸ್ತುತಿಸಿ, ತೆರಳಿದರು.

ಮೇನಾದೇವಿಯ ಗರ್ಭದಲ್ಲಿದ್ದ ಕಾಳಿಕಾದೇವಿಯು ಜಗತ್ತಿಗೆ ಆವಿರ್ಭವಿಸಲು ಉದ್ಯುಕ್ತಳಾದಳು. ಆ ಸಮಯದಲ್ಲಿ ನಕ್ಷತ್ರಗಳು ಶಾಂತವಾಗಿ ಪ್ರಕಾಶಿಸಿದವು. ಗ್ರಹಗಳು ಮಂಗಳಕರವಾಗಿದ್ದವು. ಗಾಳಿಯು ತಂಪಾಗಿ ಬೀಸಿತು. ಸತ್ಪುರುಷರು ಹರ್ಷಗೊಂಡರು. ಪಾಪಿಗಳು ದುಃಖಗೊಂಡರು. ಆಕಾಶವು ನಿರ್ಮಲವಾಗಿತ್ತು. ಅರಣ್ಯ, ಗ್ರಾಮ, ಸಮುದ್ರ ಮುಂತಾದ ಎಲ್ಲದರೊಡನೆ ಭೂಮಿಯು ಮಂಗಳಕರವಾಗಿತ್ತು. ಸರೋವರಗಳಲ್ಲಿ ಕಮಲಗಳು ಅರಳಿದರೆ, ಗಗನದಲ್ಲಿ ದೇವದುಂದುಭಿಯು ಮೊಳಗಿ, ಪುಷ್ಪವೃಷ್ಟಿಯಾಯಿತು. ಸ್ವರ್ಗದಲ್ಲಿ ದೇವತೆಗಳು ಉತ್ಸವವನ್ನಾಚರಿಸಿದರು. ಗಂಧರ್ವರು, ವಿದ್ಯಾಧರಸ್ತ್ರೀಯರು ಇಂಪಾಗಿ ಹಾಡಿದರೆ, ಅಪ್ಸರೆಯರು ನರ್ತನ ಮಾಡಿದರು. ಇಂತಹ ಮಂಗಳ ಸಮಯದಲ್ಲಿ ಉಮಾದೇವಿಯು ಮೇನಾದೇವಿಯ ಗರ್ಭದಿಂದ ಜನಿಸಿದಳು ಎಂಬಲ್ಲಿಗೆ ಪಾರ್ವತೀಖಂಡದ ಆರನೇ ಅಧ್ಯಾಯ ಮುಗಿಯುತ್ತದೆ.

> ಅನಿವಾರ್ಯ ಕಾರಣಗಳಿಂದ ಇಂದಿನ ಸಂಚಿಕೆಯ ಜೊತೆ ಶಿಕ್ಷಣ ಪುಟ ನೀಡಲಾಗಿಲ್ಲ.
> –ಸಂ

ಲಂಕಾ–ಪಾಕ್ ಯುದ್ಧನೌಕೆಗಳ ಜಂಟಿ ಕವಾಯತು ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವು ಸ್ವಾತಂತ್ರ್ಯ ಅಮೃತ ಮಹೋತ್ಸವ ಆಚರಿಸುತ್ತಿರುವ ಹೊತ್ತಿನಲ್ಲೇ ಶ್ರೀಲಂಕಾ ಹಾಗೂ ಪಾಕಿಸ್ತಾನದ ಯುದ್ಧನೌಕೆಗಳು ಶ್ರೀಲಂಕಾದ ದಕ್ಷಿಣ ಕರಾವಳಿಯಲ್ಲಿ ಸೋಮವಾರ ಜಂಟಿ ಕವಾಯತು ನಡೆಸಲಿವೆ.

'ಪಾಕಿಸ್ತಾನದ ನೌಕಾಪಡೆಗೆ ಸೇರಿದ 'ಪಿಎನ್‌ಎಸ್ ತೈಮೂರ್' ಹಾಗೂ ಶ್ರೀಲಂಕಾ ನೌಕಾಪಡೆಗೆ ಸೇರಿದ 'ಎಸ್‌ಎಲ್‌ಎನ್‌ಎಸ್ ಸಿಂಧೂರಳಾ' ಯುದ್ಧನೌಕೆಗಳು ಜಂಟಿಯಾಗಿ ಕವಾಯತು ನಡೆಸಲಿವೆ. ಪರಸ್ಪರ ಕಾರ್ಯಸಾಧ್ಯತೆಯನ್ನು ಹೆಚ್ಚಿಸುವುದು ಹಾಗೂ ಸಹಕಾರವನ್ನು ಬಲಪಡಿಸುವುದು ಇದರ ಉದ್ದೇಶ' ಎಂದು ಶ್ರೀಲಂಕಾದ ನೌಕಾಪಡೆ ಹೇಳಿದೆ.

ಆದರೆ ಜಂಟಿ ಸಮರಾಭ್ಯಾಸ ನಡೆಸುವ ಸಾಧ್ಯತೆ ಇದೆ ಎಂಬ ಮಾಧ್ಯಮಗಳ ವರದಿಗಳನ್ನು ಶ್ರೀಲಂಕಾ ತಳ್ಳಿಹಾಕಿದೆ.

ಮಡಕೆ ಮುಟ್ಟಿದ್ದಕ್ಕೆ ಹಲ್ಲೆ ಪರಿಶಿಷ್ಟ ಬಾಲಕನ ಸಾವು

ಜೋಧಪುರ (ರಾಜಸ್ಥಾನ) (ಪಿಟಿಐ): ಕುಡಿಯುವ ನೀರಿನ ಮಡಕೆ ಮುಟ್ಟಿದ ಎನ್ನುವ ಕಾರಣಕ್ಕಾಗಿ ಖಾಸಗಿ ಶಾಲಾ ಶಿಕ್ಷಕರೊಬ್ಬರು 9 ವರ್ಷದ ಪರಿಶಿಷ್ಟ ಜಾತಿಯ ಬಾಲಕನನ್ನು ಹೊಡೆದಿದ್ದರು. ಈ ಬಾಲಕ ಶನಿವಾರ ಮೃತಪಟ್ಟಿದ್ದಾನೆ.

'ರಾಜಸ್ಥಾನದ ಜಾಲೋರ್ ಜಿಲ್ಲೆಯ ಸುರಾನಾ ಎಂಬ ಹಳ್ಳಿಯೊಂದರ ಖಾಸಗಿ ಶಾಲೆಯಲ್ಲಿ ಬಾಲಕ ಇಂದ್ರ ಮೇಘವಾಲ್ ಓದುತ್ತಿದ್ದ. ಬಾಲಕನಿಗೆ ಹೊಡೆದ ಶಿಕ್ಷಕ ಚಾಯಿಲ್ ಸಿಂಗ್‌ನನ್ನು (40) ಬಂಧಿಸಲಾಗಿದೆ. ಕೊಲೆಗೆ ಯತ್ನ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ದೌರ್ಜನ್ಯ ತಡೆ ಕಾಯ್ದೆ ಅಡಿ ಶಿಕ್ಷಕನ ಮೇಲೆ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ವರಿಷ್ಠಾಧಿಕಾರಿ ಜಾಲೋರ್ ಹರ್ಷವರ್ಧನ್ ಅಗರ್ವಾಲ್ ತಿಳಿಸಿದರು.

ಪ್ರಜ್ಞೆ ತಪ್ಪಿತ್ತು: 'ಜುಲೈ 20ರಂದು ಘಟನೆ ನಡೆದಿತ್ತು. ಮಗನ ಮುಖ ಮತ್ತು ಕಿವಿಗೆ ಗಾಯಗಳಾಗಿದ್ದವು; ಪ್ರಜ್ಞೆತಪ್ಪಿದ ಸ್ಥಿತಿಯಲ್ಲಿದ್ದ. ನಂತರ ಮಗನನ್ನು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿಂದ ಉದಯಪುರ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಹೇಳಿದರು' ಎಂದು ಬಾಲಕನ ತಂದೆ ದೇವರಾಮ್ ಮೇಘವಾಲ್ ವಿವರಿಸಿದರು.

'ಉದಯಪುರ ಆಸ್ಪತ್ರೆಯಲ್ಲಿ ಒಂದು ವಾರಗಳ ಕಾಲ ಇರಿಸಿಕೊಳ್ಳಲಾಯಿತು. ಆರೋಗ್ಯದಲ್ಲಿ ಚೇತರಿಕೆಯ ಲಕ್ಷಣ ಕಾಣಲಿಲ್ಲ. ಆದ್ದರಿಂದ ಮಗನನ್ನು ಗುಜರಾತ್‌ನ ಅಹಮದಾಬಾದ್ ಆಸ್ಪತ್ರೆಗೆ ಸೇರಿಸಿದೆವು. ಅಲ್ಲಿಯೂ ಯಾವುದೇ ಚೇತರಿಕೆ ಆಗಲಿಲ್ಲ. ಕೊನೆಗೂ ಶನಿವಾರ ತೀರಿಹೋದ' ಎಂದು ಅವರು ಬೇಸರಿಸಿದರು.

₹5 ಲಕ್ಷ ಪರಿಹಾರ ಘೋಷಣೆ: ಪ್ರಕರಣ ಕುರಿತು ಮಾತನಾಡಿರುವ ಮುಖ್ಯಮಂತ್ರಿ ಅಶೋಕ್ ಗೆಹಲೋತ್, ಬಾಲಕನ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ₹5 ಲಕ್ಷ ಪರಿಹಾರವನ್ನು ಶನಿವಾರ ಘೋಷಿಸಿದ್ದಾರೆ. 'ಪ್ರಕರಣದ ತನಿಖೆ ನಡೆಸಲಾಗುವುದು. ಆದಷ್ಟು ಬೇಗ ಬಾಲಕನ ಕುಟುಂಬಕ್ಕೆ ನ್ಯಾಯ ಒದಗಿಸಲಾಗುವುದು' ಎಂದು ಅವರು ಟ್ವೀಟ್ ಮಾಡಿದ್ದಾರೆ.

ರಾಜ್ಯ ಶಿಕ್ಷಣ ಇಲಾಖೆಯು ಪ್ರಕರಣದ ಕುರಿತು ತನಿಖೆ ನಡೆಸುವಂತೆ ಇಬ್ಬರು ಅಧಿಕಾರಿಗಳಿಗೆ ಸೂಚನೆ ನೀಡಿದೆ. ವರದಿಯನ್ನು ತಾಲ್ಲೂಕು ಶಿಕ್ಷಣಾಧಿಕಾರಿಗೆ ನೀಡುವಂತೆ ಹೇಳಿದೆ.

ಬಿಜೆಪಿ ಆಕ್ರೋಶ: ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಸಂಭ್ರಮಿಸುವ ಹೊತ್ತಿನಲ್ಲಿ ನಡೆದ ದಲಿತ ಬಾಲಕನ ಸಾವು, ನಾವು ಯಾವ ಸ್ಥಿತಿಯಲ್ಲಿದ್ದೇವೆ ಎಂಬುದನ್ನು ಚಿಂತಿಸುವಂತೆ ಮಾಡಿದೆ ಎಂದು ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದೆ.

ಸಂಕ್ಷಿಪ್ತ ಸುದ್ದಿ

'ಸಂವಿಧಾನ ರಕ್ಷಣೆಗೆ ಯುವ ಸಮುದಾಯ ಸಿದ್ಧವಿರಬೇಕು'

ನವದೆಹಲಿ (ಪಿಟಿಐ): 'ಸಂವಿಧಾನ ಮತ್ತು ನಾಗರಿಕ ಹಕ್ಕುಗಳನ್ನು ರಕ್ಷಿಸಲು ಹಾಗೂ ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಲು ಯುವ ಸಮುದಾಯ ಸದಾ ಸಿದ್ಧವಿರಬೇಕು' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಹೇಳಿದ್ದಾರೆ.

'ದೇಶ ಹಾಗೂ ಸಮಾಜಕ್ಕೆ ಎದುರಾಗುವ ಬೆದರಿಕೆಗಳ ವಿರುದ್ಧ ಸದಾ ಜಾಗರೂಕರಾಗಿರಬೇಕು. ಇಲ್ಲದೇ ಹೋದರೆ ಬ್ರಿಟಿಷರ ವಿರುದ್ಧ ಹೋರಾಡಿ ಗಳಿಸಿರುವ ಸ್ವಾತಂತ್ರ್ಯ, ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯ ಹಾಗೂ ನಾಗರಿಕ ಹಕ್ಕುಗಳು ಕಳೆದುಹೋಗಲಿವೆ' ಎಂದು ತಿಳಿಸಿದ್ದಾರೆ.

'ನಾಗಾಲ್ಯಾಂಡ್ ದೇಶದ ಅವಿಭಾಜ್ಯ ಅಂಗ'

ಗುವಾಹಟಿ: ನಾಗಾಲ್ಯಾಂಡ್ ಯಾವಾಗಲೂ ದೇಶದ ಅವಿಭಾಜ್ಯ ಅಂಗವಾಗಿಯೇ ಇರುತ್ತದೆ ಎಂದು ರಾಜ್ಯಪಾಲ ಜಗದೀಶ್ ಮುಖಿ ಅವರು ಎಂಎಸ್‌ಸಿಎನ್ (ಐಎಂ) ಬಂಡುಕೋರರ ಸಂಘಟನೆ ನೀಡಿದ್ದ ಹೇಳಿಕೆಗೆ ಭಾನುವಾರ ತಿರುಗೇಟು ಕೊಟ್ಟಿದ್ದಾರೆ.

ನಾಗಾ ಜನರು ಭಾರತೀಯರೂ ಅಲ್ಲ, ಬರ್ಮಾದವರೂ (ಮ್ಯಾನ್ಮಾರ್) ಅಲ್ಲ ಎಂದು ಬಂಡುಕೋರರು ಹೇಳಿಕೊಂಡಿದ್ದರು.

ಸ್ವಾತಂತ್ರ್ಯ ದಿನಾಚರಣೆಯ ನಿಮಿತ್ತ ರಾಜ್ಯದ ಜನತೆ ಉದ್ದೇಶಿಸಿ ಮಾತನಾಡಿದ ಅವರು, ' ಪ್ರೀತಿಯ ನಾಗಾ ಸಹೋದರ, ಸಹೋದರಿಯರೇ, ನಾಗಾಲ್ಯಾಂಡ್ ದೇಶದ ಅವಿಭಾಜ್ಯ ಅಂಗ. ನಮ್ಮ ಅನನ್ಯ ಸಾಂಸ್ಕೃತಿಕ ಹೆಗ್ಗುರುತನ್ನು ಕಾಪಾಡಿಕೊಳ್ಳಬೇಕು. ವಸಾಹತುಶಾಹಿ ಮನಸ್ಥಿತಿ ತೊರೆದು, ದೇಶದ ಹಿತಕ್ಕಾಗಿ ದೇಶವಾಸಿಗಳೊಂದಿಗೆ ಹೆಜ್ಜೆ ಹಾಕಿ' ಎಂದರು.

'ದೇಶ ವಿಭಜನೆ ಬೀಜ ಬಿತ್ತಿದ್ದೇ ಸಾವರ್ಕರ್'

ರಾಯಪುರ (ಪಿಟಿಐ): ವೀರ್ ಸಾವರ್ಕರ್ 1925ರಲ್ಲಿಯೇ ದೇಶ ವಿಭಜನೆಯ ಬೀಜ ಬಿತ್ತಿದ್ದರು ಎಂದು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಭಾನುವಾರ ಹೇಳಿದರು. ಈ ಮೂಲಕ ಆಗಸ್ಟ್ 14 ಅನ್ನು ದೇಶ ವಿಭಜನೆಯ ಭಯಾನಕತೆ ನೆನಪಿನ ದಿನವನ್ನಾಗಿ ಆಚರಿಸುವುದಾಗಿ ಘೋಷಿಸಿರುವ ಬಿಜೆಪಿಗೆ ತಿರುಗೇಟು ನೀಡಿದರು.

ಭಾನುವಾರ ಈ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸಾವರ್ಕರ್ 1925ರಲ್ಲಿಯೇ ದೇಶ ವಿಭಜನೆಯ ಬೀಜ ಬಿತ್ತಿದ್ದರು. ಎರಡು ರಾಷ್ಟ್ರದ ಪರಿಕಲ್ಪನೆಯನ್ನು ಹುಟ್ಟುಹಾಕಿದ್ದೇ ಸಾವರ್ಕರ್. ಇದನ್ನು 1937ರಲ್ಲಿ ಮಹಮ್ಮದ್ ಅಲಿ ಜಿನ್ನಾ ಬೆಂಬಲಿಸಿದರು. ಅವರು (ಬಿಜೆಪಿ) ವಿಭಜಕರು. ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತೀಯ ಜನತಾ ಪಕ್ಷದ ಪಾತ್ರ ಏನು' ಎಂದು ಪ್ರಶ್ನಿಸಿದರು.

'1942ರ ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ ಆರ್‌ಎಸ್‌ಎಸ್, ಬಿಜೆಪಿ ನಾಯಕರು ಚಳವಳಿಯನ್ನು ಹತ್ತಿಕ್ಕುವುದು ಹೇಗೆಂದು ಹೇಳುತ್ತಿದ್ದರು. ಭಾರತೀಯ ಜನಸಂಘದ ಸಂಸ್ಥಾಪಕ ಶ್ಯಾಮ್ ಪ್ರಸಾದ್ ಮುಖರ್ಜಿ ವೈಸರಾಯ್‌ಗೆ ಪತ್ರ ಬರೆದಿದ್ದರು. ಬ್ರಿಟಿಷರು ಭಾರತ ಬಿಟ್ಟು ತೊಲಗುವುದು ಅವರಿಗೆ ಇಷ್ಟ ಇರಲಿಲ್ಲ. ಇವತ್ತಿಗೂ ಅವರು ಮಹಾತ್ಮ ಗಾಂಧೀಜಿ ಅವರನ್ನು ಟೀಕಿಸುತ್ತಾರೆಯೇ ವಿನಃ ಬ್ರಿಟಿಷರನ್ನಲ್ಲ' ಎಂದು ಆರೋಪಿಸಿದರು.

ಎಟಿಎಸ್‌ನಿಂದ ಜೆಇಎಂ ಉಗ್ರನ ಬಂಧನ

ಲಖನೌ (ಪಿಟಿಐ): ಜೈಷ್-ಎ-ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆ ಜೊತೆ ನಂಟು ಹೊಂದಿದ್ದ ಆರೋಪದಡಿ 19 ವರ್ಷದ ಯುವಕನನ್ನು ಉತ್ತರ ಪ್ರದೇಶದ ಭಯೋತ್ಪಾದಕ ನಿಗ್ರಹ ದಳ (ಎಟಿಎಸ್) ಭಾನುವಾರ ಬಂಧಿಸಿದೆ.

'ಬಿಜೆಪಿ ವಕ್ತಾರೆಯಾಗಿದ್ದ ನೂಪುರ್ ಶರ್ಮಾ ಅವರ ಕೊಲೆಗೆ ನಿಯೋಜನೆಗೊಂಡಿದ್ದ ಮೊಹಮ್ಮದ್ ನದೀಂ (25) ಎಂಬಾತನನ್ನು ಎಟಿಎಸ್ ಶುಕ್ರವಾರ ಬಂಧಿಸಿತ್ತು. ಆತ ನೀಡಿದ ಸುಳಿವಿನ ಆಧಾರದಲ್ಲಿ ಹಬೀಬುಲ್ ಇಸ್ಲಾಂ ಅಲಿಯಾಸ್ ಸೈಫುಲ್ಲಾನನ್ನು ಕಾನ್ಪುರದಲ್ಲಿ ಬಂಧಿಸಲಾಗಿದೆ. ಈತ ವರ್ಚುವಲ್ ಐಡಿಗಳನ್ನು ತಯಾರಿಸುತ್ತಿದ್ದ, ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನದ ಭಯೋತ್ಪಾದಕರಿಗಾಗಿ 50ಕ್ಕೂ ಹೆಚ್ಚು ವರ್ಚುವಲ್ ಐಡಿಗಳನ್ನು ಸೃಷ್ಟಿಸಿಕೊಟ್ಟಿದ್ದ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ ಭಾಗವತ್ ಪ್ರತಿಪಾದನೆ

'ಎಲ್ಲಾ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ'


ನಾಗಪುರ (ಪಿಟಿಐ): 'ಭಾರತ ಶ್ರೇಷ್ಠವೆನಿಸಿಕೊಳ್ಳಬೇಕು ಎಂದರೆ ದೇಶದ ಎಲ್ಲಾ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ ಎಂಬುದನ್ನು ಅರಿಯಬೇಕು. ವಿವಿಧ ಜಾತಿಯ ಜನರೂ ನಮ್ಮವರೇ ಎಂಬಂತಹ ವಾತ್ಸಲ್ಯ ಹೊಂದಿರಬೇಕು' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಭಾನುವಾರ ಹೇಳಿದ್ದಾರೆ.

ನಗರದಲ್ಲಿ ನಡೆದ '2047ರಲ್ಲಿ ಭಾರತ: ನನ್ನ ಮುನ್ನೋಟ, ನನ್ನ ಯೋಜನೆ' ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು 'ಭಾಷೆ, ಉಡುಗೆ, ಸಂಸ್ಕೃತಿಗಳಲ್ಲಿ ಸಣ್ಣ ವ್ಯತ್ಯಾಸ ಕಾಣಬಹುದು. ಆದರೆ, ಈ ವಿಷಯಗಳಿಗೆ ಹೆಚ್ಚು ಗಮನ ಕೊಡದೇ, ದೇಶಕ್ಕೆ ಸಂಬಂಧಿಸಿ ಸಮಗ್ರವಾಗಿ ಯೋಚಿಸುವುದು ಅಗತ್ಯ' ಎಂದು ಅವರು ಸಲಹೆ ನೀಡಿದರು.

'ಜಾತಿ ಹಾಗೂ ಇತರ ಪದ್ಧತಿಗಳಿಗೆ ಅನಗತ್ಯವಾಗಿ ಪ್ರಾಮುಖ್ಯತೆ ನೀಡುತ್ತಿದ್ದೇವೆ. ವೃತ್ತಿಗಾಗಿ ರೂಪುಗೊಂಡ ವ್ಯವಸ್ಥೆಗಳು, ಜನರು ಮತ್ತು ಸಮುದಾಯಗಳ ನಡುವೆ ಭಿನ್ನಾಭಿಪ್ರಾಯ ಸೃಷ್ಟಿಸಲು ಬಳಕೆಯಾದವು' ಎಂದು ಅಭಿಪ್ರಾಯಪಟ್ಟರು.

'ವೈವಿಧ್ಯತೆ ನಿರ್ವಹಣೆಗಾಗಿ ಜಗತ್ತು ಭಾರತದತ್ತ ನೋಡುತ್ತಿದೆ. ಪ್ರಪಂಚವು ವಿರೋಧಾಭಾಸಗಳಿಂದ ತುಂಬಿದೆ. ಆದರೆ ಭಿನ್ನತೆಯನ್ನು ಹೇಗೆ ನಿರ್ವಹಿಸಬೇಕು ಎಂಬುದನ್ನು ಭಾರತ ತೋರಿಸಿಕೊಡುತ್ತದೆ. ಹಲವಾರು ಐತಿಹಾಸಿಕ ಘಟನೆಗಳನ್ನು ನಮಗೆ ತಿಳಿಸಿಲ್ಲ ಅಥವಾ ಸಮರ್ಪಕವಾಗಿ ಬೋಧಿಸಿಲ್ಲ. ಉದಾಹರಣೆಗೆ ಸಂಸ್ಕೃತ ವ್ಯಾಕರಣ ಉಗಮವಾದ ಸ್ಥಳ ಭಾರತದಲ್ಲಿಲ್ಲ ಎಂದು ಹೇಳಲಾಗುತ್ತದೆ. ಆದರೆ, ಎಂದಾದರೂ ನಾವು ಈ ಬಗ್ಗೆ ಪ್ರಶ್ನಿಸಿದ್ದೇವೆಯೇ?' ಎಂದರು.

ಗುಂಡಣ್ಣ





ಆತ್ಮ ಸಂದರ್ಶನ

ಇಂದ್ರಿಯಾತೀತವನು ಪಿಡಿಯಲಿಂದ್ರಿಯಕಳವೆ? |
ಇಂದ್ರಧನು ಕೈದೋಟಿ ಕೊಂಕಿಗೆಟುಕುವುದೆ? ||
ಸಂದೃಶ್ಯವಾತ್ಮವಾತ್ಮಕೆ ಬೇರೆ ಕರಣದಿಂ |
ತಂದ್ರಿ ಬಿಡೆ ದೊರೆವುದದು – ಮಂಕುತಿಮ್ಮ ||
693 ||

ಪದ-ಅರ್ಥ: ಇಂದ್ರಿಯಾತೀತವನು = ಇಂದ್ರಿಯ + ಅತೀತವನು(ಮೀರಿದ್ದನ್ನು), ಪಿಡಿಯಲಿಂದ್ರಿಯಕಳವೆ = ಪಿಡಿಯಲು (ಹಿಡಿಯಲು) + ಇಂದ್ರಿಯಕೆ + ಅಳವೆ (ಸಾಧ್ಯವೆ), ಇಂದ್ರಧನು = ಕಾಮನಬಿಲ್ಲು, ಕೈದೋಟಿ = ಹೂವು ಕೊಯ್ಯುವ ಕೋಲಿನ, ಕೊಂಕಿಗೆಟಕುವುದೆ = ಕೊಂಕಿಗೆ (ಕೊಕ್ಕಿಗೆ) + ಎಟಕುವುದೆ, ಸದೃಶ್ಯವಾತ್ಮವಾತ್ಮಕೆ = ಸದೃಶ್ಯವು (ತೋರುವುದು) + ಆತ್ಮ + ಆತ್ಮಕೆ, ಕರಣ = ಸಾಧನ, ತಂದ್ರಿ = ಆಲಸ್ಯ, ಜಡತ್ವ

ವಾಚ್ಯಾರ್ಥ: ಇಂದ್ರಿಯಗಳನ್ನು ಮೀರಿದ್ದನ್ನು ಇಂದ್ರಿಯಗಳಿಂದ ಹಿಡಿಯಲು ಸಾಧ್ಯವೆ? ಹೂವು ಕೊಯ್ಯಲು ಬಳಸುವ, ಕೋಲಿಗೆ ಕಟ್ಟಿದ ಕೊಂಕಿಗೆ ಕಾಮನಬಿಲ್ಲು ನಿಲುಕೀತೇ? ಅಂತೆಯೇ ಆತ್ಮ- ಆತ್ಮಗಳ ದರ್ಶನಕ್ಕೆ ಬೇರೆ ಸಾಧನ ಬೇಕು. ಆಲಸ್ಯವನ್ನು ತೊರೆದರೆ ಅದು ದೊರಕುತ್ತದೆ.

ವಿವರಣೆ: ಪ್ರತಿಯೊಂದು ಕೆಲಸಕ್ಕೆ ಒಂದು ಸಾಧನ ಬೇಕು. ಬರೆಯಲು ಕಾಗದ-ಪೆನ್ನು ಬೇಕು, ನೃತ್ಯಕ್ಕೆ ಅಲಂಕಾರ, ಗೆಜ್ಜೆ, ವೇಷ ಬೇಕು. ಹಾಗೆ ಒಂದು ಸಾಧನದಿಂದ ಕಾರ್ಯವನ್ನು ಸಾಧಿಸಬೇಕು. ಆದರೆ ಪೆನ್ನಿನಿಂದ, ಬ್ರಶ್‌ನಿಂದ ಆಕಾಶದಲ್ಲಿ ಚಿತ್ರ ಬರೆಯಲು ಸಾಧ್ಯವೇ? ಮನೆಯ ಕಡೆಗೋಲಿನಿಂದ ಸಮುದ್ರವನ್ನು ಕಡೆಯಲು ಆದೀತೆ? ಹಾಗೆಂದರೆ, ಪ್ರತಿಯೊಂದು ಉಪಕರಣಕ್ಕೊಂದು ಮಿತಿ ಇದೆ. ಅದರ ಕಾರ್ಯ ಆ ಮಿತಿಯಲ್ಲೇ. ಸಾಧನದ ಮಿತಿ ದಾಟಿದರೆ ಅದು ಅಸಹಾಯವಾಗುತ್ತದೆ, ನಿಷ್ಪ್ರಯೋಜಕ ಆಗುತ್ತದೆ. ಅದನ್ನೇ ಈ ಕಗ್ಗ ತಿಳಿಸುತ್ತದೆ. ಬಳ್ಳಿಯಲ್ಲಿ, ಮರದಲ್ಲಿ, ಕೈಗೆ ನಿಲುಕದಂತೆ ಇದ್ದ ಹೂವನ್ನು ಪಡೆಯಲು, ಒಂದು ಉದ್ದವಾದ ಕೋಲಿಗೆ ಕೊಕ್ಕನ್ನು ಸಿಕ್ಕಿಸಿ, ಕರಣವನ್ನಾಗಿ ಮಾಡಿಕೊಳ್ಳುತ್ತೇವೆ. ಆದರೆ ಅದನ್ನು ಬಳಸಿ ಆಕಾಶದಲ್ಲಿ ಅರಳಿ ನಿಂತ ಕಾಮನಬಿಲ್ಲನ್ನು ಕೊಯ್ದು ಪಡೆಯಲು ಆಗುವುದೆ?

ಕೊಕ್ಕಿಗೆ ಒಂದು ಮಿತಿ ಇದೆ. ಹೀಗಿರುವಾಗ ಯಾವುದು ಇಂದ್ರಿಯಗಳನ್ನು ಮೀರಿದ್ದೋ, ಅದನ್ನು ಇಂದ್ರಿಯಗಳಿಂದ ಹಿಡಿಯಲು ಸಾಧ್ಯವಾಗದು. ಅದಕ್ಕೇ ಅದನ್ನು ಇಂದ್ರಿಯಾತೀತವೆಂದು ಕರೆಯುವುದು. ಹಾಗಾದರೆ ಒಂದು ಆತ್ಮದ ದರ್ಶನ ಮತ್ತೊಂದು ಆತ್ಮಕ್ಕೆ ಆಗುವುದು ಹೇಗೆ?

ಆತ್ಮವೆಂಬುದು ಅವ್ಯಕ್ತ. ಅವ್ಯಕ್ತವೆಂದರೆ ಇದ್ದೂ ತೋರಿಸಿಕೊಳ್ಳದ ವಿಷಯ. ಅದು ಇದೆ ಎಂಬುದು ಗೊತ್ತು ಆದರೆ ಅದು ಕಾಣುವುದಿಲ್ಲ. ಇಂಥ ಆತ್ಮ, ಆತ್ಮಗಳ ಸಂದರ್ಶನಕ್ಕೆ ಇಂದ್ರಿಯಗಳಿಂದ ಸಾಧ್ಯವಾಗದ್ದರಿಂದ, ಬೇರೆ ಸಾಧನಗಳೇ ಬೇಕು. ಅದಕ್ಕೆ ಮುಖ್ಯ ಮನಶ್ಶಿಕ್ಷಣ ಮತ್ತು ಅಂತರಂಗ ಶುದ್ಧಿ. ಇವೆರಡೂ ಇಲ್ಲದಿದ್ದರೆ ಆತ್ಮಜ್ಞಾನದ ಮಾತು ಕೇವಲ ಶಬ್ದಖಂಡವಾಗಿ ನಿಲ್ಲುತ್ತದೆಯೇ ಹೊರತು ಅನುಭೂತ ಸತ್ಯವಾಗಲಾರದು. ಸಾಧನಗಳು ಸಕಾರಾತ್ಮಕವಾಗಿರಬೇಕು.

ಗೀತೆಯಲ್ಲಿ ಹೇಳುವಂತೆ,
ಮಯಿ ಚಾನನ್ಯಯೋಗೇನ ಭಕ್ತಿರವ್ಯಭಿಚಾರಿಣೀ |
ಭಗವಂತನಲ್ಲಿ ಅನನ್ಯವಾದ ಭಕ್ತಿ, ಪ್ರಪಂಚದ ಗದ್ದಲದಿಂದ ದೂರವಿರುವುದು ಮತ್ತು ಏಕಾಂತದ ಮೌನ,ಇವುಗಳ ಅನುಸಂಧಾನದಿಂದ ಆತ್ಮ-ಆತ್ಮಗಳ ಸಂದರ್ಶನಸಾಧ್ಯವಾದೀತು. ಇದಕ್ಕೆ ಸತತ ಪ್ರಯತ್ನ ಬೇಕು. ಆಲಸ್ಯ,ನಿದ್ರೆ, ಜಡತ್ವಗಳು ಮೊದಲು ದೂರವಾಗಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಆಗಸ್ಟ್ 15, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣ ಚತುರ್ಥಿ ಗಂ. 21-02 ನಕ್ಷತ್ರ: ಉತ್ತರಾಭಾದ್ರಾ ಗಂ. 21-07, ಯೋಗ: ಧೃತಿ ಗಂ. 23-23, ಕರಣ: ಬವ ಗಂ. 09-43, ಕರ್ಕಾಟಕ ಮಾಸದ 29 ನೇ ದಿನ. ರಾಹುಕಾಲ : ಬೆಳಿಗ್ಗೆ 07:30 – 09:00 ಸೂರ್ಯೋದಯ : 06-22 ಸೂರ್ಯಾಸ್ತ : 06-48 ಮುಸ್ಲಿಂ ದಿನಾಂಕ : 16 ಮೊಹರಮ್ ದಿನ ವಿಶೇಷ : ಸಂಕಷ್ಟಹರ ಚತುರ್ಥಿ(ಚಂದ್ರೋದಯ ರಾತ್ರಿ 09-37), ಶ್ರಾವಣ ಸೋಮವಾರ, ಸ್ವಾತಂತ್ರ್ಯ ದಿನಾಚರಣೆ, ಪಾರ್ಸಿ ಹೊಸ ವರ್ಷದ ಹಿಂದಿನ ದಿನ (ಪಾರ್ಸಿ) ಅದೃಷ್ಟ ಸಂಖ್ಯೆ : 1, 3

ಮೇಷ: ಇಂದು ಕೌಟುಂಬಿಕ ವಿಚಾರವಾಗಿ ತೆಗೆದುಕೊಳ್ಳುವ ಪ್ರತಿಯೊಂದು ಹೆಜ್ಜೆಯೂ ಮುಂದಿನ ದಿನಗಳಲ್ಲಿ ನಿಮ್ಮ ಕೀರ್ತಿಯನ್ನು ಹೆಚ್ಚಿಸುತ್ತದೆ. ನಿಮ್ಮ ತೀರ್ಮಾನಗಳು ಇನ್ನೊಬ್ಬರ ಮನಸ್ಸಿಗೆ ನೋವಾಗದಂತಿರಲಿ.

ವೃಷಭ: ಉತ್ತಮ ಅವಕಾಶಗಳು ನಿಮ್ಮೆಡೆಗೆ ಬರಲಿದೆ ಅದನ್ನು ಉತ್ತಮ ರೀತಿಯಲ್ಲಿ ಪ್ರಯೋಜನಾಕಾರಿಯಾಗಿ ಉಪಯೋಗಿಸಿಕೊಳ್ಳಿ. ಅಧಿಕಾರಿಗಳಿಗೆ ಸಿಬ್ಬಂದಿ ವರ್ಗದವರಿಂದ ಹೆಚ್ಚಿನ ಸಹಕಾರ ದೊರೆಯಲಿದೆ.

ಮಿಥುನ: ಮತ್ತೊಬ್ಬರ ಜೀವನದಲ್ಲಿ ನಿಮ್ಮ ಪಾತ್ರ ಮಹತ್ವದ್ದು ಎಂದು ತಿಳಿದು ಬಹಳ ಸಂತೋಷವಾಗುವುದು. ಈಗ ದೈವಬಲ ಉಂಟಾಗಿದ್ದು ನಿಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಣೆಯತ್ತ ಸಾಗಿರುವುದು ಅನುಭವಕ್ಕೆ ಬರುವುದು.

ಕರ್ಕಾಟಕ: ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು. ಕಷ್ಟವಾದರೂ ನೀವೆಂದೂ ಸೋಲುವುದಿಲ್ಲ. ಹವಾಮಾನಕ್ಕೆ ಹೊಂದಿಕೊಳ್ಳಲಾಗದೆ ಅನಾರೋಗ್ಯದಿಂದ ಬಳಲುವಂತಾಗುವುದು.

ಸಿಂಹ: ರಾಜಕೀಯ ವ್ಯಕ್ತಿತ್ವವನ್ನು ಹೊಂದಿರುವ ನಿಮಗೆ ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ಚೆನ್ನಾಗಿ ತಿಳಿದಿದೆ, ಅದರಂತೆಯೇ ನಡೆಯಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಹೆಚ್ಚಿನ ಪರಿಶ್ರಮದ ಅಗತ್ಯವಿದೆ.

ಕನ್ಯಾ: ವ್ಯಾಪಾರದಲ್ಲಿ ಉಂಟಾಗುವ ಪೈಪೋಟಿಯನ್ನು ಸಮರ್ಥವಾಗಿ ಎದುರಿಸುವಿರಿ. ಕೃಷಿಕರಿಗೆ ಧಾನ್ಯ ಮಾರಾಟಗಳಿಂದ ಅಧಿಕ ಆದಾಯ ಬರುವುದು. ಸ್ನೇಹನರಿ ವ್ಯಾಪಾರ ಕೈಗೊಳ್ಳುವ ಬಗ್ಗೆ ಮಾತುಕತೆ ನಡೆಸುವಿರಿ.

ತುಲಾ: ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಪ್ರಶಸ್ತಿ, ಗೌರವ ಸಿಗುವುದು. ಸಿದ್ಧ ಉಡುಪುಗಳ ಮಾರಾಟಗಾರರಿಗೆ ತಮ್ಮರಪ್ಪು ವ್ಯಾಪಾರಗಳಿಂದ ಹೆಚ್ಚಿನ ಲಾಭ ಪಡೆಯಬಹುದು.

ವೃಶ್ಚಿಕ: ಕೈಗಾರಿಕೋದ್ಯಮಿಗಳು ಲಾಭದಾಯಕ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಬುದ್ಧಿವಂತಿಕೆ ಉಪಯೋಗಿಸುವುದು ಉತ್ತಮ. ಸಂತೋಷ ಕೂಟದಲ್ಲಿ ಭಾಗವಹಿಸುವಿರಿ. ಮನರಂಜನೆಗಾಗಿ ಖರ್ಚು ಸಂಭವಿಸುವುದು.

ಧನು: ವ್ಯವಹಾರಗಳಲ್ಲಿ ಜಯವಿದ್ದು ದೊಡ್ಡ ಕಂಪನಿಯೊಂದಿಗೆ ಪಾಲುದಾರಿಕೆಯ ಅವಕಾಶ ಸಿಗಲಿದೆ. ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಕೆಲಸವಿದ್ದು ಕೆಲಸಗಾರರಲ್ಲಿ ಹುರುಪು ಮೂಡಿಸುವಲ್ಲಿ ಯಶಸ್ವಿಯಾಗುವಿರಿ.

ಮಕರ: ಪ್ರಭಾವಿ ವ್ಯಕ್ತಿಯೊಬ್ಬರಿಂದ ನಿಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ವ್ಯವಹಾರವು ಉತ್ತಮಗೊಳ್ಳುವುದು. ಅಬಕಾರಿ ಗುತ್ತಿಗೆದಾರರಿಗೆ ಆದಾಯ ಹೆಚ್ಚುವುದು.


ಕುಂಭ: ಷೇರು ವ್ಯವಹಾರದಲ್ಲಿ ಹೆಚ್ಚಿನ ಗಳಿಕೆ ಮಾಡುವಿರಿ. ಆಫೀಸಿನ ವಿಷಯದಂತೆಯೇ ಮನೆಯ ವಿಷಯಗಳ ಕಡೆಗೂ ಈ ದಿನ ಹೆಚ್ಚಿನ ಗಮನ ವಹಿಸುವುದು ಒಳ್ಳೆಯದು.

ಮೀನ: ಅಂಕಣಕಾರರಿಗೆ ಅಥವಾ ವೃತ್ತಿ ಬರಹಗಾರರಿಗೆ ವಿಪುಲ ಅವಕಾಶಗಳು ದೊರೆತು ಆದಾಯ ವೃದ್ಧಿಗೊಳ್ಳಲಿದೆ. ಚಿತ್ರಕಲೆಯಲ್ಲಿ ಆಸಕ್ತಿ ಮೂಡುವುದು. ವಿದೇಶದಲ್ಲಿ ಕೆಲಸ ದೊರಕಿಸಿಕೊಳ್ಳುವಿರಿ.

ಪದಬಂಧ 5050 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶದ ಒಂದು ವಿಭಾಗ (3)
5.ಸದ್ಯದ ಕಾಲಕ್ಕೆ ಸಂಬಂಧಿಸಿದ್ದು(4)
6.ಬಾಳೆಹಣ್ಣು ಬೆಲ್ಲ ಹಾಕಿ ಮಾಡಿದ ಸಿಹಿ ಖಾದ್ಯ(4)
7.ಹೆಬ್ಬೆರಳಿನ ಪಕ್ಕದ ಬೆರಳು(3)
10.ಬಿಡದಿ ಹತ್ತಿರ ಬಂದಿರುವ ಹೆಂಡತಿ(3)
12.ಕೆಟ್ಟ ಹವ್ಯಾಸ (4)
15.ಮನುಜ ಹಿಡಿದಿರುವ ಶ್ರೀಗಂಧ(4)
16.ಕತ್ತು ಮೇಲೆತ್ತಿ ನೋಡಿದಾಗ ಕಾಣಿಸಿದ ಪಿತ್ತಕೋಶ (3)

ಮೇಲಿಂದ ಕೆಳಕ್ಕೆ
1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಅದೇ ತಾನೆ ಕಡೆದ ಹೊಸಬೆಣ್ಣೆ(4)
3.ವಾರದೊಳಗೆ ಕುಳ್ಳ ಬಂದಿಹನಲ್ಲಾ!(3)
4.ಆಕಾಶವನ್ನು ಮುಟ್ಟುವಂಥದ್ದು(5)
8.ಮಗನಿಗೆ ತಿಳಿದಿರುವ ವೇದ (3)
9.ವಾರದ ಕೊನೆಗೆ ಬಂದಿರುವ ಅಭ್ಯರ್ಥಿ (5)
11.ಎಲ್ಲದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು(4)
13.ಬಿಡಿಸಲು ಕಷ್ಟವಾದ ಪ್ರಶ್ನೆ(3)
14.ಪ್ರಾಮಾಣಿಕತೆ ಇಲ್ಲಿ ಕಾಣುತ್ತಿದೆ(3)



5049ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಭೃಥಸ್ನಾನ
4.ಗುರಿಕಾರ 5.ಸನದು
7.ಬುದ್ಬುದ 10.ರಿವಾಜು
11.ಕಲಹ 13.ನಳಪಾಕ
15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ:
1.ಅಗಸ 2.ನಗು
3.ಪರಭಾರೆ 6.ದುರಾಚಾರಿ
7.ಬುರುಜು 8.ದಣಾಯಕ.
9.ಬಡನಡು 12.ಹರಕೆ
14.ಕವಿ

ಸುಡೊಕು 5436

	8			9		5		3
6	7	5						
			1		5		7	6
		4					5	
	5					1		9
2				5	9		6	
1			9					
	3					6	4	1
8		6		3			9	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5435 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಸೋಮವಾರ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸಾಧ್ಯತೆ.

ಹವಾಮಾನ: ಮಂಗಳವಾರ 21° 28° ಬುಧವಾರ 21° 28° ಗುರುವಾರ 21° 28°

ಸೂರ್ಯೋದಯ: 6:07 ಸೂರ್ಯಾಸ್ತ : 6:41 ಚಂದ್ರೋದಯ: ರಾ. 10:47 ಚಂದ್ರಾಸ್ತ: ಬೆ. 8:09

ಭಾನುವಾರದ ಹವಾಮಾನ : ಗರಿಷ್ಠ 28° ಕನಿಷ್ಠ 20°

ಪ್ರಜಾವಾಣಿ

ಮದ್ಯ ಖರೀದಿಗಾಗಿ ಕಳ್ಳತನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಖರೀದಿ ಹಾಗೂ ವಿಲಾಸಿ ಜೀವನಕ್ಕೆ ಹಣ ಹೊಂದಿಸಲು ಕಳ್ಳತನ ಮಾಡುತ್ತಿದ್ದ ಇಬ್ಬರನ್ನು ಹುಳಿಮಾವು ಪೊಲೀಸರು ಬಂಧಿಸಿದ್ದಾರೆ.

ನದೀಂ ಅಹಮ್ಮದ್, ಗುಲಾಂ ಹುಸೇನ್ ಬಂಧಿತ ಆರೋಪಿಗಳು.

'ಇವರ ಇನ್ನೊಬ್ಬ ಸಹಚರ ತಲೆಮರೆಸಿಕೊಂಡಿದ್ದಾನೆ. ಬಂಧಿತ ರಿಂದ ಎರಡು ಆಟೊಗಳು, ಆರು ದ್ವಿಚಕ್ರ ವಾಹನಗಳು ಹಾಗೂ ಕಾರು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಕೆಲ ಪ್ರಕರಣಗಳಲ್ಲಿ ಜೈಲಿಗೂ ಹೋಗಿ ಜಾಮೀನು ಮೇಲೆ ಹೊರ ಬಂದಿದ್ದರು. ಮದ್ಯ ವ್ಯಸನಿಗಳಾಗಿದ್ದರು. ಮದ್ಯ ಖರೀದಿಸಲು ಹಣ ಇಲ್ಲದಿದ್ದಾಗ, ಕಳ್ಳತನ ಮಾಡುತ್ತಿದ್ದರು' ಎಂದೂ ತಿಳಿಸಿವೆ.

'ಸಾರ್ವಜನಿಕ ಸ್ಥಳಗಳು ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ವಾಹನಗಳನ್ನು ಕಳವು ಮಾಡಿ, ನೋಂದಣಿ ಫಲಕ ಬದಲಿಸಿ ಮಾರುತ್ತಿದ್ದರು. ಕೆಲ ಮನೆಗಳಲ್ಲೂ ಕಳ್ಳತನ ಮಾಡಿರುವುದು' ತಿಳಿದುಬಂದಿದೆ.

'ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ, ಹುಳಿಮಾವು, ಚಂದ್ರಾ ಲೇಔಟ್ ಠಾಣೆಗಳ ವ್ಯಾಪ್ತಿಯಲ್ಲಿ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದೂ ತಿಳಿಸಿವೆ.

ಆರ್ಥಿಕ ಸಂಕಷ್ಟದಿಂದ ಪಾರಾಗಿಸುವುದು ನಮ್ಮ ಸಂಕಲ್ಪ– ಸಿ.ಎಂ ಬಸವರಾಜ ಬೊಮ್ಮಾಯಿ

ಬಿಎಂಟಿಸಿಗೆ ವಿದ್ಯುತ್ ಚಾಲಿತ 75 ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ವಿಧಾನಸೌಧದ ಮುಂಭಾಗದಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಹೊಸ ಮಾದರಿಯ ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) 75 ಬಸ್‌ಗಳನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ ಲೋಕಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, 'ಕೋವಿಡ್‌ನಿಂದಾಗಿ ಬಿಎಂಟಿಸಿ ಆರ್ಥಿಕ ಸಂಕಷ್ಟ ಎದುರಿಸುತ್ತಿದೆ. ಈ ಸಂಕಷ್ಟದಿಂದ ಪಾರು ಮಾಡುವ ಸಂಕಲ್ಪವನ್ನು ಸರ್ಕಾರ ಹೊಂದಿದೆ' ಎಂದರು.

'ಬೆಂಗಳೂರಿನಲ್ಲಿ 1.25 ಕೋಟಿ ಜನಸಂಖ್ಯೆ ಇದೆ. ಇದಕ್ಕೆ ಸಮಾನವಾಗಿ ವಾಹನಗಳ ಸಂಖ್ಯೆಯೂ ಇದೆ. ಮುಂದಿನ ಮೂರು ವರ್ಷದಲ್ಲಿ ಜನಸಂಖ್ಯೆಗಿಂತ ವಾಹನಗಳ ಸಂಖ್ಯೆಯೇ ಹೆಚ್ಚಾಗಲಿದೆ. ನಗರದ ವಿಸ್ತೀರ್ಣ, ರಸ್ತೆಗಳು ಅಷ್ಟೇ ಇವೆ. ಹೀಗಾಗಿ, ಬೆಂಗಳೂರು ಸಾರಿಗೆಯಲ್ಲಿ ಹೊಸ ಚಿಂತನೆ ಅಗತ್ಯ ಇದೆ' ಎಂದರು.

ಎಲೆಕ್ಟ್ರಿಕ್ ಬಸ್‌ಗಳ ಸಂಚಾರ

ಎಲ್ಲಿಂದ, ಎಲ್ಲಿಗೆ	ಎಷ್ಟು ಬಸ್‌ಗಳು
ಮೆಜೆಸ್ಟಿಕ್- ವಿದ್ಯಾರಣ್ಯಪುರ	10
ಶಿವಾಜಿನಗರ- ಯಲಹಂಕ	20
ಯಲಹಂಕ- ಕೆಂಗೇರಿ	10
ಮೆಜೆಸ್ಟಿಕ್- ಯಲಹಂಕ ಉಪನಗರ	15
ಹೆಬ್ಬಾಳ- ಸೆಂಟ್ರಲ್ ಸಿಲ್ಕ್ ಬೋರ್ಡ್	20



ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) ಹೊಸ ಮಾದರಿಯ ವಿದ್ಯುತ್ ಚಾಲಿತ (ಎಲೆಕ್ಟ್ರಿಕ್) ಬಸ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಸಿರು ನಿಶಾನೆ ತೋರಿಸಿದರು. ಬಳಿಕ ಈ ಬಸ್ಸಿನಲ್ಲಿ ಮುಖ್ಯಮಂತ್ರಿ ಸಂಚರಿಸಿದರು. ಗೃಹ ಸಚಿವ ಅರಗ ಜ್ಞಾನೇಂದ್ರ, ಬಿಎಂಟಿಸಿ ಅಧ್ಯಕ್ಷ ನಂದೀಶ ರೆಡ್ಡಿ, ವಿಧಾನ ಪರಿಷತ್ ಸದಸ್ಯ ನಾಗರಾಜ ಯಾದವ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಸತ್ಯವತಿ ಇದ್ದರು —ಪ್ರಜಾವಾಣಿ ಚಿತ್ರ

'ಸಾರಿಗೆ ಇಲಾಖೆಗೆ 2022-23ರಲ್ಲಿ ಸರ್ಕಾರ ₹ 800 ಕೋಟಿ ನೆರವು ನೀಡಿದೆ. ಕಳೆದ 2–3 ವರ್ಷಗಳಿಂದ ₹ 3 ಸಾವಿರ ಕೋಟಿ ನೆರವು ನೀಡಲಾಗಿದೆ. ಹಿಂದಿನ ಸರ್ಕಾರಗಳ ಆಡಳಿತ ವೈಖರಿಯಿಂದ ಸಾಕಷ್ಟು ಸಮಸ್ಯೆಗಳು ಸೃಷ್ಟಿಯಾಗಿವೆ. ಈ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದು ನಮ್ಮ ಗುರಿ' ಎಂದರು.

'ಒಟ್ಟು 300 ಎಲೆಕ್ಟ್ರಿಕ್ ಬಸ್‌ಗಳಿಗೆ ಅನುಮತಿ ನೀಡಲಾಗಿದೆ. ಈ ಪೈಕಿ, 75 ಬಸ್‌ಗಳನ್ನು ಲೋಕಾರ್ಪಣೆ ಮಾಡಿದ್ದೇನೆ. ಮುಂದಿನ ಹಂತಗಳಲ್ಲಿ ಉಳಿದ ಬಸ್‌ಗಳೂ ಬರಲಿವೆ. ಬಿಎಂಟಿಸಿಗೆ ಮುಂದಿನ ದಿನಗಳಲ್ಲಿ ಕೇಂದ್ರ ಸರ್ಕಾರ 922 ಎಲೆಕ್ಟ್ರಿಕ್ ಬಸ್‌ಗಳನ್ನು ಲೀಸ್‌ಗೆ ಕೊಡಲಿದೆ' ಎಂದು ಮಾಹಿತಿ ನೀಡಿದರು.

ಎಲೆಕ್ಟ್ರಿಕ್ ಬಸ್‌ಗಳ ವಿಶೇಷತೆ

12 ಮೀ. ಉದ್ದದ ಈ ಹವಾನಿಯಂತ್ರಿತ ರಹಿತ (ನಾನ್ ಎಸಿ) ಬಸ್‌ಗಳಲ್ಲಿ 40 + 1 ಆಸನಗಳಿವೆ. ಪ್ರಯಾಣಿಕರ ಸುರಕ್ಷತೆಗೆ ವೆಹಿಕಲ್ ಟ್ರ್ಯಾಕಿಂಗ್ ಯುನಿಟ್, ಸಿಸಿಟಿವಿ ಕ್ಯಾಮೆರಾ, ತುರ್ತು ಪ್ಯಾನಿಕ್ ಬಟನ್, ಎಲ್‌ಇಡಿ ಮಾರ್ಗ ಫಲಕ ಅಳವಡಿಸಲಾಗಿದೆ.

ಅಂಗವಿಕಲರ ಅನುಕೂಲಕ್ಕಾಗಿ ಗಾಲಿ ಕುರ್ಚಿ ಯಾಂತ್ರಿಕವಾಗಿ ಕಾರ್ಯನಿರ್ವಹಿಸಬಲ್ಲ ವ್ಯವಸ್ಥೆಯೂ ಇದೆ. ಸ್ವಿಚ್ ಮೊಬಿಲಿಟಿ ಆಟೊಮೊಟಿವ್ ಕಂಪನಿ ಈ ಬಸ್‌ಗಳನ್ನು 12 ವರ್ಷಗಳ ಅವಧಿಗೆ ನಿವ್ವಳ ವೆಚ್ಚ ಗುತ್ತಿಗೆ ಆಧಾರದಲ್ಲಿ ಕಾರ್ಯಾಚರಣೆ ನಡೆಸಲಿದೆ. ನಿತ್ಯ ಪ್ರತಿ ಬಸ್ಸಿಗೆ 225 ಕಿ.ಮೀ ಕಾರ್ಯಾಚರಣೆಗೆ ಪ್ರತಿ ಕಿ.ಮೀ ವಿದ್ಯುಚ್ಛಕ್ತಿ ಒಳಗೊಂಡಂತೆ ₹ 48.90 ಪಾವತಿಸಲಾಗುವುದು. ಒಂದು ಬಾರಿ ಚಾರ್ಜಿಂಗ್ ನಂತರ ಬಸ್ 150 ಕಿ.ಮೀ. ಕ್ರಮಿಸುತ್ತವೆ. ಉಳಿದ 75 ಕಿ.ಮೀಗಳನ್ನು ಅವಕಾಶ ಸಿಕ್ಕಾಗ ಚಾರ್ಜ್ ಮಾಡಿಕೊಂಡು ಕಾರ್ಯಾಚರಿಸಲಾಗುತ್ತದೆ. ಈ ಬಸ್‌ಗಳು ರಿಚಾರ್ಜ್‌ಗೆ ಮಾರ್ಗದಲ್ಲಿರುವ ನಿಗದಿತ ಬಸ್ ನಿಲ್ದಾಣಗಳಲ್ಲಿ ತ್ವರಿತವಾಗಿ ಚಾರ್ಜ್ ಮಾಡುವ ವ್ಯವಸ್ಥೆ ಇದೆ. ಇದಕ್ಕಾಗಿ, ಕೆಂಪೇಗೌಡ ಬಸ್ ನಿಲ್ದಾಣ (ಘಟಕ- 07), ಯಶವಂತಪುರ (ಘಟಕ- 08), ಕೆಂಗೇರಿ (ಘಟಕ- 12) ಮತ್ತು ಸೆಂಟ್ರಲ್ ಸಿಲ್ಕ್ ಬೋರ್ಡ್ ಬಸ್ ನಿಲ್ದಾಣಗಳನ್ನು ಗುರುತಿಸಲಾಗಿದೆ.


ಸುದ್ದಿ 2 ನಿಮಿಷ

ಇನ್ನಾರು ತಿಂಗಳಲ್ಲಿ ಸಿ.ಎಂ: ಎಚ್‌ಡಿಕೆ

ಬೆಂಗಳೂರು: 'ಇನ್ನು 6-7 ತಿಂಗಳಲ್ಲಿ ನಿಮ್ಮ ಕುಮಾರಸ್ವಾಮಿ ಮುಖ್ಯ ಮಂತ್ರಿ ಆಗುವುದನ್ನು ಯಾರು ತಪ್ಪಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಮತ್ತು ಬಿಜೆಪಿಗಿಂತ ಜೆಡಿಎಸ್ ಪಕ್ಷ ಹೆಚ್ಚು ಕ್ಷೇತ್ರಗಳಲ್ಲಿ ಜಯಗಳಿಸಲಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ನಡೆದ ಮತಗಟ್ಟೆ ಮಟ್ಟದ ಜೆಡಿಎಸ್ ಕಾರ್ಯಾಗಾರದಲ್ಲಿ ಸಮಾರೋಪದಲ್ಲಿ ಮಾತನಾಡಿದರು. 'ಗುಪ್ತಗಾಮಿನಿಯಂತೆ ಪಕ್ಷದ ಪರವಾಗಿ ಜನರ ಒಲವು ವ್ಯಕ್ತವಾಗುತ್ತಿದೆ. ಎರಡೂ ರಾಷ್ಟ್ರೀಯ ಪಕ್ಷಗಳ ರಾಜ ಕೀಯ ಚೇಷ್ಟೆಗಳಿಂದ ಕನ್ನಡಿಗರು ರೋಸಿ ಹೋಗಿದ್ದಾರೆ. ಶಾಸಕರಿಗೆ ಬಲ ತುಂಬುವ ಕೆಲಸ ಮಾಡಬೇಕು' ಎಂದರು.

'ಬಿಜೆಪಿ ಸರ್ಕಾರ ಎಲ್ಲ ಕ್ಷೇತ್ರಗಳಲ್ಲೂ ವಿಫಲವಾಗಿದೆ. ಕೋವಿಡ್‌ನಿಂದ ಮೃತಪಟ್ಟವರಿಗೆ ಪರಿಹಾರ ನೀಡಲಾಗುವುದು ಎಂದು ಹೇಳಿ, ಭರವಸೆ ಈಡೇರಿಸಲಿಲ್ಲ. ಬೆಂಗಳೂರಿನಲ್ಲಿ ಕೆಲಸ ಮಾಡದೇ ಹಣವನ್ನು ಲೂಟಿ ಮಾಡುತ್ತಿದ್ದಾರೆ' ಎಂದೂ ವಾಗ್ದಾಳಿ ನಡೆಸಿದರು.



ದಾಸರಹಳ್ಳಿ ಶಾಸಕ ಮಂಜುನಾಥ್ ಮಾತನಾಡಿ, 'ಕ್ಷೇತ್ರದ ಪ್ರಗತಿಗೆ ಹಗಲಿರುಳು ಕೆಲಸ ಮಾಡಿದ್ದೇನೆ. ಬಿಜೆಪಿ ಸರ್ಕಾರ ಹೆಜ್ಜೆಹೆಜ್ಜೆಗೂ ಕಿರುಕುಳ ನೀಡಿದೆ. ಕುಮಾರಸ್ವಾಮಿ ಸಹಕಾರದೊಂದಿಗೆ ಉತ್ತಮ ಕೆಲಸ ಮಾಡಿದ್ದೇನೆ' ಎಂದರು.

ವಿಧಾನ ಪರಿಷತ್ ಸದಸ್ಯರಾದ ಕೆ.ಎನ್.ತಿಪ್ಪೇಸ್ವಾಮಿ ಅವರು ಬೂತ್ ಮಟ್ಟದಲ್ಲಿ ಹೇಗೆ ಕೆಲಸ ಮಾಡಬೇಕು ಎಂಬ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

₹ 11 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ಹೆಸರಘಟ್ಟ ಹೋಬಳಿ ಅರಕೆರೆ ಮತ್ತು ಸೊಣ್ಣೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ₹ 11 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಸುರಧೇನುಪುರ ಗ್ರಾಮದಲ್ಲಿ ಚಾಲನೆ ನೀಡಿದರು.

ಇದೇ ವೇಳೆ 'ಹರ್ ಘರ್ ತಿರಂಗಾ' ಅಭಿಯಾನದ ಪ್ರಯುಕ್ತ ಭೇಟಿ ನೀಡಿದ ಪ್ರತಿ ಗ್ರಾಮದ ಮಕ್ಕಳಿಗೆ ರಾಷ್ಟ್ರಧ್ವಜವನ್ನು ನೀಡುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಮುಖ್ಯಮಂತ್ರಿ ವಿಶೇಷ ಅನುದಾನದಡಿಯಲ್ಲಿ ಇಂದು ಹೆಸರಘಟ್ಟ ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ಮುಖ್ಯರಸ್ತೆಗಳು, ಸಂಪರ್ಕ ರಸ್ತೆಗಳು ಮತ್ತು ಒಳಚರಂಡಿ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದ್ದು, ಮೂರು ತಿಂಗಳ ಅವಧಿಯೊಳಗೆ ಈ ಎಲ್ಲ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು. ಕ್ಷೇತ್ರ ವ್ಯಾಪ್ತಿಯ 20 ಗ್ರಾಮ ಪಂಚಾಯಿತಿ, 1 ನಗರಸಭೆ ಹಾಗೂ 5 ಬಿಬಿಎಂಪಿ ವಾರ್ಡ್ ಅಭಿವೃದ್ಧಿಗೆ ಸರ್ಕಾರದಿಂದ ₹ 150 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಚ್.ಬಿ.ಹನುಮಯ್ಯ, ಸತೀಶ್ ಕಡತನಮಲೆ, ಎಂ.ಮೋಹನ್ ಕುಮಾರ್, ಮಂಜುನಾಥ ರೆಡ್ಡಿ, ಕೆ.ಆರ್.ತಿಮ್ಮೇಗೌಡ, ಚೊಕ್ಕನಹಳ್ಳಿ ನಾಗೇಶ್, ಮುನಿದಾಸಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಲಕ್ಷ್ಮೀನಾರಾಯಣಗೌಡ, ಅನಸೂಯಮ್ಮ ಆಂಜನೇಯಗೌಡ, ಉಪಾಧ್ಯಕ್ಷೆ ಶಿಲ್ಪಾ ರಾಜಣ್ಣ ಉಪಸ್ಥಿತರಿದ್ದರು.

'ನೆಹರೂ ಚಿತ್ರ ಕೈಬಿಟ್ಟಿದ್ದು ಉದ್ದೇಶಪೂರ್ವಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆಹರೂ ಅವರು ಗಾಂಧೀಜಿಯವರ ಮಾತು ಕೇಳದೇ ದೇಶ ವಿಭಜನೆಗೆ ಕಾರಣರಾದವರು. ಆದ್ದರಿಂದ ಉದ್ದೇಶಪೂರ್ವಕವಾಗಿ ಅವರ ಭಾವಚಿತ್ರವನ್ನು ಸರ್ಕಾರಿ ಜಾಹೀರಾತಿನಲ್ಲಿ ಕೈಬಿಡಲಾಗಿದೆ' ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್ ಭಾನುವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸ್ವಾತಂತ್ರ್ಯದ ಬಳಿಕ ಕಾಂಗ್ರೆಸ್ ಅನ್ನು ವಿಸರ್ಜಿಸಬೇಕು ಎಂದು ಗಾಂಧೀಜಿ ಹೇಳಿದ್ದರು. ಆದರೆ, ನೆಹರೂ ಅವರು ಕಾಂಗ್ರೆಸ್ ಅನ್ನು ವಿಸರ್ಜಿಸಲಿಲ್ಲ. ಈ ಎಲ್ಲ ಕಾರಣಗಳಿಂದ ಅವರ ಚಿತ್ರವನ್ನು ಜಾಹಿರಾತಿನಿಂದ ಕೈಬಿಟ್ಟ ದ್ದೇವೆ' ಎಂದೂ ಸಮರ್ಥಿಸಿಕೊಂಡರು.

'ಟಿಪ್ಪು ತನ್ನ ಆಳ್ವಿಕೆಯ ಸಂದರ್ಭದಲ್ಲಿ ಅನೇಕ ದೇವಾಲಯಗಳನ್ನು ಧ್ವಂಸ ಮಾಡಿದ್ದ, ಲಕ್ಷಾಂತರ ಜನರನ್ನು ಮತಾಂತರ ಮಾಡಿದ್ದ. ಹಿಂದೂ ಧರ್ಮ ವಿರೋಧಿ ಟಿಪ್ಪುವಿನ ಭಾವಚಿತ್ರವನ್ನು ಕಾಂಗ್ರೆಸ್‌ನವರು ಏಕೆ ಹಾಕಿದ್ದಾರೆ. ಇದು ಕಾಂಗ್ರೆಸ್‌ನ ವಿಚಿತ್ರ ನಡೆ' ಎಂದೂ ಟೀಕಿಸಿದರು.



ಎನ್‌.ರವಿಕುಮಾರ್

'ಸಿದ್ದರಾಮಯ್ಯ ಅಧಿಕಾರ ಪಡೆಯಲು ಸೋನಿಯಾಗಾಂಧಿಯವರ ಕೈಗೊಂಬೆಯಾಗಿದ್ದಾರೆ. ಸೋನಿಯಾ ಮತ್ತು ರಾಹುಲ್ ಅವರು ಕೂತುಕೊಳ್ಳಿ ಎಂದರೆ ಕೂರಬೇಕು, ನಿಲ್ಲು ಎಂದರೆ ನಿಲ್ಲಬೇಕು. ಅಪ್ಪಿಕೊಳ್ಳಿ ಎಂದರೆ ಅಪ್ಪಿಕೊಳ್ಳಬೇಕು. ಇತ್ತೀಚೆಗೆ ರಾಹುಲ್ ಗಾಂಧಿ ಸೂಚಿಸಿದಾಗ ಸಿದ್ದರಾಮಯ್ಯ ಅವರನ್ನು ಡಿಕೆಶಿ ಅಪ್ಪಿಕೊಂಡರು ಎಂದು ರವಿಕುಮಾರ್ ಟೀಕಿಸಿದರು.

ಸಣ್ಣತನದ ಪರಮಾವಧಿ: ಎಚ್‌ಡಿಕೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ನೀಡಿರುವ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಜಾಹೀರಾತಿನಲ್ಲಿ ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಅವರ ಭಾವಚಿತ್ರ ಕೈಬಿಟ್ಟಿರುವುದು ಸಣ್ಣತನದ ಪರಮಾವಧಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಹೇಳಿದ್ದಾರೆ.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮತಗಟ್ಟೆ ಮಟ್ಟದ ಜೆಡಿಎಸ್ ಕಾರ್ಯಾಗಾರದ ನಂತರ ಅವರು ಮಾಧ್ಯಮಗಳ ಜತೆ ಮಾತನಾಡಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ನೆಹರೂ ಅವರ ಕೊಡುಗೆ ಸಾಕಷ್ಟಿದೆ. ಆದರೆ ಉದ್ದೇಶಪೂರ್ವಕವಾಗಿಯೇ ಕಡೆಗಣನೆ ಮಾಡಿರುವಂತಿದೆ. ನೆಹರೂ ಅವರು ಯಾವುದೇ ಪಕ್ಷಕ್ಕೆ ಸೇರಿರಲಿ, ಆದರೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರ ಕುಟುಂಬದ ಕೊಡುಗೆ ದೊಡ್ಡದು. ಅಂತಹವರ ಭಾವಚಿತ್ರವನ್ನು ಜಾಹೀರಾತಿನಲ್ಲಿ ಕೈಬಿಟ್ಟಿರುವುದು ಸಣ್ಣತನದ ರಾಜಕಾರಣ ಎಂದು ಕುಮಾರಸ್ವಾಮಿ ಹೇಳಿದ್ದಾರೆ.

ಸ್ವಾತಂತ್ರ್ಯ ಬಂದ ನಂತರ ದೇಶದಲ್ಲಿ ಕ್ಲಿಷ್ಟಕರ ಪರಿಸ್ಥಿತಿ ಇತ್ತು. ಆದರೂ ದೇಶವನ್ನು ನೆಹರೂ ಮುಂದಕ್ಕೆ ತೆಗೆದುಕೊಂಡು ಹೋದರು. ಅವರ ಚಿತ್ರಕ್ಕೆ ಕೊಕ್ಕೆ ಹಾಕಿದ ಇವರು ದೇಶಪ್ರೇಮಿಗಳಲ್ಲ. ದೇಶ ಪ್ರೇಮದ ಹೆಸರಿನಲ್ಲಿ ದೇಶವನ್ನು ಛಿದ್ರ ಛಿದ್ರ ಮಾಡುತ್ತಿದ್ದಾರೆ. ಸರ್ವ ಜನಾಂಗದ ಶಾಂತಿಯ ತೋಟ ಈ ದೇಶ. ಎಲ್ಲ ಕುಟುಂಬಗಳೂ ಶಾಂತಿಯಿಂದ ಬದುಕಬೇಕಿದೆ. ಆದರೆ ಈಗ ಏನಾಗಿದೆ ಎಂದು ಪ್ರಶ್ನಿಸಿದರು.

ಸಾವರ್ಕರ್ ಮತ್ತು ಟಿಪ್ಪು ಅವರ ಫ್ಲೆಕ್ಸ್ ಹರಿದ ತಕ್ಷಣ ದೇಶದ ಸಮಸ್ಯೆಗಳು ಬಗೆಹರಿಯುವುದಿಲ್ಲ ಎಂದು ಹೇಳಿದರು.

'ಕುರಿಗಾಹಿಗಳಿಗೆ ಅಪೆಕ್ಸ್ ಸಂಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮವನ್ನು ಮಾಂಸ ಉತ್ಪಾದನಾ ಒಕ್ಕೂಟವಾಗಿ ಪರಿವರ್ತಿಸಲು ಅಪೆಕ್ಸ್ ಸಂಸ್ಥೆ ರಚಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಕಟಿಸಿದರು.

ಕುರಿಗಾರರ ಸಭೆಯಲ್ಲಿ ಭಾನುವಾರ ಮಾತನಾಡಿದ ಅವರು, 'ಈಗಾಗಲೇ ಸಮಗ್ರ ಯೋಜನೆ ಸಿದ್ಧವಾಗಿದೆ. ಶೇ 25ರಷ್ಟು ಸಹಾಯಧನದ ಜೊತೆಗೆ ಶೇ 50ರಷ್ಟು ಸಾಲ ನೀಡುವ ಸಂಬಂಧ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ' ಎಂದು ತಿಳಿಸಿದರು.

'ಅಪೆಕ್ಸ್ ಸಂಸ್ಥೆಯು ಕುರಿಗಾಹಿಗಳ ಒಕ್ಕೂಟ ಮತ್ತು ನಿಗಮದ ಸಮನ್ವಯದೊಂದಿಗೆ ಮುನ್ನಡೆಯಬೇಕು. ಕೊಡುಗೆ ನೀಡುವ ವಿಚಾರದಲ್ಲಿ ಒಕ್ಕೂಟದ ಕೆಲಸ ಮುಖ್ಯ. ಕುರಿಗಾಹಿಗಳನ್ನು ಸದಸ್ಯರನ್ನಾಗಿಸಿಕೊಳ್ಳಬೇಕು. ಅವರು ಬಡವರಿರುವುರಿಂದ ಬೇರೆ ರೀತಿಯಲ್ಲಿ ಸಹಾಯ ಮಾಡಬೇಕಾಗುತ್ತದೆ. ಇದಕ್ಕಾಗಿ ಸಹಕಾರಿ ಅಪೆಕ್ಸ್ ಬ್ಯಾಂಕ್ ಜೊತೆ ಪ್ರತ್ಯೇಕ ಸಭೆ ನಡೆಸಲಾಗುವುದು' ಎಂದರು.

'20 ಸಾವಿರ ಸಂಘ ಗಳಿಗೆ 1.25 ಲಕ್ಷ ಸಹಾಯಧನ ನೀಡಲಾಗುವುದು. 20 ಕುರಿ ಮತ್ತು ಮೇಕೆಗಳನ್ನು ನೀಡಲಾಗುವುದು. ಇದು ಯಶಸ್ವಿಯಾದರೆ, ಒಟ್ಟಾರೆ ಕುರಿ ಸಾಕಾಣಿಕೆ ಒಂದು ವರ್ಷದಲ್ಲಿ ಹೆಚ್ಚಳವಾಗಿ ಕುರಿ ಮಾಂಸ ಉತ್ಪಾದನೆ ಹೆಚ್ಚಾಗಬೇಕು. ಅಪೆಕ್ಸ್ ಸಂಸ್ಥೆ ರಚಿಸಿ ಹಣ ಬಿಡುಗಡೆ ವಿಧಾನಗಳ ಬಗ್ಗೆ ರೂಪುರೇಷೆಗಳನ್ನು ಕಾಲಮಿತಿಯೊಳಗೆ ಸಿದ್ಧಪಡಿಸಲಾಗುವುದು' ಎಂದೂ ವಿವರಿಸಿದರು.

ಕುಂದು ಕೊರತೆ — ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

'ಸೋಮನಹಳ್ಳಿ ಸರ್ವಿಸ್ ರಸ್ತೆ ದುರಸ್ತಿಗೊಳಿಸಿ'

ಮಾಗಡಿ ರಸ್ತೆಯಿಂದ ಪುನೀತ್ ರಾಜ್‌ಕುಮಾರ್ ರಸ್ತೆಗೆ ಸಂಪರ್ಕ ಕಲ್ಪಿಸುವ ಸೋಮನಹಳ್ಳಿ ಸರ್ವಿಸ್ ರಸ್ತೆ ಗುಂಡಿಗಳಿಂದ ಕೂಡಿದ್ದು, ವಾಹನ ಚಾಲಕರು ಜೀವ ಭಯದಲ್ಲೇ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ದ್ವಿಚಕ್ರ ವಾಹನ ಸವಾರರು ಗುಂಡಿಗಳನ್ನು ತಪ್ಪಿಸಲು ಹೋಗಿ 'ಸ್ಕಿಡ್' ಆಗಿ ಅಪಘಾತಗಳು ಸಂಭವಿಸಿದ ಹಲವು ನಿದರ್ಶನಗಳಿವೆ. ಮಳೆಯಾದರೆ ಗುಂಡಿ ಯಾವುದು, ರಸ್ತೆ ಯಾವುದೂ ಎಂಬುದೇ ಗೊತ್ತಾಗುವುದಿಲ್ಲ. ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯೇ ಹದಗೆಟ್ಟಿದೆ. ಈ ರಸ್ತೆಯಲ್ಲಿ ಸಾವು ನೋವುಗಳು ಸಂಭವಿಸುವ ಮುನ್ನ ರಸ್ತೆ ದುರಸ್ತಿಗೊಳಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿವಪ್ರಸಾದ, ಸ್ಥಳೀಯ ನಿವಾಸಿ ಇನಾಮದಾರ



ಸೋಮನಹಳ್ಳಿ ಸರ್ವಿಸ್ ರಸ್ತೆ ಹಾಳಾಗಿರುವುದು



ಪೀಣ್ಯ ಬಸ್ ನಿಲ್ದಾಣ

ಬಸ್ ಸೌಲಭ್ಯ ಕಲ್ಪಿಸಲು ಆಗ್ರಹ

ಪೀಣ್ಯ ಬಸ್ ನಿಲ್ದಾಣದಿಂದ ಬೆಳಿಗ್ಗೆ ಕೇವಲ ನಾಲ್ಕು ಬಸ್‌ಗಳು ಸಂಚರಿಸುವುದರಿಂದ ಶಾಲಾ–ಕಾಲೇಜುಗಳಿಗೆ ಸಕಾಲಕ್ಕೆ ತೆರಳಲು ಆಗುತ್ತಿಲ್ಲ. ಬೆಳಿಗ್ಗೆ 7 ರಿಂದ 9ಗಂಟೆಯವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳೇ ಸಂಚರಿಸುತ್ತಿದ್ದರೂ ಕಡಿಮೆ ಬಸ್‌ಗಳನ್ನು ಸಂಚಾರಕ್ಕೆ ನಿಯೋಜಿಸಲಾಗಿದೆ. ಸಮಸ್ಯೆಯನ್ನು ಬಿಎಂಟಿಸಿ ಅಧಿಕಾರಿಗಳ ಗಮನಕ್ಕೆ ತೆಗೆದುಕೊಂಡು ಬಂದರೂ ಪ್ರಯೋಜನವಾಗಿಲ್ಲ. ಬೆಳಿಗ್ಗೆ ಈ ಭಾಗದಲ್ಲಿ ಹೆಚ್ಚಿನ ಬಸ್‌ಗಳ ಸೌಲಭ್ಯ ಕಲ್ಪಿಸಬೇಕು.

ಸುಹಾಸ್ ಗೌಡ.ಆರ್., ಕಾಲೇಜು ವಿದ್ಯಾರ್ಥಿ

'ರಸ್ತೆ ಮಧ್ಯ ಬಾಯ್ತೆರೆದ ಮೋರಿ'

ಹಂಪಿನಗರದ 3ನೇ ಮುಖ್ಯರಸ್ತೆಯ ಮಧ್ಯದಲ್ಲಿ ಮೋರಿಯೊಂದು ಬಾಯ್ತೆರದಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಇಲ್ಲಿಂದಲೇ ಓಡಾಡುತ್ತಾರೆ. ಒಂದು ವಾರದಿಂದ ಸಂಚರಿಸುವುದು ಕಷ್ಟವಾಗಿದೆ. ಈ ಮೋರಿಯನ್ನು ಸರಿಪಡಿಸಿ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಜ.ಬೋ.ಮಂಜುನಾಥ, ಹಂಪಿನಗರದ ನಿವಾಸಿ



ಹಂಪಿನಗರದ 3ನೇ ಮುಖ್ಯರಸ್ತೆಯ ಮಧ್ಯ ಬಾಯ್ತೆರೆದಿರುವ ಮೋರಿ

'ಪಾದಚಾರಿ ಮಾರ್ಗ ಸರಿಪಡಿಸಿ'



ಚಿಕ್ಕಪೇಟೆ ವೃತ್ತದಲ್ಲಿ ಪಾದಚಾರಿ ಮಾರ್ಗ ಹಾಳಾಗಿರುವುದು

ಚಿಕ್ಕಪೇಟೆ ವೃತ್ತದಲ್ಲಿರುವ ಪಾದಚಾರಿ ಮಾರ್ಗ ಹದಗೆಟ್ಟಿದೆ. ಈ ಮಾರ್ಗದಲ್ಲಿ ಹಾಸುಗಲ್ಲು ಮುರಿದುಬಿದ್ದಿದ್ದು, ಅಮಾಯಕರ ಜೀವ ತೆಗೆಯಲು ಕಾದು ಕುಳಿತಿದೆ. ನಗರದಲ್ಲಿ ಮಳೆಯಾದರೆ ಬಹುತೇಕ ಎಲ್ಲ ಭಾಗಗಳಿಂದ ಬರುವ ನೀರು ಇಲ್ಲೇ ಸಂಗ್ರಹವಾಗುತ್ತದೆ. ಈ ತೆರೆದ ಮೋರಿಯ ಮೇಲೆ ನೀರು ರಭಸದಿಂದ ಹರಿಯುತ್ತದೆ. ಚಿಕ್ಕಪೇಟೆ ವೃತ್ತದ ನಾಲ್ಕಾರು ಪ್ರದೇಶಗಳಿಗೆ ಇದು ಕೂಡು ರಸ್ತೆಯಾಗಿರುವುದರಿಂದ ಇಲ್ಲಿ ಅಧಿಕ ಜನ ಓಡಾಡುತ್ತಾರೆ. ಅನಾಹುತ ಸಂಭವಿಸುವ ಮುನ್ನ ಅಧಿಕಾರಿಗಳು ಈ ಮೋರಿಯನ್ನು ಮುಚ್ಚಿ ಪಾದಚಾರಿ ಮಾರ್ಗವನ್ನು ಸರಿಪಡಿಸಬೇಕು.

ಶಿವಪ್ರಸಾದ, ಪಾದಚಾರಿ

'ರಸ್ತೆ ದುರಸ್ತಿಗೊಳಿಸಿ'



ಹಂದ್ರಹಳ್ಳಿ ಶ್ರೀಚಕ್ರಾಂಗ್ರದಾ ಆಶ್ರಮ ದೇವಸ್ಥಾನದ ರಸ್ತೆ ದುಸ್ಥಿತಿ

ಹಂದ್ರಹಳ್ಳಿ ಶ್ರೀಚಕ್ರಾಂಗ್ರದ ಆಶ್ರಮ ಮತ್ತು ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹದಗೆಟ್ಟಿದೆ. ಈ ರಸ್ತೆ ಡಾಂಬರೀಕರಣವೇ ಆಗಿಲ್ಲ. ಮಳೆ ಬಂದರೆ ರಸ್ತೆಯೆಲ್ಲ ಕೆಸರು ಗದ್ದೆಯಾಗಲಿದೆ. ರಸ್ತೆಯುದ್ದಕ್ಕೂ ದೊಡ್ಡ ಗುಂಡಿಗಳು ಇದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ. ಮಳೆಗಾಲದಲ್ಲಿ ಗುಂಡಿಗಳಲ್ಲಿ ನೀರು ನಿಲ್ಲುವುದರಿಂದ ರಸ್ತೆ ಯಾವುದು ಗುಂಡಿ ಯಾವುದೂ ಎಂದು ಹುಡುಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ರಸ್ತೆ ದುರಸ್ತಿಗೊಳಿಸುವಂತೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಕೂಡಲೇ ಕ್ರಮಜರುಗಿಸಬೇಕು.

ಎಸ್.ಟಿ. ಸುರೇಶ್, ಸ್ಥಳೀಯ ನಿವಾಸಿ.

ಅಮೃತ ಸ್ವಾತಂತ್ರ್ಯೋತ್ಸವ: ಮಲ್ಲೇಶ್ವರಂನಲ್ಲಿ ಗಾಯನ ಸಂಭ್ರಮ

ಸಿಎಂ ಸಮ್ಮುಖದಲ್ಲಿ ನಡುರಾತ್ರಿ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೇದಿಕೆ ಮೇಲೆಲ್ಲ ತಿರಂಗದ ಝಗಮಗ ಬಣ್ಣಗಳ ಬೆಳಕು, ಸಭಾಂಗಣದಲ್ಲಿ ಸೇರಿದ್ದವರ ಕೈಯಲ್ಲಿ ಅರಳಿದ್ದ ರಾಷ್ಟ್ರಧ್ವಜಗಳು, ಶಾಸ್ತ್ರೀಯ ನೃತ್ಯ ಮತ್ತು ಸಂಗೀತಗಳ ಹದವಾದ ಸಮ್ಮಿಲನದಲ್ಲಿ ತಾಯಿ ಭಾರತಿಯ ಸ್ತುತಿ, ಬಳಿಕ ಸಮಕಾಲೀನ ಚಿತ್ರಗೀತೆಗಳ ಮೂಲಕ ಜನರಲ್ಲಿ ಸಂಭ್ರಮ ಹೆಚ್ಚಿಸಿದ ಗಾಯಕಿ ಮಂಗ್ಲಿ (ಸತ್ಯವತಿ) ಮತ್ತು ಅವರ ತಂಗಿ ಇಂದಿರಾವತಿ, ಇದಕ್ಕೆ ಕಳಶವಿಟ್ಟಂತೆ ನಡುರಾತ್ರಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಅವರಿಂದ ಧ್ವಜಾರೋಹಣ.

ಇವು ಡಾ.ಸಿ.ಎನ್.ಅಶ್ವತ್ಥ ನಾರಾಯಣ ಪ್ರತಿಷ್ಠಾನ ಮಲ್ಲೇಶ್ವರಂ 18ನೇ ಅಡ್ಡರಸ್ತೆಯ ಸರಕಾರಿ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಝಲಕ್!

ಮಲ್ಲೇಶ್ವರ ಕ್ಷೇತ್ರದ ಶಾಸಕರೂ ಆದ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಈ ಕಾರ್ಯಕ್ರಮದ ನೇತೃತ್ವ ವಹಿಸಿದ್ದರು

ರಾತ್ರಿ ಒಂಬತ್ತು ಗಂಟೆ ಹೊತ್ತಿಗೆ ಕಾರ್ಯಕ್ರಮ ಶುರುವಾಗಿದ್ದು, ಕ್ಷಣಗಳು ಉರುಳಿದಂತೆ ವಿವಿಧ ನೃತ್ಯಪಟುಗಳು ಭಾರತಾಂಬೆಯನ್ನು ವಿವಿಧ ಭಾವಗಳಲ್ಲಿ ಗ್ರಹಿಸಿ, ಅಭಿವ್ಯಕ್ತಿಸಿದರು. ಭಾರತ ಮಾತೆಯನ್ನು 'ಸೂರ್ಯ ಚಂದ್ರ ಕರ್ಣಾವತಂಸಂ ತಾರಾಗಣ' ಎಂದು ದಿವ್ಯವಾದ ಪ್ರಭಾವಳಿಯಲ್ಲಿ ಬೆಳಗಿಸಿದರು. ಇದಕ್ಕೆ ಭರತನಾಟ್ಯ, ಒಡಿಸ್ಸಿ, ಕಥಕ್ ಮುಂತಾದ ನೃತ್ಯ ಪ್ರಕಾರಗಳು ಆಸರೆಯಾಗಿದ್ದವು.

ಮಂಗ್ಲಿ ಮೋಡಿ: ಚಿತ್ತಾಕರ್ಷಕ ಬಾಣ-ಬಿರುಸು ದೇಶಾಭಿಮಾನದಿಂದ ಜಮಾಯಿಸಿದ್ದ ಹತ್ತು ಸಾವಿರಕ್ಕೂ ಹೆಚ್ಚು ಜನರನ್ನು ಬೇರೊಂದು ಲೋಕಕ್ಕೆ ಕರೆದೊಯ್ದಿದ್ದು ಗಾಯಕಿ ಮಂಗ್ಲಿ ಮತ್ತು ಅವರ ತಂಡ!

'ಕಣ್ಣು ಹೊಡಿಯಾಕ ಕಲಿತಾನ' ಎಂದುಕೊಂಡು ಜನಪದ ಲಯದಿಂದ ಆರಂಭಿಸಿದ ಮಂಗ್ಲಿ, ಬಳಿಕ 'ಏಳು ಬೆಟ್ಟಾದ ಒಡೆಯನೇ...' ಎನ್ನುತ್ತ ಮಲೆ ಮಾದಪ್ಪನಿಂದ ಹಿಡಿದು ಕಾಶಿ ವಿಶ್ವನಾಥನವರೆಗೂ ಭಾರತದ ವಿಹಾರ ಮಾಡಿಸಿದರು!

ದೇಶಕ್ಕೆ 75 ವರ್ಷಗಳ ಹಿಂದೆ ನಟ್ಟ ನಡುರಾತ್ರಿ ಸ್ವಾತಂತ್ರ್ಯ ಬಂತಷ್ಟೆ. ಆ ದಿವ್ಯ ಘಳಿಗೆಯನ್ನು ಕಾರ್ಯಕ್ರಮದಲ್ಲಿ ಭರ್ಜರಿ ಪಟಾಕಿ, ಬಾಣ-ಬಿರುಸು ಮತ್ತು ಸಿಡಿಮದ್ದುಗಳ ನಯನ ಮನೋಹರ ಪ್ರದರ್ಶನದ ಮೂಲಕ ಮರುಸೃಷ್ಟಿ ಮಾಡಲಾಯಿತು.

ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಅಶ್ವತ್ಥನಾರಾಯಣ ಸೇರಿದಂತೆ ಹಲವರ ಚಿತ್ತಾರಗಳ ಬೆಡಗಿನ ಲೋಕವು ಗಮನಸೆಳೆಯಿತು.



ಮಲ್ಲೇಶ್ವರದಲ್ಲಿ ಭಾನುವಾರ ರಾತ್ರಿ ನಡೆದ ಕಾರ್ಯಕ್ರಮದಲ್ಲಿ ಗಾಯಕಿ ಮಂಗ್ಲಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಸಿ.ಎನ್. ಅಶ್ವತ್ಥನಾರಾಯಣ ತ್ರಿವರ್ಣ ಧ್ವಜ ಹಿಡಿದು ಗಮನಸೆಳೆದರು

ಟಿಪ್ಪು ಸುಲ್ತಾನ್ ಫ್ಲೆಕ್ಸ್ ಹರಿದಿದ್ದ ಮೂವರ ಬಂಧನ

ಬೆಂಗಳೂರು: ಕಾಂಗ್ರೆಸ್ ಸ್ವಾತಂತ್ರ್ಯ ನಡಿಗೆ ಕಾರ್ಯಕ್ರಮದ ಅಂಗವಾಗಿ ಅಳವಡಿಸಿದ್ದ ಟಿಪ್ಪು ಸುಲ್ತಾನ್ ಭಾವಚಿತ್ರವಿದ್ದ ಫ್ಲೆಕ್ಸ್ ಹರಿದಿದ್ದ ಆರೋಪದಡಿ ರಾಷ್ಟ್ರರಕ್ಷಣಾ ಪಡೆ ಸಂಘಟನೆಯ ಅಧ್ಯಕ್ಷ ಪುನೀತ್ ಕೆರೆಹಳ್ಳಿ ಸೇರಿ ಮೂವರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕೆ.ಆರ್.ವೃತ್ತ ಸೇರಿ ವಿವಿಧೆಡೆ ಟಿಪ್ಪು ಸುಲ್ತಾನ್ ಭಾವಚಿತ್ರ, ತ್ರಿವರ್ಣ ಧ್ವಜದ ಸಮೇತ ಕಾರ್ಯಕ್ರಮದ ಫ್ಲೆಕ್ಸ್ ಅಳವಡಿಸಲಾಗಿತ್ತು. ಶನಿವಾರ ಪುನೀತ್ ಕೆರೆಹಳ್ಳಿ ಹಾಗೂ ಬೆಂಬಲಿಗರು, ಫ್ಲೆಕ್ಸ್ ಹರಿದು ಹಾಕಿದ್ದರು. 'ಟಿಪ್ಪು ಸುಲ್ತಾನ್ ಸ್ವಾತಂತ್ರ್ಯ ಹೋರಾಟಗಾರನಲ್ಲ' ಎಂದು ಘೋಷಣೆ ಕೂಗಿದ್ದರು. ಈ ದೃಶ್ಯ ಚಿತ್ರೀಕರಿಸಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಕಾಂಗ್ರೆಸ್ ಪಕ್ಷದ ರಾಜಾಜಿನಗರ ಕ್ಷೇತ್ರದ ಪ್ರಚಾರ ಸಮಿತಿ ಅಧ್ಯಕ್ಷ ಬಿ.ಮಂಜುನಾಥ್ ದೂರು ನೀಡಿದ್ದರು. ಆರೋಪಿ ಸಂಬಂಧಿಕರ ಮನೆಯಲ್ಲಿ ಭಾನುವಾರ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅಲ್ಲಿ ಅವರನ್ನು ವಶಕ್ಕೆ ಪಡೆಯಲಾಯಿತು ಎಂದು ತಿಳಿಸಿವೆ.

ಸಚಿವ ಬೈರತಿ ಬಸವರಾಜ್‌ಗೆ ಪಿತೃ ವಿಯೋಗ

ಕೆ.ಆರ್.ಪುರ: ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ್ ಅವರ ತಂದೆ ಬೈರತಿ ಆಂಜಿನಪ್ಪ (91) ಭಾನುವಾರ ನಿಧನರಾದರು. ವಯೋಸಹಜ ಕಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗಿದ್ದರು. ಮೃತರಿಗೆ ಬೈರತಿ ಬಸವರಾಜ್ ಸೇರಿದಂತೆ ಐವರು ಪುತ್ರರು, ಮೂವರು ಪುತ್ರಿಯರು ಇದ್ದಾರೆ. ಅಂತ್ಯಕ್ರಿಯೆ ಸಚಿವರ ಸ್ವಗ್ರಾಮ ಬೈರತಿಯಲ್ಲಿ ಭಾನುವಾರ ಸಂಜೆ ನಡೆಯಿತು.



ಆಂಜಿನಪ್ಪ

ಒಳನೋಟ — ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3QsN8ka

ಪುಣೆ ರೇಸ್

ಗ್ಯಾಂಗ್‌ಸ್ಟರ್ ಗೆಲ್ಲುವ ನಿರೀಕ್ಷೆ

ಮೇಯರ್ ಬಾಬುರಾವ್ ಸಹಾಸ್ ಮೆಮೋರಿಯಲ್ ಇಂಡಿಪೆಂಡೆನ್ಸ್ ಮಿಲಿಯನ್ ಪವರ್ಡ್ ಬೈ ಎಸ್‌ಆರ್‌ಎಸ್ ಗ್ರೂಪ್ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ಯಾಂಗ್‌ಸ್ಟರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಕಮಾಂಡ್‌ಮೆಂಟ್ 1, ಮ್ಯಾಡ್ ಲವ್ 4, ಜ್ಯಾಕ್ ಬುವರ್ 3
2ನೇ ರೇಸ್: ಮಾಂಟ್‌ಗೊಮೆರಿ 1, ಷಾಂಪೇನ್ ಸ್ಟೈಲ್ 3, ಲೈಟ್ನಿಂಗ್ ಬ್ಲೇಝ್ 5
3ನೇ ರೇಸ್: ಪ್ಯೂರ್ 6, ಬಕ್ಲೀ 8, ಅಲೈಸ್ಟರ್ 9
4ನೇ ರೇಸ್: ಪೆಟ್ರೋನಿಯಾ 2, ಕಿನ್ನರ 8, ಕೌಂಟ್ ಆಫ್ ಸವಾಯ್ 3
5ನೇ ರೇಸ್: ಹೌಸ್ ಆಫ್ ಲಾರ್ಡ್ಸ್ 1, ಗೋಲ್ಡನ್ ಲಯನೆಸ್ 3, ಸ್ವೀಟ್ ಎಮೋಷನ್ 7
6ನೇ ರೇಸ್: ಗ್ಯಾಂಗ್‌ಸ್ಟರ್ 1, ಕಮಾರಿಯಾ 2, ಸೌರ್ಯಾ 8
7ನೇ ರೇಸ್: ಎಸ್ಪೆರಾಂಜ 4, ಮ್ಯಾಜಿಲೆಟೊ 1, ಎನ್‌ಲೈಟೆನ್ಡ್ 7
8ನೇ ರೇಸ್: ರೆಡ್ ಡಸ್ಟ್ 7, ನಾರ್ಥರನ್ ಸಿಂಗರ್ 6, ಕಾಗ್ನೊಸ್ಕೊ 4

ಉತ್ತಮ ಬೆಟ್: ಎಸ್ಪೆರಾಂಜ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಅಮೃತ ಮಹೋತ್ಸವದ **ಮೈಲಿಗಲ್ಲುಗಳು...**

ದೇಶ ಸ್ವಾತಂತ್ರ್ಯ ಪಡೆದು 75 ವರ್ಷಗಳಾಗುತ್ತಿವೆ. ಅಮೃತ ಮಹೋತ್ಸವದ ಈ ಸಂಭ್ರಮದಲ್ಲಿ ಭಾರತ ಸಾಗಿಬಂದ ಹಾದಿಯ ಮಹತ್ವದ ಮೈಲಿಗಲ್ಲುಗಳನ್ನು ಇಲ್ಲಿ ದಾಖಲಿಸಲಾಗಿದೆ. ರಾಜಕೀಯ, ವಿಜ್ಞಾನ–ತಂತ್ರಜ್ಞಾನ, ಕ್ರೀಡೆ, ಕಲೆ... ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸಂಭ್ರಮಪಡುವಂಥ, ಹೆಮ್ಮೆ ಪಡುವಂಥ ಸಾಧನೆಯ ಕ್ಷಣಗಳನ್ನು ಇಲ್ಲಿ ಚುಟುಕಾಗಿ ತೆರೆದಿಡಲಾಗಿದೆ.

1947



ಪಂಡಿತ್ ನೆಹರೂ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ ಕ್ಷಣ

1950



ಸಂವಿಧಾನ ರಚನಾ ಸಮಿತಿಯು 1949ರ ನವೆಂಬರ್ 26ರಂದು ಭಾರತದ ಸಂವಿಧಾನ ವನ್ನು ಅಂಗೀಕರಿಸಿತು. 1950ರ ಜನವರಿ 26ರಂದು ಸಂವಿಧಾನ ಅಧಿಕೃತವಾಗಿ ಜಾರಿಗೆ ಬಂತು. ಭಾರತ ಗಣರಾಜ್ಯವಾಯಿತು.



1951

- **ಮೊದಲ ಸಾರ್ವತ್ರಿಕ** ಚುನಾವಣೆ. ಒಟ್ಟು 489 ಸ್ಥಾನಗಳಲ್ಲಿ 364 ಸ್ಥಾನಗಳನ್ನು ಗೆದ್ದುಕೊಂಡ ಕಾಂಗ್ರೆಸ್ ಅಧಿಕಾರ ಹಿಡಿಯಿತು. ಜವಾಹರಲಾಲ್ ನೆಹರೂ ದೇಶದ ಮೊದಲ ಪ್ರಧಾನಿಯಾದರು.
- **ಮೊದಲ ಪಂಚವಾರ್ಷಿಕ** ಯೋಜನೆ ಆರಂಭವಾಯಿತು. ಈ ಯೋಜನೆಯ ಬಹುಪಾಲು ಮೊತ್ತವನ್ನು ರೈಲು ಮಾರ್ಗಗಳ ಪುನರ್ ನಿರ್ಮಾಣ, ನೀರಾವರಿ ಯೋಜನೆಗಳು ಮತ್ತು ಕಾಲುವೆಗಳ ನಿರ್ಮಾಣಕ್ಕೆ ಬಳಸಲಾಯಿತು
- ಮೊದಲ ಏಷ್ಯನ್ ಗೇಮ್ಸ್ ನವದೆಹಲಿಯಲ್ಲಿ ನಡೆಯಿತು. 11 ರಾಷ್ಟ್ರಗಳು ಭಾಗವಹಿಸಿದ್ದವು. ಭಾರತ 15 ಚಿನ್ನ ಸೇರಿ ಒಟ್ಟು 51 ಪದಕಗಳನ್ನು ಗೆದ್ದುಕೊಂಡು ಎರಡನೇ ಸ್ಥಾನ ಪಡೆಯಿತು

1952



ಮಹಾರಾಷ್ಟ್ರದ ಕಶೋಬಾ ದಾದಾಸಾಹೇಬ್ ಜಾಧವ್, ಹೆಲ್ಸಿಂಕಿ ಒಲಿಂಪಿಕ್ಸ್‌ನ ಕುಸ್ತಿ ಸ್ಪರ್ಧೆ (ಫ್ರೀಸ್ಟೈಲ್)ಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ಇದು ವೈಯಕ್ತಿಕ ಕ್ರೀಡೆಗಳಲ್ಲಿ ಭಾರತ ಗೆದ್ದುಕೊಂಡ ಮೊದಲ ಪದಕ.

1953



ಆಗಸ್ಟ್ 1: ದೇಶದ ಪ್ರಮುಖ ವಿಮಾನಯಾನ ಸಂಸ್ಥೆ ಏರ್ ಇಂಡಿಯಾ ರಾಷ್ಟ್ರೀಕರಣಗೊಂಡಿತು. ಸರ್ಕಾರಿ ಸ್ವಾಮ್ಯದಲ್ಲಿ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಆರಂಭಕ್ಕೆ ಇದು ದಾರಿಮಾಡಿಕೊಟ್ಟಿತು.

1956

- **ಆಗಸ್ಟ್ 4:** ದೇಶದ (ಏಷ್ಯಾದ) ಮೊದಲ ಪರಮಾಣು ಸ್ಥಾವರ 'ಅಪ್ಸರಾ' ಮುಂಬೈ ಹೊರವಲಯದ ಟ್ರಾಂಬೆಯಲ್ಲಿ ಕಾರ್ಯಾರಂಭ ಮಾಡಿತು. ಈ ಯೋಜನೆಗೆ ಇಂಗ್ಲೆಂಡ್ ಸಹಯೋಗ ನೀಡಿತ್ತು.
- **ಭಾಷಾವಾರು** ಆಧಾರದಲ್ಲಿ ರಾಜ್ಯಗಳ ವಿಂಗಡಣೆಗಾಗಿ 'ರಾಜ್ಯ ಪುನರ್ ವಿಂಗಡಣೆ ಕಾಯ್ದೆ'ಯನ್ನು ಸಂಸತ್ತು ಅಂಗೀಕರಿಸಿತು

1958

ಮೆಹಬೂಬ್ ಖಾನ್ ನಿರ್ದೇಶನದ ಹಿಂದಿ ಚಿತ್ರ 'ಮದರ್ ಇಂಡಿಯಾ' ವಿದೇಶಿ ಭಾಷೆಗಳಲ್ಲಿ ಶ್ರೇಷ್ಠ ಚಿತ್ರವಾಗಿ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡ ದೇಶದ ಮೊದಲ ಚಲನಚಿತ್ರ ಎನಿಸಿತು.

1959

ಸೆಪ್ಟೆಂಬರ್ 15: ದೂರದರ್ಶನ ತನ್ನ ಪ್ರಸಾರ ಆರಂಭಿಸಿತು. 1976ರಲ್ಲಿ ಇದು ಆಕಾಶವಾಣಿಯಿಂದ ಬೇರ್ಪಟ್ಟಿತು. ಬಣ್ಣದ ಪ್ರಸಾರ ಆರಂಭವಾಗಿದ್ದು 1982ರಲ್ಲಿ

1961

ಡಿಸೆಂಬರ್ 19: 'ಅಪರೇಷನ್ ವಿಜಯ್' ಕಾರ್ಯಾಚರಣೆ ಮೂಲಕ ಗೋವಾವನ್ನು ಪೋರ್ಚುಗೀಸರ ಆಡಳಿತದಿಂದ ಮುಕ್ತಗೊಳಿಸಲಾಯಿತು. 1510 ರಿಂದ ಗೋವಾ ಪೋರ್ಚುಗೀಸರ ವಸಾಹತು ಆಗಿತ್ತು.

1965

ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಲು 'ಹಸಿರು ಕ್ರಾಂತಿ' ಯೋಜನೆಗೆ ಚಾಲನೆ ನೀಡಲಾಯಿತು. ಕೃಷಿ ವಿಜ್ಞಾನಿ ಡಾ.ಎಂ.ಎಸ್.ಸ್ವಾಮಿನಾಥನ್ 'ಹಸಿರು ಕ್ರಾಂತಿಯ ಪಿತಾಮಹ' ಎಂಬ ಗೌರವಕ್ಕೆ ಪಾತ್ರರಾದರು. ಕೆಲವೇ ವರ್ಷಗಳಲ್ಲಿ ಆಹಾರ–ಧಾನ್ಯಗಳ ಉತ್ಪಾದನೆ ಪ್ರಮಾಣ ಗಮನಾರ್ಹವಾಗಿ ಹೆಚ್ಚಿತು.

1966

ಮುಂಬೈನ ವೈದ್ಯೆ ರೀಟಾ ಫರಿಯಾ ವಿಶ್ವ ಸುಂದರಿ ಪ್ರಶಸ್ತಿಗೆ ಭಾಜನರಾದ ದೇಶದ (ಮತ್ತು ಏಷ್ಯಾದ) ಮೊದಲ ಸ್ಪರ್ಧಿ ಎನಿಸಿದರು.

1967



ಸಿತಾರ್ ಮಾಂತ್ರಿಕ ಪಂಡಿತ್ ರವಿ ಶಂಕರ್, ಗ್ರ್ಯಾಮಿ ಪುರಸ್ಕಾರಕ್ಕೆ ಪಾತ್ರರಾದ ಭಾರತದ ಮೊದಲ ಕಲಾವಿದ ಎಂಬ ಗೌರವಕ್ಕೆ ಪಾತ್ರರಾದರು.

1969

ಜುಲೈ 19: ಇಂದಿರಾ ಗಾಂಧಿ ನೇತೃತ್ವದ ಸರ್ಕಾರ ಸುಗ್ರೀವಾಜ್ಞೆ ಮೂಲಕ ದೇಶದ ಪ್ರಮುಖ 14 ಬ್ಯಾಂಕ್‌ಗಳ ರಾಷ್ಟ್ರೀಕರಣ ನಿರ್ಧಾರ ತೆಗೆದುಕೊಂಡಿತು. ದೇಶದ ಒಟ್ಟು ಠೇವಣಿಗಳ ಪೈಕಿ ಶೇ 85ರಷ್ಟನ್ನು ಈ ಬ್ಯಾಂಕುಗಳು ಹೊಂದಿದ್ದವು.

1971

ಇಂದಿರಾ ಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿ ದೇಶದ ವಿವಿಧ ರಾಜ್ಯಗಳ ರಾಜಮನೆತನದವರಿಗೆ ನೀಡಲಾಗುತ್ತಿದ್ದ ರಾಜಧನ (privy purses) ರದ್ದುಗೊಳಿಸಲಾಯಿತು. ಸಂವಿಧಾನದ 26ನೇ ತಿದ್ದುಪಡಿಯ ಅನುಸಾರ ಇದು ಜಾರಿಗೆ ಬಂತು.


1973

ಕೇಶವಾನಂದ ಭಾರತಿ Vs. ಭಾರತ ಸರ್ಕಾರ ಪ್ರಕರಣ ದೇಶದ ಕಾನೂನು ಇತಿಹಾಸದ ಪ್ರಮುಖ ಘಟ್ಟ. ಸಂವಿಧಾನದ ಮೂಲ ಸ್ವರೂಪವನ್ನು ಯಾವುದೇ ಕಾರಣಕ್ಕೆ ಬದಲಾಯಿಸುವಂತಿಲ್ಲ ಎಂದು 13 ಸದಸ್ಯರನ್ನು ಹೊಂದಿದ್ದ ಪೂರ್ಣಪ್ರಮಾಣದ ಪೀಠ 7–6 ಬಹುಮತದ ತೀರ್ಪು ನೀಡಿತು. ಕಾಸರಗೋಡಿನ ಎಡನೀರು ಮಠದ ಸ್ವಾಮೀಜಿಯಾಗಿದ್ದ ಕೇಶವಾನಂದ ಭಾರತಿ (1940–2020) ಸಲ್ಲಿಸಿದ ಅರ್ಜಿಯ ಮೇಲಿನ ವಿಚಾರಣೆ ಇದಾಗಿತ್ತು.



ಹುಲಿಗಳ ಸಂರಕ್ಷಣೆಗಾಗಿ ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನದಲ್ಲಿ (ಈಗಿನ ಉತ್ತರಾಖಂಡ) 'ಪ್ರಾಜೆಕ್ಟ್ ಟೈಗರ್' ಯೋಜನೆ ರೂಪಿಸಲಾಯಿತು. 2018ರ ಗಣತಿ ಪ್ರಕಾರ ದೇಶದಲ್ಲಿ 2,967 ಹುಲಿಗಳಿವೆ.

1974



ಮೇ 18ರಂದು ರಾಜಸ್ಥಾನದ ಪೋಖರಣ್ ಪರೀಕ್ಷಾ ಕೇಂದ್ರದಲ್ಲಿ ಭಾರತ ಮೊದಲ ಬಾರಿ ಯಶಸ್ವಿಯಾಗಿ ಪರಮಾಣು ಬಾಂಬ್ ಪರೀಕ್ಷೆ ನಡೆಸಿತು. 'ಅಪರೇಷನ್ ಸ್ಮೈಲಿಂಗ್ ಬುದ್ಧ' ಹೆಸರಿನಲ್ಲಿ ಈ ಪರೀಕ್ಷೆ ನಡೆಸಲಾಯಿತು.

1975



- **ಭಾರತ ದೇಶಿಯವಾಗಿ** ತಯಾರಿಸಿದ ಮೊದಲ ಉಪಗ್ರಹ 'ಆರ್ಯಭಟ'ವನ್ನು ಅಂದಿನ ಸೋವಿಯತ್ ರಷ್ಯಾದ ಕಪುಸ್ಟಿನ್ ಯಾರ್ ಕೇಂದ್ರದಿಂದ ಕಾಸ್ಮೋಸ್ 3ಎಂ ರಾಕೆಟ್ ಮೂಲಕ ಬಾಹ್ಯಾಕಾಶಕ್ಕೆ ಹಾರಿಸಲಾಯಿತು. ಭಾರತ ಈ ಸಾಧನೆ ಮಾಡಿದ ವಿಶ್ವದ 11 ನೇ ರಾಷ್ಟ್ರವಾಯಿತು.
- **ಮಲೇಷ್ಯಾದ ಕ್ವಾಲಾಲಂಪುರದಲ್ಲಿ** ನಡೆದ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಅಜಿತ್ ಪಾಲ್ ಸಿಂಗ್ ನೇತೃತ್ವದ ಭಾರತ ತಂಡ ಚಾಂಪಿಯನ್ ಕಿರೀಟ ಧರಿಸಿತು. ಫೈನಲ್‌ನಲ್ಲಿ 2–1 ಗೋಲುಗಳಿಂದ ಪಾಕಿಸ್ತಾನ ಮೇಲೆ ಜಯಗಳಿಸಿತು. ವಿಶ್ವಕಪ್ ಹಾಕಿಯಲ್ಲಿ ಭಾರತ ಗೆದ್ದ ಕೊನೆಯ ಪದಕ ಇದಾಗಿದೆ

1980




ಕನ್ನಡಿಗ ಪ್ರಕಾಶ್ ಪಡುಕೋಣೆ ಅವರು ವಿಶ್ವದ ಅಗ್ರ ಕ್ರಮಾಂಕದ ಬ್ಯಾಡ್ಮಿಂಟನ್ ಆಟಗಾರ ಎನಿಸಿದರು. ಆ ವರ್ಷ ಪ್ರತಿಷ್ಠಿತ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡ ಭಾರತದ ಮೊದಲ ಆಟಗಾರ ಎನಿಸಿದರು. ಫೈನಲ್‌ನಲ್ಲಿ ಇಂಡೊನೇಷ್ಯಾದ ಲೀಮ್ ಸ್ವಿ ಕಿಂಗ್ ಅವರನ್ನು ಮಣಿಸಿದರು.

1982

ಗಾಂಧಿ ಚಿತ್ರ ಬಿಡುಗಡೆ, ಚಿತ್ರದಲ್ಲಿ ಕಾಸ್ಟ್ಯೂಮ್ ಡಿಸೈನರ್ ಆಗಿದ್ದ ಭಾನು ಅಥೈಯಾ ಆಸ್ಕರ್ ಪ್ರಶಸ್ತಿ ಪುರಸ್ಕೃತರಾದ ಮೊದಲ ಭಾರತೀಯರಾದರು. ಬೆನ್ ಕಿಂಗ್ ಸ್ಲೇ ಗಾಂಧಿ ಪಾತ್ರ ವಹಿಸಿದ್ದರು.

1983



- **ಜೂನ್ 25:** ಕಪಿಲ್ ದೇವ್ ನೇತೃತ್ವದ ಭಾರತ ತಂಡ ಇಂಗ್ಲೆಂಡ್‌ನ ಲಾರ್ಡ್ಸ್‌ನಲ್ಲಿ ನಡೆದ ವಿಶ್ವಕಪ್ ಏಕದಿನ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಫೆವರೀಟ್ ಆಗಿದ್ದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿ ಟ್ರೋಫಿ ಗೆದ್ದುಕೊಂಡಿತು.
- **ಮಾರುತಿ ಕಾರು** ಮಾರುಕಟ್ಟೆಗೆ. ಇಂಡಿಯನ್ ಏರ್‌ಲೈನ್ಸ್‌ನ ಉದ್ಯೋಗಿ, ದೆಹಲಿಯ ಹರಪಾಲ್ ಸಿಂಗ್ ಮೊದಲನೆಯದಾಗಿ ಕಾರು ಕಿ ಪಡೆದರು.

1984

ಏಪ್ರಿಲ್ 3: ಸ್ಕ್ವಾಡ್ರನ್ ಲೀಡರ್ ರಾಕೇಶ್ ಶರ್ಮಾ, ಭಾರತದ ಮೊದಲ ಗಗನಯಾತ್ರಿ ಎನಿಸಿದರು. ರಷ್ಯಾದ ಇಬ್ಬರು ಗಗನಯಾತ್ರಿಗಳೊಂದಿಗೆ ಅವರು ಸಲ್ಯೂಟ್ ಬಾಹ್ಯಾಕಾಶ ಕೇಂದ್ರದಲ್ಲಿಳಿದರು. ವಿಂಗ್ ಕಮಾಂಡರ್ ಆಗಿದ್ದಾಗ ವಾಯುಪಡೆಯಿಂದ ನಿವೃತ್ತರಾದರು.

1985

- **ಜನವರಿ 30ರಂದು** ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೆ ಬಂದಿತು. ರಾಜೀವ್ ಗಾಂಧಿ ಪ್ರಧಾನಿಯಾಗಿದ್ದ ಅವಧಿಯಲ್ಲಿ 52ನೇ ತಿದ್ದುಪಡಿಯ ಮೂಲಕ ಈ ಕಾಯ್ದೆಯನ್ನು ಸಂವಿಧಾನದ 10ನೇ ಷೆಡ್ಯೂಲ್‌ನಲ್ಲಿ ಸೇರ್ಪಡೆಗೊಳಿಸಲಾಯಿತು.
- **ಏಪ್ರಿಲ್:** ಮಧ್ಯಪ್ರದೇಶದ ಶಾ ಬಾನೊ ಅವರಿಗೆ ಜೀವನಾಂಶ ನೀಡಬೇಕೆಂದು ಪತಿ ಮೊಹಮದ್ ಅಹಮದ್ ಖಾನ್ ಅವರಿಗೆ ಸುಪ್ರೀಂ ಕೋರ್ಟ್ ಆದೇಶಿಸಿತು. ಇದು ಶಾ ಬಾನೊ ಪ್ರಕರಣ ಎಂದೇ ಪ್ರಸಿದ್ಧಿ ಪಡೆಯಿತು.

1988

ಚೆನ್ನೈನ ವಿಶ್ವನಾಥನ್ ಆನಂದ್ ಅವರು ದೇಶದ ಮೊದಲ ಚೆಸ್ ಗ್ರ್ಯಾಂಡ್‌ಮಾಸ್ಟರ್ ಗೌರವಕ್ಕೆ ಪಾತ್ರರಾದರು.

1989



ಮೇ22: ಒಡಿಶಾದ ಚಾಂದಿಪುರ ಕರಾವಳಿಯ ಪರೀಕ್ಷಾ ಕೇಂದ್ರದಲ್ಲಿ ಭಾರತದ ಮೊದಲ ಮಧ್ಯಂತರ ಶ್ರೇಣಿಯ ಬಲಿಸ್ಟಿಕ್ ಕ್ಷಿಪಣಿ 'ಅಗ್ನಿ'ಯ ಪರೀಕ್ಷೆ ಯಶಸ್ವಿಯಾಗಿ ನಡೆಯಿತು



ದೇಶದಲ್ಲಿ ಮತದಾನದ ವಯಸ್ಸನ್ನು 21 ರಿಂದ 18ಕ್ಕೆ ಇಳಿಸಲಾಯಿತು. ಸಂವಿಧಾನದ 61ನೇ ತಿದ್ದುಪಡಿ ಮೂಲಕ ಈ ಕಾಯ್ದೆ ಜಾರಿಗೆ ಬಂದಿತು. ರಾಜೀವ್ ಗಾಂಧಿ ಆಗ ಪ್ರಧಾನಿಯಾಗಿದ್ದರು.

1991



ನವೆಂಬರ್: ಪಿ.ವಿ.ನರಸಿಂಹ ರಾವ್ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದ ಡಾ.ಮನಮೋಹನ್ ಸಿಂಗ್ ಅವರು ಆರ್ಥಿಕ ಉದಾರೀಕರಣ ನೀತಿಯನ್ನು ಪ್ರಕಟಿಸಿ, ಅದನ್ನು ಜಾರಿಗೆ ತರುವ ಪ್ರಯತ್ನ ಆರಂಭಿಸಿದರು. ಜಗತ್ತಿನ ದೊಡ್ಡ ಆರ್ಥಿಕ ಶಕ್ತಿಯಾಗಿ ದೇಶ ಹೊರಹೊಮ್ಮಲು ಈ ನಿರ್ಧಾರ ನೆರವಾಯಿತು.

1992



ಪ್ರಸಿದ್ಧ ಹಿಂದಿ ಮತ್ತು ಬಂಗಾಳಿ ಚಿತ್ರ ನಿರ್ದೇಶಕ ಸತ್ಯಜಿತ್ ರೇ ಅವರಿಗೆ ಜೀವಮಾನದ ಸಾಧನೆಗಾಗಿ ಗೌರವ ಆಸ್ಕರ್ ಪ್ರದಾನ ಮಾಡಲಾಯಿತು.

ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯೊಡನೆ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದಿತು.

1993

ಭಾರತದಲ್ಲಿ ಮೊದಲ ಬಾರಿ ಚುನಾವಣಾ ಗುರುತಿನ ಚೀಟಿ ನೀಡುವ ವ್ಯವಸ್ಥೆ ಜಾರಿಗೆ ಬಂದಿತು. ಟಿ.ಎನ್. ಶೇಷನ್ ಆಗ ಮುಖ್ಯ ಚುನಾವಣಾ ಆಯುಕ್ತರಾಗಿದ್ದರು.

1994



ಮಾರ್ಚ್ 11: ಬೊಮ್ಮಾಯಿ vs ಭಾರತ ಸರ್ಕಾರ ಪ್ರಕರಣ. 1989ರ ಏಪ್ರಿಲ್‌ನಲ್ಲಿ ಅಲ್ಪಮತಕ್ಕಿಳಿದಿದೆ ಎಂದು ತಮ್ಮ ಸರ್ಕಾರವನ್ನು ರಾಜ್ಯಪಾಲ ಪಿ.ವೆಂಕಟ ಸುಬ್ಬಯ್ಯ ಅವರು ವಜಾಗೊಳಿಸಿದ್ದನ್ನು ಪ್ರಶ್ನಿಸಿ ಎಸ್.ಆರ್.ಬೊಮ್ಮಾಯಿ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದ ಪ್ರಕರಣ ಇದು. ಸರ್ಕಾರವೊಂದು ಬಹುಮತ ಹೊಂದಿದೆಯೇ, ಇಲ್ಲವೇ ಎಂಬುದನ್ನು ತೀರ್ಮಾನಿಸುವ ಸಾಂವಿಧಾನದ ವೇದಿಕೆ ವಿಧಾನಸಭೆಯೇ ಹೊರತು ರಾಜಭವನ ಅಲ್ಲ. ಸಂವಿಧಾನದ 356ನೇ ವಿಧಿ ರಾಷ್ಟ್ರಪತಿಗೆ ನೀಡಿರುವುದು ಷರತ್ತುಬದ್ಧ ಅಧಿಕಾರವನ್ನೇ ಹೊರತು ಪರಮಾಧಿಕಾರವನ್ನಲ್ಲ ಎಂಬುದು ತೀರ್ಪಿನ ಸಾರಾಂಶ.



2003 ಆಗಸ್ಟ್ 31 ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮೊದಲ ಪದಕ ಗಳಿಸಿತು. ಪ್ಯಾರಿಸ್ ಕೂಟದ ಮಹಿಳೆಯರ ಲಾಂಗ್‌ಜಂಪ್‌ನಲ್ಲಿ ಕೇರಳದ ಅಂಜು ಬಾಬಿ ಜಾರ್ಜ್ 6.7 ಮೀ. ಜಿಗಿದು ಕಂಚಿನ ಪದಕ ಗೆದ್ದುಕೊಂಡರು.

2005

- **ಆಗಸ್ಟ್ 23:** ಸಾಮಾಜಿಕ ಭದ್ರತೆಯ ಭಾಗವಾಗಿ ಉದ್ಯೋಗ ಖಾತರಿ ಯೋಜನೆ ಜಾರಿಗೆ ಬಂತು. 2009ರಲ್ಲಿ ಇದಕ್ಕೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂದು ಕರೆಯಲಾಯಿತು. ಹಣಕಾಸು ವರ್ಷವೊಂದರಲ್ಲಿ 100 ದಿನ ಉದ್ಯೋಗ ನೀಡುವಂಥ ಯೋಜನೆ ಇದು.
- **ಮಾಹಿತಿ ಹಕ್ಕು** ಕಾಯ್ದೆ ಸಂಸತ್ತಿನಲ್ಲಿ ಅಂಗೀಕಾರಗೊಂಡಿತು. ಸರ್ಕಾರಿ ಇಲಾಖೆಗಳಿಂದ ತಮಗೆ ಬೇಕಾದ ಮಾಹಿತಿಯನ್ನು ಪಡೆಯುವ ಅಧಿಕಾರವನ್ನು ಇದು ಪ್ರಜೆಗಳಿಗೆ ನೀಡಿತು.

2007



2007

ಜುಲೈ 25: ಪ್ರತಿಭಾ ದೇವಿಸಿಂಗ್ ಪಾಟೀಲ್ ಅವರು ದೇಶದ ಮೊದಲ ಮಹಿಳಾ ರಾಷ್ಟ್ರಪತಿಯಾಗಿ ಪ್ರಮಾಣವಚನ ಸ್ವೀಕರಿಸಿದರು.



- **ದೇಶದಲ್ಲಿ ಚೆಸ್** ಕ್ರಾಂತಿಗೆ ಕಾರಣರಾದ ಚೆನ್ನೈನ ವಿಶ್ವನಾಥನ್ ಆನಂದ್ ಫಿಡೆ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮೊದಲ ಬಾರಿ ಚಾಂಪಿಯನ್ ಆದರು. 2000ನೇ ಇಸವಿಯಲ್ಲಿ ಅವರು ಪಿಸಿಎ ವಿಶ್ವ ಚಾಂಪಿಯನ್ ಆಗಿದ್ದರು.
- **ಭಾರತ ತಂಡಕ್ಕೆ** ಚೊಚ್ಚಲ ಟಿ–20 ಕ್ರಿಕೆಟ್ ವಿಶ್ವಕಪ್ ಪ್ರಶಸ್ತಿ. ಜೋಹಾನ್ಸ್‌ಬರ್ಗ್‌ನ ವಾಂಡರರ್ಸ್‌ನಲ್ಲಿ ನಡೆದ ಫೈನಲ್‌ನಲ್ಲಿ ಎಂ.ಎಸ್. ಧೋನಿ ಪಡೆಗೆ ಪಾಕಿಸ್ತಾನ ವಿರುದ್ಧ ಐದು ರನ್‌ಗಳ ಜಯ.

1979



1979

ಕೊಳಗೇರಿ ಪ್ರದೇಶದ ಜನರ ಸೇವೆಗಾಗಿ ಮಿಷನರೀಸ್ ಆಫ್ ಚಾರಿಟೀಸ್‌ನ ಮದರ್ ತೆರೇಸಾ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿ ಪ್ರಕಟಿಸಲಾಯಿತು.

2008



- **ಅಕ್ಟೋಬರ್ 22**ರಂದು ಭಾರತ ಚಂದ್ರಯಾನ -1 ಅನ್ನು ಪ್ರಾರಂಭಿಸಿತು. 2009ರ ಆಗಸ್ಟ್‌ವರೆಗೆ ಇದು ಕಾರ್ಯನಿರ್ವಹಿಸಿತು.
- **ಒಲಿಂಪಿಕ್ಸ್ ವೈಯಕ್ತಿಕ** ಕ್ರೀಡೆಗಳಲ್ಲಿ ಭಾರತ ಮೊದಲ ಬಾರಿ ಚಿನ್ನದ ಪದಕ ಪಡೆದ ಕ್ಷಣ. ಅಭಿನವ್ ಬಿಂದ್ರಾ, ಬೀಜಿಂಗ್ ಕ್ರೀಡೆಗಳ 10 ಮೀ. ಏರ್ ರೈಫಲ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

2009

AADHAAR

ಯುಪಿಎ ಸರ್ಕಾರದ ಅವಧಿಯಲ್ಲಿ 12 ಅಂಕಿಗಳ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ ಅಸ್ತಿತ್ವಕ್ಕೆ ಬಂದಿತು. 2010ರ ನವೆಂಬರ್‌ನಲ್ಲಿ ಮಹಾರಾಷ್ಟ್ರದ ಟೆಂಬ್ಲಿ ಹಳ್ಳಿಯ 10 ಆದಿವಾಸಿಗಳಿಗೆ ಮೊದಲು ಆಧಾರ್ ಕಾರ್ಡ್ ನೀಡಲಾಯಿತು.

2014

2014: **ಸೆಪ್ಟೆಂಬರ್:** ಮಂಗಳ ಗ್ರಹದ ಅಧ್ಯಯನಕ್ಕಾಗಿ ಇಸ್ರೊ 'ಮಂಗಳಯಾನ' ಆರಂಭಿಸಿತು. ಮಂಗಳನ ಕಕ್ಷೆಗೆ ಉಪಗ್ರಹ ತಲುಪಿಸಿದ ಏಷ್ಯಾದ ಮೊದಲ ದೇಶ ಭಾರತ ಎನಿಸಿತು.

2013: **ಅಮೆರಿಕದ ನ್ಯೂಯಾರ್ಕ್** ಷೇರು ಮಾರುಕಟ್ಟೆಯಲ್ಲಿ ನೋಂದಾಯಿತವಾದ ದೇಶದ ಮೊದಲ ಖಾಸಗಿ ಕಂಪನಿ ಎಂಬ ಹಿರಿಮೆ ಇನ್ಫೊಸಿಸ್ ಕಂಪನಿಯದ್ದಾಯಿತು.

2013: **ರಾಷ್ಟ್ರೀಯ ಆಹಾರ** ಭದ್ರತಾ ಕಾಯ್ದೆ ಜಾರಿಗೆ ಬಂತು.

2009: **ಶಿಕ್ಷಣ ಹಕ್ಕು** ಕಾಯ್ದೆ ಜಾರಿಗೆ ಬಂತು. 6 ರಿಂದ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂದು ಸಂವಿಧಾನದ 21ಎ ವಿಧಿಯಲ್ಲಿ ಸೇರಿಸಲಾಯಿತು (86ನೇ ತಿದ್ದುಪಡಿ)

2017

2019: **ಆಗಸ್ಟ್ 5:** ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನ ರದ್ದುಗೊಳಿಸಲಾಯಿತು. ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶವಾಯಿತು. ಲಡಾಕ್ ಪ್ರತ್ಯೇಕ ಕೇಂದ್ರಾಡಳಿತ ಪ್ರದೇಶ ಎಂದು ಘೋಷಿಸಲಾಯಿತು.

2017: **ಜುಲೈ 1:** ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಜಾರಿ. ಹಲವಾರು ಪರೋಕ್ಷ ತೆರಿಗೆಗಳನ್ನು ರದ್ದುಗೊಳಿಸಿ ಉದಯಿಸಿದಂತಹ ಏಕೀಕೃತ ತೆರಿಗೆ ವ್ಯವಸ್ಥೆಯೇ ಜಿಎಸ್‌ಟಿ.

2015: **ಜನವರಿ 1:** ಯೋಜನಾ ಆಯೋಗದ ಬದಲಿಗೆ, ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೀತಿ ಆಯೋಗ ಅಸ್ತಿತ್ವಕ್ಕೆ ತಂದಿತು.

2019




2019: **ಪಿ.ವಿ.ಸಿಂಧು** ಬ್ಯಾಡ್ಮಿಂಟನ್‌ನಲ್ಲಿ ವಿಶ್ವ ಚಾಂಪಿಯನ್ ಆದ ಭಾರತದ ಮೊದಲ ಕ್ರೀಡಾಪಟು ಎನಿಸಿದರು. ಸ್ವಿಟ್ಜರ್ಲೆಂಡ್‌ನ ಬಾಸೆಲ್‌ನಲ್ಲಿ ನಡೆದ ಟೂರ್ನಿಯ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಜಪಾನ್‌ನ ನೊಝೊಮಿ ಓಕುಹಾರ ವಿರುದ್ಧ 21–7–, 21–7ರಲ್ಲಿ ಗೆದ್ದರು.

2019: **ನವೆಂಬರ್ 9:** ರಾಮಜನ್ಮಭೂಮಿ– ಬಾಬ್ರಿ ಮಸೀದಿ ವಿವಾದಕ್ಕೆ ಸಂಬಂಧಿಸಿ ಸುಪ್ರಿಂ ಕೋರ್ಟ್ ತೀರ್ಪು ನೀಡಿತು. ಅಯೋಧ್ಯೆಯ ರಾಮಜನ್ಮಭೂಮಿ ಎಂದು ಹೇಳಲಾದ ಸ್ಥಳದಲ್ಲಿ ಮಂದಿರ ನಿರ್ಮಾಣಕ್ಕೆ ಅವಕಾಶ ನೀಡಿ, ಮಸೀದಿ ನಿರ್ಮಾಣಕ್ಕೆ ಐದು ಎಕರೆಯಷ್ಟು ಪರ್ಯಾಯ ಸ್ಥಳವನ್ನು ಸುನ್ನಿ ವಕ್ಫ್ ಬೋರ್ಡ್‌ಗೆ ನೀಡಲು ಸರ್ಕಾರಕ್ಕೆ ಆದೇಶಿಸಿತು.

2022

ಒಡಿಶಾದ ಮಯೂರಭಂಜ್ ಜಿಲ್ಲೆಯ ದ್ರೌಪದಿ ಮುರ್ಮು, ದೇಶದ ರಾಷ್ಟ್ರಪತಿಯಾದ ಬುಡಕಟ್ಟು ಜನಾಂಗದ ಮೊದಲ ಮಹಿಳೆ ಎನಿಸಿದರು.



2021: **ಜೂನ್ 24:** ಜಾವೆಲಿನ್ ಪಟು ನೀರಜ್ ಚೋಪ್ರಾ, ಒಲಿಂಪಿಕ್ಸ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದ ಭಾರತದ ಮೊದಲ ಸ್ಪರ್ಧಿಯಾದರು. ಟೋಕಿಯೊ ಕ್ರೀಡೆಗಳಲ್ಲಿ 87.58 ಮೀ. ಸಾಧನೆಯೊಡನೆ ಮೊದಲ ಸ್ಥಾನ ಪಡೆದರು. ಈ ಹಿಂದೆ ಮಿಲ್ಖಾ ಸಿಂಗ್ (1960, 400 ಮೀ.), ಪಿ.ಟಿ.ಉಷಾ (1984, 400 ಮೀ. ಹರ್ಡಲ್ಸ್) ಅವರಿಗೆ ಕೂದಲೆಳೆಯಲ್ಲಿ ಕಂಚಿನ ಪದಕ ಕೈತಪ್ಪಿತ್ತು.

2020: **ಕೇಂದ್ರದ ಮೂರು** ಕೃಷಿ ಕಾಯ್ದೆಗಳು ರೈತರ ಹಿತಾಸಕ್ತಿಗೆ ಮಾರಕವಾಗಿವೆ ಎಂದು ದೆಹಲಿಯಲ್ಲಿ ರೈತರು ಸಂಯುಕ್ತ ಕಿಸಾನ್ ಮೋರ್ಚಾ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಆರಂಭಿಸಿದರು. ದೀರ್ಘ ಹೋರಾಟಕ್ಕೆ ಮಣಿದ ಕೇಂದ್ರವು 2021ರ ನವೆಂಬರ್ 29ರಂದು ಕಾಯ್ದೆ ರದ್ದುಪಡಿಸುವುದಾಗಿ ಪ್ರಕಟಿಸಿತು.

ವಿನ್ಯಾಸ: ಸಿದ್ದಲಿಂಗಯ್ಯ ಬ. ಕಣಕಾಲಮಠ



ಮಂತ್ರಾಲಯದಲ್ಲಿ ರಾಯರ ಉತ್ತರಾರಾಧನೆ ದಿನವಾದ ಭಾನುವಾರ ಜರುಗಿದ ಮಹಾರಥೋತ್ಸವದಲ್ಲಿ ಸಾವಿರಾರು ಭಕ್ತರು ಭಾಗಿಯಾಗಿದ್ದರು

ಮಂತ್ರಾಲಯ: ರಾಘವೇಂದ್ರ ಸ್ವಾಮಿಗಳ 351ನೇ ಆರಾಧನೆ

ಅದ್ದೂರಿ ಮಹಾರಥೋತ್ಸವ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದಲ್ಲಿ ರಾಘವೇಂದ್ರ ಸ್ವಾಮಿಗಳ 351ನೇ ಆರಾಧನಾ ಮಹೋತ್ಸವದ ಕೊನೆಯ ದಿನವಾದ ಭಾನುವಾರ ಮಹಾರಥೋತ್ಸವವು ಅದ್ದೂರಿಯಾಗಿ ಜರುಗಿತು.

ದೇಶದ ವಿವಿಧೆಡೆಯಿಂದ ಸಾವಿರಾರು ಭಕ್ತರು ಭಾಗವಹಿಸಿದ್ದರು. ಮುಖ್ಯವಾಗಿ ಮಂತ್ರಾಲಯ ಪಕ್ಕದ ತೆಲಂಗಾಣ, ಆಂಧ್ರಪ್ರದೇಶ ಹಾಗೂ ಕರ್ನಾಟಕ ರಾಜ್ಯಗಳ ಗಡಿಗ್ರಾಮಗಳಿಂದ ಜನರು ಕುಟುಂಬ ಸಮೇತ ರಥೋತ್ಸವದಲ್ಲಿ ಭಾಗವಹಿಸಿದ್ದರು.

ಕಾಯಿ, ಕರ್ಪೂರ, ಹೂವು ಸಮರ್ಪಣೆ ಮಾಡಿ ರಾಯರಿಗೆ ನಮಿಸಿದರು. ಪ್ರಹ್ಲಾದ ಮಹಾರಾಜ ಅವತಾರದಲ್ಲಿ ರಾಯರ ಮೂರ್ತಿಯನ್ನು ರಥದಲ್ಲಿರಿಸಿದ ಬಳಿಕ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ರಥದ ಮೂಲಕ ಭಕ್ತರಿಗೆ ಅನುಗ್ರಹ ಸಂದೇಶ ನೀಡಿದರು. ಮಂಡ್ಯ, ಮೈಸೂರು ಭಾಗದ ಪೂಜಾ ಕುಣಿತ, ಡೊಳ್ಳು ಕುಣಿತ ಹಾಗೂ ಪಟ ಕುಣಿತ ತಂಡಗಳು ಭಾಗವಹಿಸಿದ್ದವು. ವಾದ್ಯವೈಭವ ವಿಶೇಷವಾಗಿತ್ತು. ಭಕ್ತರು ಘೋಷಣೆಗಳನ್ನು ಕೂಗಿದರು.

ಮಠದ ಮುಖ್ಯಬೀದಿಯಿಂದ ಶ್ರೀರಾಘವೇಂದ್ರ ವೃತ್ತದವರೆಗೂ ರಥವು ಸಂಚರಿಸಿ, ಮತ್ತೆ ಮಠದತ್ತ ಸಾಗಿತು. ಶ್ರೀಗಳು ಹೆಲಿಕಾಪ್ಟರ್ ಮೂಲಕ ರಥದ ಮೇಲೆ ಪುಷ್ಪವೃಷ್ಟಿ ಮಾಡಿದರು.

81 ಕೈದಿಗಳ ಬಿಡುಗಡೆ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ 81 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡಲು ರಾಜ್ಯ ಸರ್ಕಾರ ಆದೇಶ ಹೊರಡಿಸಿದ್ದು, ಆ. 15 ರಂದು ಜೈಲಿನಿಂದ ಹೊರಬರಲಿದ್ದಾರೆ.

'ಪರಪ್ಪನ ಅಗ್ರಹಾರ ಕಾರಾಗೃಹದ 14, ಬೆಳಗಾವಿಯ 3, ಬಳ್ಳಾರಿಯ 8, ವಿಜಯಪುರ 10, ಧಾರವಾಡ 6, ಕಲಬುರಗಿ 10, ಮೈಸೂರು 20, ಶಿವಮೊಗ್ಗದ 10 ಕೈದಿಗಳು ಬಿಡುಗಡೆಯಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

15 ಜನರ ವಿರುದ್ಧ ಪ್ರಕರಣ ದಾಖಲು

ಬಸವಕಲ್ಯಾಣ (ಬೀದರ್ ಜಿಲ್ಲೆ): ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಹಾಗೂ ಬಸವಕಲ್ಯಾಣ ಶಾಸಕ ಶರಣು ಸಲಗರ ಅವರ ಸಮ್ಮುಖದಲ್ಲೇ ಶನಿವಾರ ಇಲ್ಲಿ ನಡೆದ ಜಗಳಕ್ಕೆ ಸಂಬಂಧಿಸಿದಂತೆ, ಎರಡೂ ಕಡೆಯ 15 ಜನರ ವಿರುದ್ಧ ಬಸವಕಲ್ಯಾಣ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಖೂಬಾ ಅವರು ಬೀದರ್‌ನಿಂದ ವಾಹನ ರ‍್ಯಾಲಿ ಮೂಲಕ ನಗರಕ್ಕೆ ಬಂದಾಗ ಕೆಲವರು ಸಚಿವರ ಕಾರನ್ನು ಜಖಂಗೊಳಿಸಿ ನಂಬರ್ ಪ್ಲೇಟ್ ಕಿತ್ತು ಹಾಕಿದ್ದಾರೆ. ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ' ಎಂದು ಸಚಿವರ ಬೆಂಬಲಿಗ ಅಮೂಲ್ ಸದಾನಂದೆ ಪೊಲೀಸರಿಗೆ ದೂರು ನೀಡಿದ್ದಾರೆ. 13 ಜನರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಸಲಗರ ಬೆಂಬಲಿಗರಾದ ನಗರಸಭೆ ಸದಸ್ಯ ಸಿದ್ದು ಬಿರಾದಾರ ಮೇಲೆ ನಡೆದ ಹಲ್ಲೆಗೆ ಸಂಬಂಧಿಸಿದಂತೆ ಸಂತ್ರಸ್ತರು ನೀಡಿರುವ ದೂರಿನ ಮೇರೆಗೆ ಸಚಿವರ ಇಬ್ಬರು ಬೆಂಬಲಿಗರ ವಿರುದ್ಧ ಪ್ರಕರಣ ದಾಖಲಾಗಿದೆ..

'ಹಲೋ' ಬದಲು 'ವಂದೇ ಮಾತರಂ'

ಮುಂಬೈ (ಪಿಟಿಐ): 'ಸರ್ಕಾರಿ ಅಧಿಕಾರಿಗಳು ಇನ್ನು ಮುಂದೆ ಕಚೇರಿ ಅವಧಿಯಲ್ಲಿ ದೂರವಾಣಿ ಕರೆ ಸ್ವೀಕರಿಸುವಾಗ 'ಹಲೋ' ಬದಲು 'ವಂದೇ ಮಾತರಂ' ಎಂದೇ ಹೇಳಬೇಕು. ಮುಂದಿನ ವರ್ಷದ ಜನವರಿ 26ರವರೆಗೂ ಇದನ್ನು ಪಾಲಿಸಬೇಕು. ಈ ಸಂಬಂಧ ಆಗಸ್ಟ್ 18ರಂದು ಆದೇಶ ಹೊರಡಿಸಲಾಗುತ್ತದೆ' ಎಂದು ಮಹಾರಾಷ್ಟ್ರದ ಸಂಸ್ಕೃತಿ ಸಚಿವ ಸುಧೀರ್ ಹೇಳಿದ್ದಾರೆ.

ಇಂದು ಅತಿ ಎತ್ತರದ ಧ್ವಜಸ್ತಂಭದಲ್ಲಿ ಧ್ವಜಾರೋಹಣ



ಹೊಸಪೇಟೆ (ವಿಜಯನಗರ): ದೇಶದ ಅತಿ ಎತ್ತರದ 405 ಅಡಿ ಎತ್ತರದ ಧ್ವಜಸ್ತಂಭವನ್ನು ನಗರದ ಮುನ್ಸಿಪಲ್ ಮೈದಾನದಲ್ಲಿ ಅಳವಡಿಸಲಾಗಿದ್ದು, ಸೋಮವಾರ (ಆ.15) ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ತ್ರಿವರ್ಣ ಧ್ವಜ ಹಾರಿಸುವ ಈ ಮೂಲಕ ಈ ಸ್ತಂಭವನ್ನು ಉದ್ಘಾಟಿಸುವರು.

ಈವರೆಗೆ ಬೆಳಗಾವಿಯಲ್ಲಿನ 361 ಅಡಿ ಎತ್ತರದ ಧ್ವಜಸ್ತಂಭ ದೇಶದ ಎತ್ತರದ ಧ್ವಜಸ್ತಂಭವೆಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಇನ್ನು ಆ ದಾಖಲೆ ವಿಜಯನಗರದ ಪಾಲಾಗಲಿದೆ.

ಪ್ರವಾಸೋದ್ಯಮ ಇಲಾಖೆಯ ₹6 ಕೋಟಿ ಅನುದಾನದಲ್ಲಿ ಈ ಸ್ತಂಭವನ್ನು ನಿರ್ಮಿಸಲಾಗಿದ್ದು, 120X80 ಅಡಿ ಅಳತೆಯ ಧ್ವಜ ತಯಾರಿಸಲಾಗಿದೆ. ಪುಣೆಯ ಬಜಾಜ್ ಕಂಪನಿಯ 85 ನುರಿತ ಕಾರ್ಮಿಕರು ಒಂದು ವಾರದಿಂದ ಹಗಲಿರುಳು ಶ್ರಮಿಸಿ ಧ್ವಜ ಸ್ತಂಭದ 13 ಬಿಡಿಭಾಗಗಳನ್ನು ಜೋಡಿಸಿದ್ದಾರೆ.

ಈ ಧ್ವಜಸ್ತಂಭದ ಅಡಿ ಸೋಮವಾರ 5000 ಮಕ್ಕಳು ಕೇಸರಿ, ಬಿಳಿ ಹಾಗೂ ಹಸಿರು ಬಣ್ಣದ ಟೋಪಿ ಧರಿಸಿ ತ್ರಿವರ್ಣದ ರಂಗು ಮೂಡಿಸಲಿದ್ದಾರೆ. 'ಪ್ರವಾಸೋದ್ಯಮಕ್ಕೆ ಉತ್ತೇಜನ ಕೊಡಲು 405 ಅಡಿ ಎತ್ತರದ ಧ್ವಜಸ್ತಂಭ ನಿರ್ಮಿಸಲಾಗಿದೆ' ಎಂದು ಸಚಿವ ಆನಂದ್ ಸಿಂಗ್ ಭಾನುವಾರ ತಿಳಿಸಿದರು.

ಸ್ವಾತಂತ್ರ್ಯೋತ್ಸವ ವಿಶೇಷ ವಿಡಿಯೊಗಳು

ವಿದುರಾಶ್ವತ್ಥ- ಇದು ಜನರ ಹೋರಾಟದ ಕಥನ | ಬೆಳಗಾವಿ ಅಧಿವೇಶನದ ಬಿಂಬ ಕಾಂಗ್ರೆಸ್ ಬಾವಿ ! | ಗಾಂಧಿ ಗುಡಿ ರಾಷ್ಟ್ರಪಿತನಿಗೆ ನಿತ್ಯಪೂಜೆ | ಚಳವಳಿಯ ನೆನಪು ಮೆಲಕು ಹಾಕಿದ ಹೋರಾಟಗಾರ

ಸೋಲೂರು ಗದ್ದುಗೆ ಮಠದ ಕಿರಿಯ ಸ್ವಾಮೀಜಿ ನಾಪತ್ತೆ

ರಾಮನಗರ: ಮಾಗಡಿ ತಾಲ್ಲೂಕಿನ ಸೋಲೂರು ಗದ್ದುಗೆ ಮಠದ ಶಿವ ಮಹಾಂತ ಸ್ವಾಮೀಜಿ ನಾಪತ್ತೆ ಆಗಿದ್ದಾರೆ.

ಸ್ವಾಮೀಜಿ ಸಹಿವುಳ್ಳ ಪತ್ರವೊಂದು ದೊರೆತಿದ್ದು, ಸನ್ಯಾಸ ಜೀವನ ತ್ಯಜಿಸಿ ಸಾಮಾನ್ಯರಂತೆ ಬದುಕುವ ಇಂಗಿತ ವ್ಯಕ್ತಪಡಿಸಿದ್ದಾರೆ.

‘ಒಮ್ಮೆ ಕಾವಿ ಬಟ್ಟೆ ಬಿಚ್ಚಿದ ಮೇಲೆ ಮತ್ತೆ ಎಂದಿಗೂ ಅದನ್ನು ತೊಡಲಾರೆ. ಹಾಗೇನಾದರೂ ನನ್ನನ್ನು ಹುಡುಕುವ ಪ್ರಯತ್ನ ಮಾಡಿದರೆ ನನ್ನ ಹೆಣ ನೋಡುತ್ತೀರಿ. ನನ್ನನ್ನು ಬದುಕಲು ಬಿಡಿ ಎಂದು ಅಂಗಲಾಚಿ ಬೇಡಿಕೊಳ್ಳುತ್ತೇನೆ’ ಎಂದು ಪತ್ರದಲ್ಲಿ ವಿನಂತಿಸಿದ್ದಾರೆ.


ಶಿವ ಮಹಾಂತ ಸ್ವಾಮೀಜಿ

ಮಾಗಡಿ ತಾಲ್ಲೂಕಿನ ವೀರಾಪುರದವರಾದ ಹರೀಶ್ ಎರಡು ವರ್ಷದ ಹಿಂದೆ ಸನ್ಯಾಸ ದೀಕ್ಷೆ ಸ್ವೀಕರಿಸಿದ್ದರು. ನಂತರದಲ್ಲಿ ಸೋಲೂರು ಗದ್ದುಗೆ ಮಠದ ಕಿರಿಯ ಸ್ವಾಮೀಜಿ ಆಗಿ ಪಟ್ಟಾಧಿಕಾರ ಸ್ವೀಕರಿಸಿದ್ದರು. ಮಠದಿಂದ ಯಾವುದೇ ದೂರು ದಾಖಲಾಗಿಲ್ಲ.

ದಾವಣಗೆರೆಯಲ್ಲಿ ಪತ್ತೆ?: ಸ್ವಾಮೀಜಿ ನಾಪತ್ತೆ ಸುದ್ದಿಯಾದ ಬೆನ್ನಲ್ಲೇ ದಾವಣಗೆರೆಯಲ್ಲಿ ಅವರು ಪತ್ತೆ ಆಗಿರುವುದಾಗಿ ಸುದ್ದಿ ಹಬ್ಬಿದೆ.

ಮುದ್ರಾಂಕ ಮಹಾಪರಿವೀಕ್ಷಕರಿಗೆ ಪತ್ರ ಬರೆದ ಸಿಐಡಿ

ತಂದೆ, ಪತ್ನಿ, ಮಗಳ ಹೆಸರಿನಲ್ಲಿ ಆಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್ಐ ನೇಮಕಾತಿ ಅಕ್ರಮ ಪ್ರಕರಣದ ಪ್ರಮುಖ ಆರೋಪಿ ಎಡಿಜಿಪಿ ಅಮ್ರಿತ್ ಪೌಲ್, ಅಕ್ರಮದ ಮೂಲಕ ಗಳಿಸಿದ್ದ ಹಣದಲ್ಲಿ ತಮ್ಮ ತಂದೆ, ಪತ್ನಿ ಹಾಗೂ ಮಗಳ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿರುವ ಬಗ್ಗೆ ಸಿಐಡಿ ಅಧಿಕಾರಿಗಳು ಮಾಹಿತಿ ಕಲೆಹಾಕಿದ್ದಾರೆ.


ಅಮ್ರಿತ್ ಪೌಲ್

‘ಪೊಲೀಸ್ ನೇಮಕಾತಿ ವಿಭಾಗದ ಮುಖ್ಯಸ್ಥರೂ ಆಗಿದ್ದ ಅಮ್ರಿತ್ ಪೌಲ್, ಡಿವೈಎಸ್ಪಿ ಹಾಗೂ ಸಿಬ್ಬಂದಿ ಜೊತೆ ಸೇರಿ ಸಂಚು ರೂಪಿಸಿ ಅಭ್ಯರ್ಥಿಗಳಿಂದ ಲಕ್ಷಾಂತರ ರೂಪಾಯಿ ಪಡೆದು ಅಕ್ರಮ ಎಸಗಿದ್ದಾರೆ’ ಎಂಬ ಆರೋಪವಿದೆ. ಇದಕ್ಕೆ ಸಂಬಂಧಪಟ್ಟಂತೆ ಪೌಲ್ ಅವರನ್ನು ಬಂಧಿಸಿರುವ ಸಿಐಡಿ, ತನಿಖೆ ಮುಂದುವರಿಸಿದೆ.

‘ಅಕ್ರಮದಿಂದ ಬಂದಿದ್ದ ₹1.35 ಕೋಟಿ ಹಣವನ್ನು ಡಿವೈಎಸ್ಪಿ ಶಾಂತಕುಮಾರ್, ಎಡಿಜಿಪಿ ಪೌಲ್ ಅವರಿಗೆ ಕೊಟ್ಟಿದ್ದರು. ಈ ಹಣ ಎಲ್ಲಿದೆ? ಎಂಬ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಪೌಲ್ ಅವರು ತಮ್ಮ ತಂದೆ ನೇತರಾಮ್ ಬನ್ಸಾಲ್, ಪತ್ನಿ, ಮಗಳ ಹಾಗೂ ಇತರರ ಹೆಸರಿನಲ್ಲಿ ಆಸ್ತಿ ಖರೀದಿ ಮಾಡಿರುವ ಮಾಹಿತಿ ಲಭ್ಯವಾಗಿದೆ. ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಹಾಗೂ ಸುತ್ತಮುತ್ತ ಜಮೀನು ಇರುವುದು ಮೂಲಗಳಿಂದ ತಿಳಿದುಬಂದಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಂಗ್ರಹಿಸಲಾಗುತ್ತಿದೆ’ ಎಂದು ಸಿಐಡಿ ಮೂಲಗಳು ಹೇಳಿವೆ.

ಮುದ್ರಾಂಕಗಳ ಮಹಾಪರಿವೀಕ್ಷಕರಿಗೆ ಪತ್ರ: ಅಮ್ರಿತ್ ಪೌಲ್ ಹಾಗೂ ಅವರ ಸಂಬಂಧಿಕರ ಹೆಸರಿನಲ್ಲಿ ನೋಂದಣಿ ಆಗಿರುವ ಆಸ್ತಿಗಳ ಬಗ್ಗೆ ದಾಖಲೆಗಳನ್ನು ನೀಡುವಂತೆ ನೋಂದಣಿ ಮತ್ತು ಮುದ್ರಾಂಕಗಳ (ಐಜಿಆರ್) ಮಹಾಪರಿವೀಕ್ಷಕರಿಗೆ ಸಿಐಡಿ ಅಧಿಕಾರಿಗಳು ಪತ್ರ ಬರೆದಿದ್ದಾರೆ.

‘ದಾಖಲೆಗಳ ಆಸ್ತಿಗಳ ಪಟ್ಟಿ ಶೀಘ್ರವೇ ಕೈ ಸೇರಲಿದೆ. ಬಳಿಕವೇ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಸಿಐಡಿ ಮೂಲಗಳು ಹೇಳಿವೆ.

ಆಸ್ತಿ ಖರೀದಿಗೆ ನೆರವು: ಉದ್ಯಮಿಗಳಿಗೆ ನೋಟಿಸ್

‘ಎಡಿಜಿಪಿ ಅಮ್ರಿತ್ ಪೌಲ್ ಜೊತೆ ಒಡನಾಟ ಹೊಂದಿ, ಅವರಿಗೆ ಆಸ್ತಿ ಖರೀದಿಸಲು ನೆರವಾಗಿದ್ದ ಆರೋಪದಡಿ ಉದ್ಯಮಿಗಳಾದ ಶಂಭುಲಿಂಗಯ್ಯ ಸ್ವಾಮಿ ಹಾಗೂ ಹುಸ್ಕೂರು ಆನಂದ್ ಅವರನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ. ಆಸ್ತಿ ಕೊಡಿಸಿರುವುದಾಗಿ ಇವರಿಬ್ಬರು ಒಪ್ಪಿಕೊಂಡಿದ್ದಾರೆ. ದಾಖಲೆ ಹಾಜರುಪಡಿಸುವಂತೆ ಇವರಿಬ್ಬರಿಗೂ ನೋಟಿಸ್ ನೀಡಲಾಗಿದೆ’ ಎಂದು ಸಿಐಡಿ ಮೂಲಗಳು ತಿಳಿಸಿವೆ.

‘ಕೃಷಿ ಉಪಕರಣ ಮಾರಾಟ ಕಂಪನಿ ನಡೆಸುತ್ತಿರುವ ಶಂಭುಲಿಂಗಯ್ಯ ಸ್ವಾಮಿ ಅವರ ಸಹಕಾರ ನಗರದಲ್ಲಿರುವ ಕಚೇರಿ ಹಾಗೂ ಜಕ್ಕೂರು ಕೆರೆ ಬಳಿಯ ಮನೆಯಲ್ಲಿ ಇತ್ತೀಚೆಗೆ ಶೋಧ ನಡೆಸಲಾಗಿತ್ತು. ಹಲವು ದಾಖಲೆಗಳನ್ನೂ ಜಪ್ತಿ ಮಾಡಲಾಗಿತ್ತು. ಇವುಗಳ ಪರಿಶೀಲನೆ ಪ್ರಗತಿಯಲ್ಲಿದೆ’ ಎಂದೂ ಹೇಳಿವೆ.


‘ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಕಲ್ಪನಾ ಪತಿ ಹುಸ್ಕೂರು ಆನಂದ್ ಅವರ ಮನೆ ಹಾಗೂ ಕಚೇರಿ ಮೇಲೂ ದಾಳಿ ಮಾಡಲಾಗಿತ್ತು. ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದ ಆನಂದ್, ಎಡಿಜಿಪಿ ಆಸ್ತಿ ಖರೀದಿಸಲು ನೆರವಾಗಿರುವುದಾಗಿ ಹೇಳಿಕೆ ನೀಡಿದ್ದಾರೆ’ ಎಂದೂ ತಿಳಿಸಿವೆ.

ಸುದ್ದಿ 2 ನಿಮಿಷ

ಗೊಂದಲ ಸೃಷ್ಟಿಸಿದ ಸಂದೇಶ ಪ್ರಯಾಣಿಕರನ್ನು ಇಳಿಸಿ ತಪಾಸಣೆ

ಮಂಗಳೂರು: ಪ್ರಯಾಣಿಕರೊಬ್ಬರ ಮೊಬೈಲ್‌ಗೆ ಬಂದ ಸಂದೇಶವನ್ನು, ಸಹ ಪ್ರಯಾಣಿಕ ತಪ್ಪಾಗಿ ಅರ್ಥೈಸಿಕೊಂಡಿದ್ದರಿಂದ ಮಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭಾನುವಾರ ಕೆಲಕಾಲ ಗೊಂದಲದ ವಾತಾವರಣ ಸೃಷ್ಟಿಯಾಯಿತು.

ಯುವಕ ಮಂಗಳೂರು ವಿಮಾನನಿಲ್ದಾಣದಿಂದ ಮುಂಬೈಗೆ ಹೊರಟಿದ್ದರು. ಅದೇ ವೇಳೆ ಅವರ ಗೆಳತಿ ಮತ್ತೊಂದು ವಿಮಾನದಲ್ಲಿ ಮಂಗಳೂರಿನಿಂದ ಬೆಂಗಳೂರಿಗೆ ಹೊರಟಿದ್ದರು. ಯುವಕ ಇದ್ದ ವಿಮಾನ ಹಾರಾಟದ ಸಲುವಾಗಿ ರನ್‌ವೇಯತ್ತ ಸಾಗುವಾಗ ಆತನಿಗೆ ಯುವತಿ ಸಂದೇಶ ಕಳುಹಿಸಿದ್ದರು. ಆ ಸಂದೇಶವನ್ನು ಯುವಕ ನೋಡುತ್ತಿದ್ದಾಗ, ಆತನ ಪಕ್ಕದ ಸೀಟಿನಲ್ಲಿದ್ದ ಪ್ರಯಾಣಿಕನೂ ಇಣುಕಿ ನೋಡಿದ್ದ. ಅದರಲ್ಲಿದ್ದ ‘ಬಾಂಬರ್’ ಎಂಬ ಪದವನ್ನು ತಪ್ಪಾಗಿ ಅರ್ಥೈಸಿಕೊಂಡು ವಿಮಾನದ ಸಿಬ್ಬಂದಿಗೆ ವಿಮಾನಕ್ಕೆ ಬೆದರಿಕೆ ಇದೆ ಎಂದು ಮಾಹಿತಿ ನೀಡಿದ್ದರು. ಬಳಿಕ ವಿಮಾನದ ಸಿಬ್ಬಂದಿಯು ಪ್ರಯಾಣಿಕರನ್ನು ಇಳಿಸಿದರು. ವಿಮಾನವನ್ನು ಪ್ರತ್ಯೇಕ ಸ್ಥಳಕ್ಕೆ ಒಯ್ದು ಪರಿಶೀಲನೆಗೆ ಒಳಪಡಿಸಲಾಯಿತು. ಪ್ರಯಾಣಿಕರ ಬ್ಯಾಗ್‌ಗಳನ್ನು ಕೂಡಾ ಪರಿಶೀಲಿಸಿದರು. ವಿಮಾನದಲ್ಲಿ ಯಾವುದೇ ಅಪಾಯಕಾರಿ ವಸ್ತು ಇಲ್ಲ ಎಂದು ಖಚಿತವಾದ ನಂತರ ವಿಮಾನವನ್ನು ಮರಳಿ ನಿಲ್ದಾಣಕ್ಕೆ ತಂದು ಪ್ರಯಾಣಿಕರನ್ನು ಹತ್ತಿಸಿಕೊಳ್ಳಲಾಯಿತು ಎಂದು ಮಂಗಳೂರು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು. ಬೆಳಿಗ್ಗೆ 11ಕ್ಕೆ ಮುಂಬೈಗೆ ಹೊರಡಬೇಕಿದ್ದ ವಿಮಾನವು ಸಂಜೆ 5ಕ್ಕೆ ಹೊರಟಿತು.



ಬಾಗಲಕೋಟೆ: ಘಟಪ್ರಭಾ ನದಿನೀರಿನಲ್ಲಿ ಕೊಚ್ಚಿ ಹೋದ ರೈತ


ಬಾಗಲಕೋಟೆ: ಘಟಪ್ರಭಾ ನದಿ ನೀರಿನಲ್ಲಿ ಮುಳುಗುತ್ತಿದ್ದ ಪಂಪ್‌ಸೆಟ್ ಮೇಲೆತ್ತಲು ನದಿಗಿಳಿದಿದ್ದ ಬೀಳಗಿ ತಾಲ್ಲೂಕಿನ ಚಿಕ್ಕ ಆಲಗುಂಡಿಯ ರೈತ ಬಸವರಾಜ ಹಲಗಲಿ (36) ಭಾನುವಾರ ನದಿಯಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ.

ಡ್ರಮ್‌ಗಳ ಸಹಾಯದಿಂದ ನದಿಯಲ್ಲಿದ್ದ ಪಂಪ್‌ಸೆಟ್, ನೀರಿನ ಮಟ್ಟ ಹೆಚ್ಚಾಗಿದ್ದರಿಂದ ಮುಳುಗಲಾರಂಭಿಸಿತ್ತು. ಅದನ್ನು ಮೇಲೆತ್ತಲು ನೀರಿಗಿಳಿದಾಗ ಸೆಳೆತಕ್ಕೆ ಸಿಕ್ಕು ಕೊಚ್ಚಿ ಹೋಗಿದ್ದಾರೆ.

‘ಬೋಟ್ ಸಹಾಯದಿಂದ ನದಿಯಲ್ಲಿ ಬಸವರಾಜ ಅವರ ಹುಡುಕಾಟ ನಡೆಸಿದೆವು. ಆದರೆ, ಪತ್ತೆಯಾಗಿಲ್ಲ. ಕತ್ತಲಾಗಿದ್ದರಿಂದ ಕಾರ್ಯಾಚರಣೆ ನಿಲ್ಲಿಸಿದ್ದು, ಸೋಮವಾರ ಬೆಳಿಗ್ಗೆ ಮತ್ತೆ ಮುಂದುವರಿಸಲಾಗುವುದು’ ಎಂದು ಜಿಲ್ಲಾ ಅಗ್ನಿ ಶಾಮಕ ದಳದ ಅಧಿಕಾರಿ ಮಲ್ಲಿಕಾರ್ಜುನಪ್ಪ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯದ 18 ಪೊಲೀಸರಿಗೆ ರಾಷ್ಟ್ರಪತಿ ಪದಕ

ಬೆಂಗಳೂರು: ಅತ್ಯುತ್ತಮ ಸೇವೆ ಸಲ್ಲಿಸಿದ ರಾಜ್ಯದ ಎಸ್ಪಿ, ಡಿವೈಎಸ್ಪಿಗಳು ಸೇರಿದಂತೆ 18 ಪೊಲೀಸರಿಗೆ 2022ನೇ ಸಾಲಿನ ರಾಷ್ಟ್ರಪತಿ ಶ್ಲಾಘನೀಯ ಸೇವಾ ಪದಕ ಲಭಿಸಿದೆ. ಸ್ವಾತಂತ್ರ್ಯ ದಿನಾಚರಣೆಯಂದು ಪದಕ ಪ್ರದಾನ ಕಾರ್ಯಕ್ರಮ ಜರುಗಲಿದೆ. ಪದಕ ಪಡೆದವರ ವಿವರ ಇಲ್ಲಿದೆ.



ಎನ್. ಶ್ರೀನಿವಾಸ್, ಎಸ್ಪಿ, ಪೊಲೀಸ್ ತರಬೇತಿ ಶಾಲೆ, ಕಡೂರು
ಪ್ರತಾಪ್ ಸಿಂಗ್ ತೋರಟ್, ಡಿವೈಎಸ್ಪಿ, ಆಂತರಿಕ ಭದ್ರತಾ ವಿಭಾಗ, ಬಂಟ್ವಾಳ
ಟಿ.ಎಂ.ಶಿವಕುಮಾರ್, ಡಿವೈಎಸ್ಪಿ, ಹೈಕೋರ್ಟ್ ಭದ್ರತೆ
ಜೆ.ಎಚ್. ಇನಾಂದಾರ್, ಡಿವೈಎಸ್ಪಿ, ಡಿಸಿಆರ್‌ಬಿ, ಕಲಬುರಗಿ
ಎನ್.ಟಿ. ಶ್ರೀನಿವಾಸ್ ರೆಡ್ಡಿ, ಡಿವೈಎಸ್ಪಿ, ಸಿಐಡಿ ಅರಣ್ಯ ಘಟಕ



ಪಿ. ನರಸಿಂಹಮೂರ್ತಿ, ಡಿವೈಎಸ್ಪಿ, ಸಿಐಡಿ
ರಾಘವೇಂದ್ರ ರಾವ್ ಶಿಂಧೆ, ಎಸಿಪಿ, ಎಫ್‌ಪಿಬಿ, ಬೆಂಗಳೂರು
ಆರ್. ಪ್ರಕಾಶ್, ಡಿವೈಎಸ್ಪಿ, ಎಸಿಬಿ, ಬೆಂಗಳೂರು
ಧ್ರುವರಾಜ್ ಬಿ. ಪಾಟೀಲ, ಸಿಪಿಐ, ನವಲಗುಂದ, ಧಾರವಾಡ ಜಿಲ್ಲೆ
ಎಸ್. ಮಹಮ್ಮದ್ ಅಲಿ, ಇನ್‌ಸ್ಪೆಕ್ಟರ್, ಎಸಿಬಿ, ಬೆಂಗಳೂರು



ಜೆ.ಸಿ. ರಾಜ, ಇನ್‌ಸ್ಪೆಕ್ಟರ್, ವಿದ್ಯಾರಣ್ಯಪುರ, ಮೈಸೂರು
ಬಿ.ಎಸ್. ರವಿ, ಇನ್‌ಸ್ಪೆಕ್ಟರ್, ಶೃಂಗೇರಿ, ಚಿಕ್ಕಮಗಳೂರು
ಮುಫೀದ್ ಖಾನ್, ಆರ್‌ಪಿಐ, ಕೆಎಸ್‌ಆರ್‌ಪಿ 1ನೇ ಪಡೆ, ಬೆಂಗಳೂರು
ಮಹದೇವಯ್ಯ, ಸಹಾಯಕ ಆರ್‌ಎಸ್‌ಐ, ಕೆಎಸ್‌ಆರ್‌ಪಿ 4ನೇ ಪಡೆ, ಬೆಂಗಳೂರು
ಆರ್. ಮುರಳಿ, ಸಹಾಯಕ ಆರ್‌ಎಸ್‌ಐ, ಕೆಎಸ್‌ಆರ್‌ಪಿ 3ನೇ ಪಡೆ, ಬೆಂಗಳೂರು



ಬಸವರಾಜ ಅಂಡೆಮ್ಮನವರ, ಸಹಾಯಕ ಗುಪ್ತದಳ ಅಧಿಕಾರಿ, ಬೆಂಗಳೂರು
ಬಾಲಕೃಷ್ಣ ಶಿಂಧೆ, ಎಎಸ್‌ಐ, ಡಿಎಸ್‌ಬಿ, ಬೆಳಗಾವಿ
ರಂಜಿತ್ ಶೆಟ್ಟಿ, ಎಎಸ್‌ಐ, ಕೆಂಪೇಗೌಡ ನಗರ, ಬೆಂಗಳೂರು

ಗೃಹ ರಕ್ಷಕ, ಪೌರ ರಕ್ಷಣೆ ಇಲಾಖೆ: ಇಬ್ಬರಿಗೆ ರಾಷ್ಟ್ರಪತಿ ಪದಕ



ಜೆ.ಇ. ಶಿವಾನಂದಪ್ಪ, ಪ್ಲಟೂನ್ ಕಮಾಂಡರ್ (ಎಚ್‌ಜಿ), ಶಿವಮೊಗ್ಗ
ಎಚ್. ಲಕ್ಷ್ಮಿನಾರಾಯಣ, ಪ್ಲಟೂನ್ ಕಮಾಂಡರ್ (ಎಚ್‌ಜಿ), ಬಳ್ಳಾರಿ

ನೆಹರೂ ಭಾವಚಿತ್ರಕ್ಕೆ ಕೊಕ್: ಆಕ್ರೋಶ

ಒಂದನೇ ಪುಟದಿಂದ...

‘ನೆಹರೂ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿ ಒಂಬತ್ತು ವರ್ಷಗಳನ್ನು ಜೈಲಿನಲ್ಲಿ ಕಳೆದವರು. ಅವರು ನಿಮ್ಮ ವಿ.ಡಿ. ಸಾವರ್ಕರ್ ಅವರಂತೆ ಜೈಲಿನಿಂದ ಬಿಡುಗಡೆಗೊಳ್ಳಲು ಬ್ರಿಟಿಷರ ಕಾಲು ಹಿಡಿದು ಕ್ಷಮೆ ಕೋರಿದ ಹೇಡಿ ಅಲ್ಲ. ಆರೆಸ್ಸೆಸ್ ಕೋಮು ರಾಜಕಾರಣವನ್ನು ವಿರೋಧಿಸಿದ್ದ, ಗಾಂಧಿ ಹತ್ಯೆಯ ನಂತರ ಅದನ್ನು ನಿಷೇಧಿಸಿದ್ದ ಮತ್ತು ತನ್ನ ಬದುಕನ್ನು ಜಾತ್ಯತೀತತೆ ಕಾಪಾಡಲು ಮುಡಿಪಾಗಿಟ್ಟಿದ್ದ ನೆಹರೂ ಅವರ ಬಗ್ಗೆ ಆರೆಸ್ಸೆಸ್ಸಿನ ಅಲರ್ಜಿಯನ್ನು ಅರ್ಥ ಮಾಡಿಕೊಳ್ಳಬಹುದು, ನಿಮಗೇನಾಗಿದೆ ಬೊಮ್ಮಾಯಿ ಅವರೇ’ ಎಂದೂ ಕೇಳಿದ್ದಾರೆ.

ಸುರ್ಜೆವಾಲಾ ಆಕ್ರೋಶ: ‘ನೆಹರೂ ಅವರ ಮೇಲಿನ ಕೊನೆಯಿಲ್ಲದ ದ್ವೇಷವು ಅದರ ಉತ್ತುಂಗವನ್ನು ತಲುಪಿದೆ. ಬೊಮ್ಮಾಯಿ ಸರ್ಕಾರ ತನ್ನ ಅಸ್ತಿತ್ವವನ್ನೇ ನಿರಾಕರಿಸುವ ಮೂಲಕ ಅತ್ಯಂತ ಕೆಳಮಟ್ಟಕ್ಕೆ ಇಳಿದಿದೆ. ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದಂದು, ಇದು ಇಂದಿನ ಆಡಳಿತಗಾರರ ಪಾತ್ರ ಮತ್ತು ಕೆಟ್ಟ ಆಲೋಚನಾ ಪ್ರಕ್ರಿಯೆಯನ್ನು ಪ್ರತಿಬಿಂಬಿಸುತ್ತದೆ’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಟ್ವೀಟ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭಾ ಸದಸ್ಯ ಜೈರಾಂ ರಮೇಶ್, ‘ಮುಖ್ಯಮಂತ್ರಿ ಬೊಮ್ಮಾಯಿ ತಮ್ಮ ಕೆಲಸ ಉಳಿಸಿಕೊಳ್ಳಲು ಹತಾಶರಾದಂತೆ ಕಾಣುತ್ತಿದೆ. ನೆಹರೂ ಭಾವಚಿತ್ರ ಮರೆತಿರುವುದು ಬೊಮ್ಮಾಯಿಯವರು ತಮ್ಮ ತಂದೆ ಎಸ್.ಆರ್. ಬೊಮ್ಮಾಯಿಗೆ ಮಾಡಿದ ಅವಮಾನ. ಎಸ್.ಆರ್. ಬೊಮ್ಮಾಯಿ ಮತ್ತು ಅವರ ರಾಜಕೀಯ ಗುರು ಎಂ.ಎನ್. ರಾಯ್ ಇಬ್ಬರೂ ನೆಹರೂ ಬೆಂಬಲಿಗರಾಗಿದ್ದರು’ ಎಂದಿದ್ದಾರೆ.

‘ಬೊಮ್ಮಾಯಿ ಕ್ಷಮೆಯಾಚಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವ–75’ ಜಾಹೀರಾತು ರಾಜ್ಯ ಸರ್ಕಾರದ ದುರುದ್ದೇಶದ ನಡೆಯಾಗಿದ್ದು, ಪಂಡಿತ್ ಜವಾಹರ ಲಾಲ್ ನೆಹರೂ ಅವರ ಭಾವಚಿತ್ರ ಹಾಕದೇ ಇರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಷಮೆಯಾಚಿಸಬೇಕು ಎಂದು ಲೇಖಕರು, ಚಿಂತಕರು ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಅವರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

‘ದೇಶದ ಪ್ರಥಮ ಪ್ರಧಾನಮಂತ್ರಿ, ಸ್ವಾತಂತ್ರ್ಯ ಹೋರಾಟಗಾರ ಜವಾಹರ ಲಾಲ್ ನೆಹರೂ ಅವರ ಹೆಸರನ್ನು ಪ್ರಮುಖ ಪಟ್ಟಿಯಿಂದ ಕೈ ಬಿಟ್ಟಿರುವುದು ಆಘಾತಕಾರಿ. ಇತಿಹಾಸವನ್ನು ವರ್ತಮಾನದಲ್ಲಿ ರಚಿಸಬಾರದು ಎನ್ನುವ ಪ್ರಾಥಮಿಕ ಪಾಠವನ್ನು ಸಹ ಕಲಿಯದ ಬಿಜೆಪಿ ಸರ್ಕಾರವು ಸಂಸದೀಯವಲ್ಲದ, ನೋಂದಣಿಯೂ ಆಗಿರದ ಆರೆಸ್ಸೆಸ್ ಸಿದ್ಧಾಂತಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಿರುವುದು ಅಸಾಂವಿಧಾನಿಕ. ನೆಹರೂ ಅವರನ್ನು ಇತಿಹಾಸದ ಪುಟಗಳಿಂದ ಅಳಿಸುವಂತಹ ಕೀಳು ಮಟ್ಟದ ರಾಜಕಾರಣಕ್ಕೆ ಸರ್ಕಾರ ಮುಂದಾಗಿರುವುದನ್ನು ಖಂಡಿಸುತ್ತೇವೆ’ ಎಂದಿದ್ದಾರೆ.

> **ರಾಜ್ಯ ಸರ್ಕಾರದ ಜಾಹೀರಾತಿನಲ್ಲಿ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಭಾವಚಿತ್ರ ಕೈಬಿಟ್ಟಿದ್ದು ಉದ್ದೇಶಪೂರ್ವಕ ಅಲ್ಲ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

‘ಸಂವಿಧಾನ ಶಿಲ್ಪಿ ಬಾಬಾ ಸಾಹೇಬ ಅಂಬೇಡ್ಕರ್ ಅವರ ಚಿತ್ರವನ್ನು ಕೆಳಗಿನ ಕೊನೆಯ ಸಾಲಿಗೆ ಸೇರಿಸಿ ನಿಮ್ಮೊಳಗಿರುವ ವೈದಿಕಶಾಹಿತನವನ್ನು ಮೆರೆದಿದ್ದೀರಿ. ಅದನ್ನು ಸಹ ಖಂಡಿಸುತ್ತೇವೆ’ ಎಂದಿದ್ದಾರೆ.

‘ಜೈಲಿನಿಂದ ಬಿಡುಗಡೆಯಾದರೆ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದಿಲ್ಲ ಎಂದು ಬ್ರಿಟಿಷರಿಗೆ ಮುಚ್ಚಳಿಕೆ ಬರೆದುಕೊಟ್ಟ ವಿ.ಡಿ. ಸಾವರ್ಕರ್ ಅವರನ್ನು ಸ್ವಾತಂತ್ರ್ಯ ಹೋರಾಟಗಾರರ ಸಾಲಿನಲ್ಲಿ ಸೇರಿಸಿದ್ದೂ ಅಲ್ಲದೇ ಅದಕ್ಕೆ ಅಗ್ರಸ್ಥಾನ ಕಲ್ಪಿಸಿರುವುದು ದುರುದ್ದೇಶಪೂರಿತ. ಸಾವರ್ಕರ್ ಯಾವ ಮಾನದಂಡಗಳಿಂದಲೂ ಸ್ವಾತಂತ್ರ್ಯ ಹೋರಾಟಗಾರರಲ್ಲ’ ಎಂದಿದ್ದಾರೆ.

‘ಬ್ರಿಟಿಷರ ವಿರುದ್ಧ ಯುದ್ಧ ಮಾಡಿದ ಕರ್ನಾಟಕದ ಮಹನೀಯರ ಪಟ್ಟಿಯಲ್ಲಿ ಟಿಪ್ಪು ಸುಲ್ತಾನ್ ಹೆಸರು ಕಣ್ಮರೆಯಾಗಿರುವುದು ಪೂರ್ವಗ್ರಹ ಪೀಡಿತ ದೃಷ್ಟಿಕೋನವೆಂದೇ ಕರೆಯಬೇಕಾಗುತ್ತದೆ. ವಾರ್ತಾ ಇಲಾಖೆ ಗುರುತರ ಅಪರಾಧವನ್ನು ಎಸಗಿದ್ದು ಇಲಾಖೆಯ ಮುಖ್ಯಸ್ಥರೂ ಇದಕ್ಕೆ ಹೊಣೆಗಾರರು. ಈ ಕೂಡಲೇ ಸಾರ್ವಜನಿಕರ ಕ್ಷಮೆ ಯಾಚಿಸಬೇಕು ಎಂದು ಜಾಗೃತ ನಾಗರಿಕರು ಕರ್ನಾಟಕ ವೇದಿಕೆಯ ಮೂಲಕ ಒತ್ತಾಯಿಸುತ್ತೇವೆ’ ಎಂದು ತಿಳಿಸಿದ್ದಾರೆ.

ಕೆ.ಮರುಳಸಿದ್ದಪ್ಪ, ಪ್ರೊ.ಎಸ್. ಜಿ.ಸಿದ್ದರಾಮಯ್ಯ, ರಾಜೇಂದ್ರ ಚೆನ್ನಿ, ವಿಜಯಾ, ಜಿ.ರಾಮಕೃಷ್ಣ, ಬಂಜಗೆರೆ ಜಯಪ್ರಕಾಶ್, ಹಿ.ಶಿ.ರಾಮಚಂದ್ರೇಗೌಡ, ಕಾಳೇಗೌಡ ನಾಗವಾರ, ಕೆ.ಎಸ್. ವಿಮಲಾ, ವಸುಂಧರಾ ಭೂಪತಿ, ಬಿ.ಶ್ರೀಪಾದ ಭಟ್, ಎನ್.ಗಾಯತ್ರಿ, ಆರ್.ಪೂರ್ಣಿಮಾ, ಮೀನಾಕ್ಷಿ ಬಾಳಿ, ಕೆ.ನೀಲಾ, ಡಾ.ಪ್ರಭು ಖಾನಾಪುರೆ, ಮಾವಳ್ಳಿ ಶಂಕರ್, ಲಕ್ಷ್ಮಿ ನಾರಾಯಣ ನಾಗವಾರ, ಗೋಪಾಲಕೃಷ್ಣ ಹರಳಹಳ್ಳಿ, ಎನ್.ಆರ್.ವಿಶುಕುಮಾರ್, ಇಂದೂಧರ ಹೊನ್ನಾಪುರ, ವಾಸುದೇವ ಉಚ್ಚಿಲ, ಗುರುಪ್ರಸಾದ್ ಕೆರೆಗೋಡು, ರುದ್ರಪ್ಪ ಹನಗವಾಡಿ, ಬಿ.ಟಿ.ಲಲಿತಾ ನಾಯಕ್, ಡಾ.ಕೆ.ಷರೀಫಾ, ಟಿ.ಸುರೇಂದ್ರ ರಾವ್ ಮುಂತಾದವರು ಪತ್ರ ಬರೆದಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	122.05	44,241	55,123
ಹಾರಂಗಿ	2,859	2,855.03	3,250	3,250
ಕಬಿನಿ	2284	2,283.32	9,443	1,000
ಹೇಮಾವತಿ	2,922	2,922	19,365	13,155
ಲಿಂಗನಮಕ್ಕಿ	1,819	1,812	24,029	5,279
ಸೂಪಾ (ಮೀ)	564	547.45	14,768	299
ಮಾಣಿ	595	587	2,414	-
ತುಂಗಭದ್ರಾ	1,633	1,632.39	1,16,880	1,11,284
ಮಲಪ್ರಭಾ	2079.5	2,076.60	10,775	8,094
ಘಟಪ್ರಭಾ	2175	2,172.80	20,181	26,856
ಭದ್ರಾ	186	183	20,926	28,646
ಆಲಮಟ್ಟಿ (ಮೀ)	519.6	518.27	1,92,453	2,25,000
ನಾರಾಯಣಪುರ (ಮೀ)	492.25	490.79	2,10,000	2,13,906

* ನೆಲಮಟ್ಟದಿಂದ

ಚರ್ಚ್‌ನಲ್ಲಿ ಬೆಂಕಿ ಆಕಸ್ಮಿಕ– 41 ಮಂದಿ ಸಾವು

ಕೈರೊ (ಎಪಿ): ಈಜಿಪ್ಟ್‌ನ ರಾಜಧಾನಿ ಕೈರೊದಲ್ಲಿನ ಕಾಪ್ಟಿಕ್ ಚರ್ಚ್ ಒಂದರಲ್ಲಿ ಭಾನುವಾರ ಬೆಂಕಿ ಆಕಸ್ಮಿಕ ಸಂಭವಿಸಿದ್ದು, ಕನಿಷ್ಠ 41 ಮಂದಿ ಮೃತಪಟ್ಟಿದ್ದಾರೆ.

ಕೈರೊ ಹೊರವಲಯದ ಇಂಬಾಬಾದಲ್ಲಿನ ಜನದಟ್ಟಣೆಯ ಅಬು ಸಫಿನ್ ಚರ್ಚ್‌ನಲ್ಲಿ ಈ ಅವಘಡ ಸಂಭವಿಸಿದೆ. ಘಟನೆಯಲ್ಲಿ ಕನಿಷ್ಠ 14 ಮಂದಿ ಗಾಯಗೊಂಡಿದ್ದಾರೆ. ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹತ್ತಿಕೊಂಡಿರಬೇಕೆಂಬ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಸ್ಲಿಮರು ಬಹುಸಂಖ್ಯೆಯಲ್ಲಿರುವ ಈಜಿಪ್ಟ್‌ನಲ್ಲಿ ಕಾಪ್ಟಿಕ್ ಕ್ರೈಸ್ತರ ಸಂಖ್ಯೆ ಒಟ್ಟು ಜನಸಂಖ್ಯೆಯ ಶೇ 10ರಷ್ಟಿದೆ.



ಧಾನ್ಯ ಧ್ವಜ...! ಸ್ವಾತಂತ್ರ್ಯದ ಅಮೃತ ಮಹೋತ್ಸವ ಪ್ರಯುಕ್ತ ಮಂಗಳೂರಿನ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ಪ್ರಾಂಗಣದಲ್ಲಿ 900 ಕೆ.ಜಿ. ದವಸ ಧಾನ್ಯ ಬಳಸಿ ತಯಾರಿಸಿದ ತಿರಂಗಾ ಕಲಾಕೃತಿ. ಪ್ರಜಾವಾಣಿ ಚಿತ್ರ: ಗಣೇಶ್ ಆದ್ಯಪಾಡಿ

ರಶ್ದಿ ಆರೋಗ್ಯದಲ್ಲಿ ಚೇತರಿಕೆ; ವೆಂಟಿಲೇಟರ್ ತೆರವು

ನ್ಯೂಯಾರ್ಕ್ (ಪಿಟಿಐ): ದುಷ್ಕರ್ಮಿಯ ಚೂರಿ ಇರಿತದಿಂದ ಗಂಭೀರವಾಗಿ ಗಾಯಗೊಂಡು ತೀವ್ರ ನಿಗಾ ಘಟಕದಲ್ಲಿದ್ದ ಲೇಖಕ ಸಲ್ಮಾನ್ ರಶ್ದಿ ಅವರ ಆರೋಗ್ಯದಲ್ಲಿ ಚೇತರಿಕೆ ಕಾಣಿಸಿದೆ. ಅವರಿಗೆ ಅಳವಡಿಸಿದ್ದ ಕೃತಕ ಉಸಿರಾಟ ವ್ಯವಸ್ಥೆಯನ್ನು ಭಾನುವಾರ ತೆಗೆಯಲಾಗಿದ್ದು, ಸದ್ಯ ಅವರು ಮಾತನಾಡುವ ಸ್ಥಿತಿಯಲ್ಲಿದ್ದಾರೆ.

ರಶ್ದಿ ಅವರ ಪ್ರತಿನಿಧಿ ಆಂಡ್ರ್ಯೂ ವೈಲಿ ಕೂಡ ಈ ಮಾಹಿತಿ ಖಚಿತಪಡಿಸಿದ್ದಾರೆ. ಆದರೆ, ರಶ್ದಿ ಅವರ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ಅವರು ನಿರಾಕರಿಸಿದ್ದಾರೆ.

‘ಸಲ್ಮಾನ್ ರಶ್ದಿ ಅವರಿಗೆ ಅಳವಡಿಸಲಾಗಿದ್ದ ವೆಂಟಿಲೇಟರ್ ತೆಗೆಯಲಾಗಿದೆ. ಅವರು ಮಾತನಾಡುತ್ತಿದ್ದಾರೆ! ಅವರು ಗುಣಮುಖರಾಗಲೆಂದು ಷಟೌಕ್ವಾದ ಎಲ್ಲಾ ಜನತೆ ನಿರಂತರ ಪ್ರಾರ್ಥಿಸುತ್ತಿದ್ದಾರೆ’ ಷಟೌಕ್ವಾ ಸಂಸ್ಥೆಯ ಅಧ್ಯಕ್ಷ ಮೈಕೆಲ್ ಹಿಲ್ ಶನಿವಾರ ರಾತ್ರಿ ಟ್ವೀಟ್ ಮಾಡಿ ತಿಳಿಸಿದ್ದಾರೆ.

ನಾನು ನಿರಪರಾಧಿ- ಆರೋಪಿ ವಾದ: ‘ಸಲ್ಮಾನ್ ರಶ್ದಿ ಅವರಿಗೆ ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿದ್ದ ಆರೋಪಿ ನ್ಯೂಜೆರ್ಸಿಯ ಫೇರ್‌ಫೀಲ್ಡ್ ಮೂಲದ 24 ವರ್ಷದ ಯುವಕ ಹದಿ ಮಟರ್ ನಾನು ತಪ್ಪು ಮಾಡಿಲ್ಲ, ನಾನು ಮುಗ್ಧ, ನಿರಪರಾಧಿ’ ಎಂದು ವಾದಿಸಿದ್ದಾನೆ.

ಆರೋಪಿ ತಾನು ನಿರಪರಾಧಿ ಎಂದು ಕೋರ್ಟ್‌ನಲ್ಲಿ ಹೇಳಿಕೆ ನೀಡಿದ್ದಾನೆ. ನ್ಯಾಯಾಲಯ ಜಾಮೀನು ನೀಡಿಲ್ಲ, ಸದ್ಯ ಆರೋಪಿಯನ್ನು ಷಟೌಕ್ವಾ ಜಿಲ್ಲಾ ಕಾರಾಗೃಹದಲ್ಲಿರಿಸಲಾಗಿದೆ ಎಂದು ನ್ಯೂಯಾರ್ಕ್ ಪೊಲೀಸರು ತಿಳಿಸಿದ್ದಾರೆ.

ಉಗ್ರರಿಗೆ ಸಹಾನುಭೂತಿ ಹೊಂದಿದ್ದ: ‘ಹದಿ ಮಟರ್ ಮೇಲೆ ಕೊಲೆ ಯತ್ನ ಮತ್ತು ಹಲ್ಲೆ ಆರೋಪ ಹೊರಿಸಲಾಗಿದೆ. ಸಾಮಾಜಿಕ ಜಾಲತಾಣದ ಖಾತೆಗಳಲ್ಲಿ ಆತ ಶಿಯಾ ಉಗ್ರವಾದ ಮತ್ತು ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನೊಂದಿಗೆ (ಐಆರ್‌ಜಿಸಿ) ಸಹಾನುಭೂತಿ ಹೊಂದಿರುವುದು ಬಹಿರಂಗವಾಗಿದೆ ಎಂದು ತನಿಖಾ ಮೂಲಗಳು ಹೇಳಿವೆ.

ಹ್ಯಾರಿ ಪಾಟರ್ ಲೇಖಕಿಗೆ ಜೀವ ಬೆದರಿಕೆ

ಲಂಡನ್: ಸಲ್ಮಾನ್ ರಶ್ದಿ ಅವರ ಹತ್ಯೆ ಯತ್ನವನ್ನು ಖಂಡಿಸಿದ್ದ ಹ್ಯಾರಿ ಪಾಟರ್ ಖ್ಯಾತಿಯ ಲೇಖಕಿ ಜೆ.ಕೆ. ರೌಲಿಂಗ್ ಅವರಿಗೆ ಟ್ವಿಟರ್‌ನಲ್ಲಿ ಜೀವ ಬೆದರಿಕೆ ಹಾಕಲಾಗಿದೆ.

‘ಇದೊಂದು ಭಯಾನಕ ಸುದ್ದಿ, ರಶ್ದಿ ಬೇಗ ಗುಣಮುಖರಾಗಲಿ’ ಎಂದು ರೌಲಿಂಗ್ ಅವರು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿದ್ದರು. ಇದಕ್ಕೆ ಮೀರ್ ಅಸೀಫ್ ಅಜೀಜ್ ಎಂಬಾತ ಕಮೆಂಟ್‌ನಲ್ಲಿ, ‘ಜಾಸ್ತಿ ತಲೆ ಕೆಡಿಸಿಕೊಳ್ಳಬೇಡ, ಮುಂದಿನ ಸರದಿ ನಿನ್ನದು’ ಎಂದು ಎಚ್ಚರಿಸಿದ್ದಾನೆ.

ಇದನ್ನು ಗಂಭೀರವಾಗಿ ತೆಗೆದುಕೊಂಡ ರೌಲಿಂಗ್, ಟ್ವಿಟರ್ ಸಪೋರ್ಟ್ ಟೀಂನವರಿಗೆ ‘ಇದಕ್ಕಾಗಿ ಏನಾದರೂ ಸಹಾಯ ಮಾಡುವಿರಾ?’ ಎಂದು ಬೆದರಿಕೆ ಸಂದೇಶದ ಸ್ಕ್ರೀನ್ ಶಾಟ್‌ನ್ನು ಹಂಚಿಕೊಂಡಿದ್ದರು.

ಬೆದರಿಕೆ ಹಾಕಿದ ಇದೇ ವ್ಯಕ್ತಿ ಇದಕ್ಕೂ ಮುನ್ನ ರಶ್ದಿ ಮೇಲಿನ ದಾಳಿಯನ್ನು ಬೆಂಬಲಿಸಿ, ರಶ್ದಿ ಅವರ ಮೇಲೆ ಹಲ್ಲೆ ಮಾಡಿದ್ದ ಹಾದಿ ಮಟರ್ ಒಬ್ಬ ಕ್ರಾಂತಿಕಾರಿ ಎಂದು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದ.

ರಾಕೇಶ್ ಜುಂಝುನ್‌ವಾಲಾ: ಅಪೂರ್ವ ಹೂಡಿಕೆದಾರ

ಮುಂಬೈ (ಪಿಟಿಐ): ಷೇರು ಮಾರುಕಟ್ಟೆಯಲ್ಲಿ ಸವಾಲುಗಳು ಇದ್ದವು. ಷೇರುಗಳಲ್ಲಿ ಹೂಡಿಕೆ ಮಾಡಿ ಭಾರಿ ಪ್ರಮಾಣದಲ್ಲಿ ಹಣ ಸಂಪಾದನೆ ಮಾಡಿದವರನ್ನು 'ಅಕ್ರಮ ಎಸಗಿದವರು' ಎಂಬಂತೆ ಕಾಣಲಾಗುತ್ತಿತ್ತು. ಉದಾರೀಕರಣ ನಂತರದ ಭಾರತದಲ್ಲಿ ಷೇರುಪೇಟೆಗಳನ್ನು ಅನುಮಾನದಿಂದ ನೋಡುವುದೂ ಇತ್ತು.

ಆದರೆ, ಹೂಡಿಕೆಗಳ ಮೂಲಕ ಅಂದಾಜು ₹ 46 ಸಾವಿರ ಕೋಟಿ ಸಂಪಾದಿಸಿದ ರಾಕೇಶ್ ಜುಂಝುನ್‌ವಾಲಾ ಈ ಮಾತುಗಳಿಗೆ ಅಪವಾದ ಆಗಿದ್ದರು. ಅವರು ಭಾರತದಲ್ಲಿ ವೈಯಕ್ತಿಕ ನೆಲೆಯಲ್ಲಿ ಹೂಡಿಕೆ ಮಾಡಿದವರ ಪೈಕಿ ಅತಿದೊಡ್ಡ ಹೂಡಿಕೆದಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದರು. ಅವರು ನಡೆದುಬಂದ ಹಾದಿಯು ಬಹುಪಾಲು ಪರಿಶುದ್ಧವಾಗಿತ್ತು.

ಹರ್ಷದ್ ಮೆಹ್ತಾ, ಕೇತನ್ ಪಾರೇಖ್ ಹೆಸರಿನ ಜೊತೆ ಕೆಲವು ಹಗರಣಗಳೂ ಸುತ್ತಿಕೊಂಡಿದ್ದವು. ಹೆಚ್ಚು ನಿಯಂತ್ರಿತವಾಗಿದ್ದ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿ ಸಂಪತ್ತು ಸೃಷ್ಟಿಸಿದ ಜುಂಝುನ್‌ವಾಲಾ ಅವರ ಹೆಸರು ಹಗರಣಗಳ ಜೊತೆ ಹೆಚ್ಚಾಗಿ ತಳಕು ಹಾಕಿಕೊಂಡಿರಲಿಲ್ಲ.

ಜುಂಝುನ್‌ವಾಲಾ ಅವರನ್ನು ಖ್ಯಾತ ಹೂಡಿಕೆದಾರ ವಾರನ್ ಬಫೆಟ್ ಅವರೊಂದಿಗೆ ಹೋಲಿಸಲಾಗುತ್ತದೆ. ಸಂಪತ್ತು ಸೃಷ್ಟಿಯ ವಿಚಾರದಲ್ಲಿ ಜುಂಝುನ್‌ವಾಲಾ ಅವರಿಗೆ ಯಾವ ಸಂಕೋಚವೂ ಇರಲಿಲ್ಲ. ಇನ್‌ಸೈಡರ್ ಟ್ರೇಡಿಂಗ್‌ಗೆ ಸಂಬಂಧಿಸಿದ ಕೆಲವು ಪ್ರಕರಣಗಳಲ್ಲಿ ಜುಂಝುನ್‌ವಾಲಾ ಹೆಸರು ಕೇಳಿಬಂದಿತ್ತು.

ಅಧ್ಯಯನ ಆಧರಿಸಿ ಟೈಟನ್ ಮತ್ತು ಇಂಡಿಯನ್ ಹೋಟೆಲ್ಸ್ ಕಂಪನಿಯಲ್ಲಿ ಮಾಡಿದ ಹೂಡಿಕೆಗಳು ಅವರಿಗೆ ದೊಡ್ಡ ಲಾಭ ತಂದುಕೊಟ್ಟವು. ಜುಂಝುನ್‌ವಾಲಾ ಯಾವ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡುತ್ತಾರೆ, ಯಾವ ಕಂಪನಿಯಿಂದ ಹೂಡಿಕೆ ಹಿಂದಕ್ಕೆ ಪಡೆಯುತ್ತಾರೆ ಎಂಬುದನ್ನು ದೇಶದ ಹೂಡಿಕೆದಾರರು ಕುತೂಹಲದಿಂದ ಗಮನಿಸುತ್ತಿದ್ದರು.

> ರಾಷ್ಟ್ರೀಯವಾದಿ ಎಂದು ಹೇಳಿಕೊಳ್ಳುವಲ್ಲಿ ಅವರಿಗೆ ಹಿಂಜರಿಕೆ ಇರಲಿಲ್ಲ. ಬಂಡವಾಳಶಾಹಿ ಎನ್ನಲೂ ಅವರಲ್ಲಿ ಹಿಂಜರಿಕೆ ಇರಲಿಲ್ಲ. ಸಂಪತ್ತು ಕೆಟ್ಟದ್ದಲ್ಲ ಎಂದು ನಮಗೆ ಕಲಿಸಿಕೊಟ್ಟರು. ದೇಶದ ಬಗ್ಗೆ ಭರವಸೆ ಹೊಂದಲು ಕಲಿಸಿದರು. ಷೇರುಗಳನ್ನು ಒಂದೇ ದಿನದ ಮಟ್ಟಿಗೆ ಇರಿಸಿಕೊಳ್ಳಬಲ್ಲವರಾಗಿದ್ದರು. ಟೈಟನ್ ಷೇರನ್ನು ದಶಕಗಳ ಅವಧಿಗೂ ಇರಿಸಿಕೊಂಡರು. ಹೂಡಿಕೆಯ ಕಲೆಯಲ್ಲಿ ಅವರು ಅಪಾರ ಕೌಶಲ ಹೊಂದಿದ್ದರು.
>
> **ಡಿ. ಮುತ್ತುಕೃಷ್ಣನ್,** ಹೂಡಿಕೆದಾರ

ಮುಖ್ಯಾಂಶಗಳು

- **1985ರಲ್ಲಿ ₹ 5,000 ಬಳಸಿ ಹೂಡಿಕೆ ಪಯಣ ಆರಂಭ**
- **ಟೈಟನ್‌ನಲ್ಲಿ ಮಾಡಿದ ಹೂಡಿಕೆಯು ₹ 11 ಸಾವಿರ ಕೋಟಿ ಆಗಿ ಬೆಳೆದಿದೆ**

ಜುಂಝುನ್‌ವಾಲಾ ಅವರು ತಮ್ಮ ರೇರ್ ಎಂಟರ್‌ಪ್ರೈಸಸ್ ಕಚೇರಿಯಲ್ಲಿ ನಡೆಸುವ ಷೇರುಗಳ ಅಧ್ಯಯನವು, ಸಂಪತ್ತು ಸೃಷ್ಟಿಸಿಕೊಳ್ಳಲು ನೆರವಾಯಿತು ಎಂದು ಬಲ್ಲವರು ಹೇಳುತ್ತಾರೆ.

ಕಂಪನಿಗಳ ಹಣಕಾಸಿನ ಸಾಧನೆ ಚೆನ್ನಾಗಿಲ್ಲದಿದ್ದರೆ ಜುಂಝುನ್‌ವಾಲಾ ಪ್ರಶ್ನಿಸದೆ ಸುಮ್ಮನಿರುತ್ತಿರಲಿಲ್ಲ. 2 ದಶಕಗಳಿಂದ ಟೈಟನ್ ಕಂಪನಿಯಲ್ಲಿ ಹೂಡಿಕೆ ಮಾಡಿರುವ ಅವರು 2020ರಲ್ಲಿ ಒಮ್ಮೆ ಕಂಪನಿಯ ಆಡಳಿತ ಮಂಡಳಿಗೆ ಕಠಿಣ ಪ್ರಶ್ನೆಗಳನ್ನು ಕೇಳಿದ್ದರು.

ಜುಂಝುನ್‌ವಾಲಾ ಪಾಲಿಗೆ ಎಲ್ಲವೂ ಸಲೀಸಾಗಿ ಆಗುತ್ತಿರಲಿಲ್ಲ. ಅಪಾರ ಹಣವಿದ್ದರೂ ಅದು ಎಲ್ಲ ಬಾರಿಯೂ ನೆರವಿಗೆ ಬರುತ್ತಿರಲಿಲ್ಲ. ದಕ್ಷಿಣ ಮುಂಬೈನಲ್ಲಿ ಮನೆ ಖರೀದಿಗೆ ಅವರು ನಡೆಸಿದ ಯತ್ನವು 'ಮರಳಿ ಯತ್ನವ ಮಾಡು' ಮಾತಿಗೆ ತಕ್ಕಂತಿದೆ. 14 ಫ್ಲ್ಯಾಟ್‌ಗಳ ಅಪಾರ್ಟ್‌ಮೆಂಟ್ ಕಟ್ಟಡವನ್ನು ಐದು ವರ್ಷಗಳಲ್ಲಿ ಹಲವು ಒಪ್ಪಂದಗಳ ಮೂಲಕ ಖರೀದಿಸಿದರು. ಆ ಕಟ್ಟಡವನ್ನು ಬೀಳಿಸಿ, ಹೊಸ 14 ಮಹಡಿಯ ಮನೆ ಕಟ್ಟಿಸುತ್ತಿದ್ದರು.

ಮುಂಚೂಣಿ ರೇಟಿಂಗ್ಸ್ ಸಂಸ್ಥೆಯಾಗಿರುವ ಕ್ರಿಸಿಲ್‌ನಲ್ಲಿನ ಷೇರುಗಳನ್ನು ಮಾರಾಟ ಮಾಡಿ ಅವರು ಅಪಾರ್ಟ್‌ಮೆಂಟ್ ಕಟ್ಟಡ ಖರೀದಿಸಿದರು. ಈ ಅಪಾರ್ಟ್‌ಮೆಂಟ್ ಕಟ್ಟಡ ಖರೀದಿಸುವುದು ಅವರ ಪಾಲಿಗೆ ಭಾವುಕ ತೀರ್ಮಾನ ಆಗಿತ್ತು. ಆದರೆ, ನಂತರದಲ್ಲಿ ಕ್ರಿಸಿಲ್ ಷೇರುಗಳಲ್ಲಿ ಕಂಡ ಮೌಲ್ಯವರ್ಧನೆಯ ಪ್ರಯೋಜನ ಜುಂಝುನ್‌ವಾಲಾ ಅವರಿಗೆ ಸಿಗಲಿಲ್ಲ. ಇದಕ್ಕಾಗಿ ಬೇಸರವನ್ನೂ ಅವರು ವ್ಯಕ್ತಪಡಿಸಿದ್ದರು.

ಹೂಡಿಕೆದಾರರು ಅಧ್ಯಯನಕ್ಕೆ ಹೆಚ್ಚು ಗಮನ ಕೊಡಬೇಕು ಎನ್ನುತ್ತಿದ್ದರು. ದೀರ್ಘಾವಧಿ ಕಾರ್ಯತಂತ್ರ ಹೊಂದಬೇಕು ಎಂದು ಕಿವಿಮಾತು ಹೇಳುತ್ತಿದ್ದರು. ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗಲೆಲ್ಲ ಸರಳವಾದ ಪ್ಯಾಂಟ್, ಶರ್ಟ್ ಧರಿಸುತ್ತಿದ್ದರು. ಒಳ್ಳೆಯ ಆಹಾರ ಮತ್ತು ಮದ್ಯ ಅವರಿಗೆ ಇಷ್ಟವಾಗುತ್ತಿತ್ತು.

ಸಂಪತ್ತು ಸೃಷ್ಟಿಗೆ ದಶಕಗಳಿಂದ ಶ್ರಮ ವಹಿಸಿದ ತಾವು ಆರೋಗ್ಯ ಕಾಪಾಡಿಕೊಳ್ಳಲು ಹೆಚ್ಚು ಗಮನ ನೀಡಲಿಲ್ಲ ಎಂದು ಈಚೆಗೆ ಒಮ್ಮೆ ಹೇಳಿದ್ದರು. ಆಕಾಸಾ ಏರ್ ಕಂಪನಿಯ ಸೇವೆಗಳ ಆರಂಭ ಕಾರ್ಯಕ್ರಮ ಈಚೆಗೆ ನಡೆಯಿತು. ಆಗ ಗಾಲಿಕುರ್ಚಿಯಲ್ಲಿ ಕುಳಿತಿದ್ದ ಜುಂಝುನ್‌ವಾಲಾ ದಣಿದವರಂತೆ ಕಾಣುತ್ತಿದ್ದರು.

ಹವಾಮಾನ, ಸಾವು, ಮಾರುಕಟ್ಟೆಯ ಬಗ್ಗೆ ಖಚಿತವಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ ಎನ್ನುವುದು ಜುಂಝುನ್‌ವಾಲಾ ಯಾವಾಗಲೂ ಹೇಳುವ ಮಾತಾಗಿತ್ತು.

ಸಣ್ಣ ಹೂಡಿಕೆದಾರರಿಗೆ ನಷ್ಟ ಆಗುವುದೇಕೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಷೇರುಗಳಲ್ಲಿ ಹೂಡಿಕೆ ಮಾಡುವಾಗ ಹುಂಬತನಕ್ಕೆ ಬಿದ್ದು, ಅರಿವಿಲ್ಲದೆ ಹೂಡಿಕೆ ಮಾಡಿ ದುಡ್ಡು ಕಳೆದುಕೊಳ್ಳುವವರು ಹೆಚ್ಚಿನ ಸಂಖ್ಯೆಯಲ್ಲಿ ಸಿಗುತ್ತಾರೆ. ಶ್ರೀಮಂತಿಕೆಯತ್ತ ನಿಧಾನಗತಿಯ ನಡಿಗೆಯೇ ಖ್ಯಾತ ಹೂಡಿಕೆ ತಜ್ಞ ವಾರನ್ ಬಫೆಟ್ ಅನುಸರಿಸಿದ ಮಾರ್ಗ. ಸಂಪತ್ತು ವೃದ್ಧಿಗೆ ಸಮಯ ಬೇಕು ಎನ್ನುವ ಸರಳ ಸತ್ಯ ನಮಗೆ ಗೊತ್ತಿರಬೇಕು.

ನೀವೇ ಒಂದು ಉದ್ದಿಮೆಯನ್ನು ಇವತ್ತು ಆರಂಭ ಮಾಡಿದರೆ ಅದು ಲಾಭ ಗಳಿಸಿ ಉತ್ತಮ ಸ್ಥಿತಿಗೆ ಬರಲು ಒಂದೆರಡು ವರ್ಷಗಳಾದರೂ ಬೇಕು. ಆದರೆ, ಷೇರು ಖರೀದಿ ಮಾಡುವವರು ಮಾತ್ರ ಇವತ್ತು ಖರೀದಿ ಮಾಡಿದ ಷೇರು ನಾಳೆಯೇ ಹೆಚ್ಚು ಲಾಭ ಕೊಡಬೇಕು ಎಂದು ಬಯಸುತ್ತಾರೆ. ದಿಢೀರ್ ಲಾಭ ಸಿಗದಿದ್ದಾಗ ಆ ಷೇರುಗಳನ್ನು ಕೊಂಡ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿ ಕೈ ಸುಟ್ಟುಕೊಳ್ಳುವವರೂ ಇದ್ದಾರೆ. ಸಣ್ಣ ಹೂಡಿಕೆದಾರರಲ್ಲಿ ಶೇಕಡ 90ರಷ್ಟು ಮಂದಿ ಷೇರು ಹೂಡಿಕೆಗಳಲ್ಲಿ ನಷ್ಟ ಮಾಡಿಕೊಳ್ಳುವುದು ಹೀಗಿಯೇ.

ಯಾವೆಲ್ಲ ಕಾರಣಕ್ಕೆ ನಷ್ಟ?: ಯಾರೋ ಹೇಳಿದರು ಎನ್ನುವ ಕಾರಣಕ್ಕೆ, ಸ್ಟಾಕ್ ಟಿಪ್ಸ್‌ಗಳನ್ನು ಆಧರಿಸಿ ಹೂಡಿಕೆ ಮಾಡುವವರು ದುಡ್ಡು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು. ಕಡಿಮೆ ಬೆಲೆಗೆ ಸಿಗುತ್ತವೆ ಎನ್ನುವ ಕಾರಣಕ್ಕೆ ಆರ್ಥಿಕವಾಗಿ ಸುಸ್ಥಿತಿಯಲ್ಲಿಲ್ಲದ ಕಂಪನಿಗಳ ಷೇರುಗಳನ್ನು ಖರೀದಿಸಿದರೆ ದುಡ್ಡು ಕರಗುವುದು ನಿಶ್ಚಿತ. ಟ್ರೇಡಿಂಗ್‌ನ ಆಳ ಅಗಲ ತಿಳಿಯದೆ ಮುಂದುವರಿದರೆ ನಷ್ಟದ ಹೊರೆ ಹೊರಬೇಕಾಗುತ್ತದೆ. ವಿವಿಧ ಕಾರಣಗಳಿಗೆ ಷೇರು ಮಾರುಕಟ್ಟೆ ಸೂಚ್ಯಂಕಗಳು ಏರಿಳಿತ ಕಾಣುವಾಗ ತಾಳ್ಮೆ ಕಳೆದುಕೊಂಡು ಷೇರುಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿದರೂ ನಷ್ಟ ಉಂಟಾಗುತ್ತದೆ.

ಯಾವ ರೀತಿಯ ಕಂಪನಿ, ಯಾವ ರೀತಿಯ ಬಿಸಿನೆಸ್, ಅದರ ಭವಿಷ್ಯದ ಬೆಳವಣಿಗೆ ಸಾಧ್ಯತೆಗಳೇನು ಎನ್ನುವುದನ್ನು ತಿಳಿಯದೆ ಹೂಡಿಕೆ ಮಾಡಿದರೂ ಷೇರುಪೇಟೆಯಲ್ಲಿ ನಿಮ್ಮ ದುಡ್ಡು ಕರಗುತ್ತದೆ.

ಹೆದರಿದರೆ ನಷ್ಟದ ಹೊರೆ: ಷೇರು ಮಾರುಕಟ್ಟೆಯಲ್ಲಿ ಏರಿಳಿತ ಎಂಬುದು ತೀರಾ ಸಮಾನ್ಯ. 2020ರ ಮಾರ್ಚ್‌ನಲ್ಲಿ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 41,000 ಅಂಶಗಳಿಂದ 25,000 ಅಂಶಗಳಿಗೆ ಏಕಾಏಕಿ ಕುಸಿತ ಕಂಡಿತು. 2021ರ ಮಾರ್ಚ್ ವೇಳೆಗೆ ಸೆನ್ಸೆಕ್ಸ್ ಮತ್ತೆ 50,000 ಅಂಶಗಳ ಗಡಿ ದಾಟಿ 2022ರ ಜನವರಿ ವೇಳೆಗೆ 61,000 ಅಂಶಗಳಿಗೆ ಏರಿಕೆ ಕಂಡಿತ್ತು.

ಆದರೆ ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ತೀವ್ರಗೊಂಡ ನಂತರ, ಮೇ ವೇಳೆಗೆ ಷೇರುಪೇಟೆ ಸೂಚ್ಯಂಕ ಮತ್ತೆ 51,000 ಅಂಶಗಳಿಗೆ ಕುಸಿಯಿತು. ಈಗ ಸೆನ್ಸೆಕ್ಸ್ ಮತ್ತೆ 59,000 ಅಂಶಗಳ ಆಸುಪಾಸಿನಲ್ಲಿದೆ. ಸೂಚ್ಯಂಕದ ಏರಿಳಿತಕ್ಕೆ ಹೆಚ್ಚು ತಲೆಕೆಡಿಸಿಕೊಂಡು ಷೇರುಗಳನ್ನು ಮಾರಾಟ ಮಾಡಿದವರು ಹಣ ಕಳೆದುಕೊಂಡಿರುತ್ತಾರೆ. ಆದರೆ ಏರಿಳಿತಗಳ ಬಗ್ಗೆ ಹೆಚ್ಚು ಚಿಂತೆ ಮಾಡದೆ ಉತ್ತಮ ಕಂಪನಿಗಳ ಷೇರುಗಳಲ್ಲಿ ಹೂಡಿಕೆ ಮಾಡಿದವರು ಉತ್ತಮ ಲಾಭ ಗಳಿಸಿಕೊಂಡಿದ್ದಾರೆ.



ಇತಿಹಾಸ ಇದನ್ನೇ ಹೇಳುತ್ತದೆ: ಷೇರು ಮಾರುಕಟ್ಟೆ ಹೂಡಿಕೆ ದೀರ್ಘಾವಧಿಗೆ ಅಪಾಯಕಾರಿಯಲ್ಲ, ಆದರೆ, ಅಲ್ಪಾವಧಿ ಲಾಭದ ಉದ್ದೇಶವಿದ್ದರೆ ಷೇರುಪೇಟೆ ಹೂಡಿಕೆಯಲ್ಲಿ ಖಂಡಿತವಾಗಿಯೂ ದೊಡ್ಡ ಮಟ್ಟದ ರಿಸ್ಕ್ ಇದೆ. ಷೇರುಪೇಟೆಯಲ್ಲಿ ಏರಿಳಿತಗಳೆಲ್ಲ ಸಹಜ.

ಷೇರು ಮಾರುಕಟ್ಟೆಯು ದೀರ್ಘಾವಧಿಯಲ್ಲಿ ಹೂಡಿಕೆದಾರರಿಗೆ ಭರ್ಜರಿ ಲಾಭ ತಂದುಕೊಟ್ಟಿದೆ. 2008ರಲ್ಲಿ ಅಮೆರಿಕದ ಅಗ್ರಮಾನ್ಯ ಹಣಕಾಸು ಸಂಸ್ಥೆ ಲೀಮನ್ ಬ್ರದರ್ಸ್ ದಿವಾಳಿ ಘೋಷಿಸಿತು. ಇದರ ಬೆನ್ನಿಗೇ ಭಾರತದಲ್ಲಿ ಸತ್ಯಂ ಹಗರಣ ಬೆಳಕಿಗೆ ಬಂತು. 17,000 ಅಂಶಗಳಲ್ಲಿದ್ದ ಸೆನ್ಸೆಕ್ಸ್ 2008ರ ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಸತ್ಯಂ ಹಗರಣದ ಪರಿಣಾಮವಾಗಿ ಏಕಾಏಕಿ 8,000 ಅಂಶಗಳಿಗೆ ಇಳಿಕೆ ಕಂಡಿತು.

ಆದರೆ, 2014ರಲ್ಲಿ ಕೇಂದ್ರದಲ್ಲಿ ಸ್ಪಷ್ಟ ಬಹುಮತ ಇರುವ ಸ್ಥಿರ ಸರ್ಕಾರ ಬಂದ ಕಾರಣ ಮಾರುಕಟ್ಟೆ ಪುಟಿದೆದ್ದಿತ್ತು. 2014ರಲ್ಲಿ ಸೆನ್ಸೆಕ್ಸ್ 25,000 ಅಂಶಗಳಿಗೆ ಜಿಗಿತ ಕಂಡಿತು. ಇತಿಹಾಸವನ್ನು ಹೀಗೆ ತಿರುವಿನೋಡಿದಾಗ ಷೇರು ಮಾರುಕಟ್ಟೆಯಲ್ಲಿನ ಹೂಡಿಕೆ ಒಂದು ವ್ಯವಸ್ಥಿತ ಸೂತ್ರಕ್ಕೆ ಅನುಗುಣವಾಗಿ ನಡೆಯುವ ಲೆಕ್ಕಾಚಾರ ಎನ್ನುವುದು ಸ್ಪಷ್ಟವಾಗುತ್ತದೆ.

ಅರಿತು ಹೂಡಿಕೆ ಮಾಡುವವರಿಗೆ ಷೇರು ಮಾರುಕಟ್ಟೆ ಸಂಪತ್ತು ಗಳಿಸುವ ಕೇಂದ್ರ ಎನ್ನುವುದರಲ್ಲಿ ಎರಡು ಮಾತಿಲ್ಲ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

4ನೇ ವಾರವೂ ಗಳಿಕೆ ಕಂಡ ಸೂಚ್ಯಂಕಗಳು

ಷೇರುಪೇಟೆ ಸೂಚ್ಯಂಕಗಳು ಸತತ ನಾಲ್ಕನೇ ವಾರವೂ ಗಳಿಕೆ ದಾಖಲಿಸಿವೆ. ಆಗಸ್ಟ್ 12ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಉತ್ತಮ ಗಳಿಕೆ ಕಂಡಿವೆ. 59,462 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.84ರಷ್ಟು ಗಳಿಕೆ ಕಂಡಿದೆ. 17,698 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 1.72ರಷ್ಟು ಹೆಚ್ಚಳ ದಾಖಲಿಸಿದೆ.

ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರ ಖರೀದಿ ಭರಾಟೆ, ಡಾಲರ್ ಮೌಲ್ಯ ಇಳಿಕೆ, ತ್ರೈಮಾಸಿಕ ಫಲಿತಾಂಶಗಳಲ್ಲಿ ಉತ್ತಮ ಗಳಿಕೆ ಮತ್ತು ಆಶಾದಾಯಕ ಮುಂಗಾರು ಸೇರಿ ಹಲವು ಅಂಶಗಳು ಪೇಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ಸೂಚ್ಯಂಕ ಶೇ 5ರಷ್ಟು, ಕ್ಯಾಪಿಟಲ್ ಗೂಡ್ಸ್ ಶೇ 4ರಷ್ಟು, ಪವರ್ ಸೂಚ್ಯಂಕ ಶೇ 3.6ರಷ್ಟು ಜಿಗಿದಿವೆ. ಎಫ್‌ಎಂಸಿಜಿ ವಲಯ ಶೇ 1ರಷ್ಟು ಕುಸಿತ ಕಂಡಿದೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 7,850.12 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 24,478.19 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಏರಿಕೆ–ಇಳಿಕೆ: ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕ ಶೇ 2ರಷ್ಟು ಗಳಿಸಿಕೊಂಡಿದೆ. ಜೊಮಾಟೊ, ಪಿರಾಮಲ್ ಎಂಟರ್‌ಪ್ರೈಸಸ್, ಜೈಡಸ್ ಲೈಫ್ ಸೈನ್ಸಸ್, ಹಿಂಡಾಲ್ಕೊ ಇಂಡಸ್ಟ್ರೀಸ್, ಅದಾನಿ ಟ್ರಾನ್ಸ್‌ಮಿಷನ್, ಕೋಲ್ ಇಂಡಿಯಾ ಮತ್ತು ಯುಪಿಎಲ್ ಉತ್ತಮ ಗಳಿಕೆ ಕಂಡಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಹೆಚ್ಚಳ ದಾಖಲಿಸಿದೆ. ಇಂದ್ರಪ್ರಸ್ಥ ಗ್ಯಾಸ್, ಹಿಂದೂಸ್ಥಾನ್ ಏರೋನಾಟಿಕ್ಸ್, ಜೆಎಸ್‌ಡಬ್ಲ್ಯು ಎನರ್ಜಿ, ಭಾರತ್ ಫೋರ್ಜ್, ಟೊರೆಂಟ್ ಪವರ್, ಕುಮಿನ್ಸ್ ಇಂಡಿಯಾ, ಭಾರತ್ ಎಲೆಕ್ಟ್ರಾನಿಕ್ಸ್, ಆದಿತ್ಯ ಬಿರ್ಲಾ ಕ್ಯಾಪಿಟಲ್ ಮತ್ತು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಗಳಿಸಿಕೊಂಡಿವೆ.

ನ್ಯಾಟ್ಕೊ ಫಾರ್ಮಾ, ಅಬೋಟ್ ಇಂಡಿಯಾ, ಎಂಆರ್‌ಎಫ್, ಎನ್‌ಎಚ್‌ಪಿಸಿ, 3 ಎಂ ಮತ್ತು ಅಲ್ಕೆಂ ಲ್ಯಾಬೊರೇಟರಿಸ್ ಕುಸಿದಿವೆ. ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1ರಷ್ಟು ಸುಧಾರಿಸಿವೆ.

ಬಿರ್ಲಾ ಟಯರ್ಸ್, ಎವರೆಸ್ಟ್ ಕ್ಯಾಂಟೋ ಸಿಲಿಂಡರ್, ಡೈನೆಮಿಕ್ ಪ್ರಾಡಕ್ಟ್ಸ್, ಫ್ಯೂಚರ್ ರಿಟೇಲ್, ಸಂಡೂರ್ ಮ್ಯಾಂಗನೀಸ್ ಆ್ಯಂಡ್ ಓರ್ಸ್ ಮತ್ತು ಕಿರ್ಲೋಸ್ಕರ್ ಬ್ರದರ್ಸ್ ಶೇ 15ರಿಂದ ಶೇ 34ರಷ್ಟು ಇಳಿಕೆ ದಾಖಲಿಸಿವೆ.

ಮುನ್ನೋಟ: ಈ ವಾರ ಬಿರ್ಲಾ ಟೈಯರ್ಸ್, ವೆಲ್‌ನೆಸ್ ನೋನಿ, ಅಲೆಕ್ಸಾಂಡರ್ ಸ್ಟ್ಯಾಂಪ್ಸ್ ಆ್ಯಂಡ್ ಕಾಯಿನ್ಸ್ ಲಿ, ಶ್ರೀ ಹನುಮಾನ್ ಶುಗರ್ಸ್ ಆ್ಯಂಡ್ ಇಂಡಸ್ಟ್ರೀಸ್ ಲಿ., ರಾಯಲ್ ಕುಷನ್ ವಿನೈಲ್ ಪ್ರಾಡಕ್ಟ್ಸ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳ ಜೊತೆ ದೇಶಿ ಬೆಳವಣಿಗೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಕೆಬಿಎಲ್: ಅಮೃತ ಸಮೃದ್ಧಿ ಯೋಜನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕರ್ಣಾಟಕ ಬ್ಯಾಂಕ್, 'ಕೆಬಿಎಲ್- ಅಮೃತ ಸಮೃದ್ಧಿ' ಎಂಬ ಠೇವಣಿ ಯೋಜನೆಯನ್ನು ಘೋಷಿಸಿದೆ.

ಇದು 75 ವಾರಗಳ (525 ದಿನಗಳು) ಠೇವಣಿ ಯೋಜನೆಯಾಗಿದ್ದು, ವಾರ್ಷಿಕ ಶೇಕಡ 6.1ರಷ್ಟು ಬಡ್ಡಿ ಇರುತ್ತದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ.

'ಕೆಬಿಎಲ್- ಅಮೃತ ಸಮೃದ್ಧಿ' ಯೋಜನೆಯನ್ನು ಬಿಡುಗಡೆ ಮಾಡಿದ ಬ್ಯಾಂಕಿನ ಆಡಳಿತ ನಿರ್ದೇಶಕ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ.ಎಸ್. ಅವರು, 'ಕರ್ಣಾಟಕ ಬ್ಯಾಂಕ್ ದೇಶಭಕ್ತಿಯ ಸಮೃದ್ಧ ಪರಂಪರೆ ಹಾಗೂ ಮೌಲ್ಯಗಳನ್ನು ಪ್ರತಿಬಿಂಬಿಸುತ್ತಾ ಅದರ ಪೋಷಣೆಗೆ ಮುಂಚೂಣಿಯಲ್ಲಿರುತ್ತದೆ. ಸೀಮಿತ ಅವಧಿಗಾಗಿ ಇರುವ ಈ ಯೋಜನೆಯ ಪ್ರಯೋಜನವನ್ನು ಹೆಚ್ಚಿನ ಗ್ರಾಹಕರು ಪಡೆಯಬೇಕು' ಎಂದರು.

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ) ₹100-590

ದ್ವಿತಳಿ (ಬಿ.ವಿ) ₹408-822

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು

100 ಮೊಟ್ಟೆಗೆ ₹435

ಮೊಟ್ಟೆಗೆ ₹60

ಮೈಸೂರು

100 ಮೊಟ್ಟೆಗೆ ₹445

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಸಚಿವಾಲಯದಿಂದ ಪರಿಶೀಲನೆ: ಮೂಲಗಳ ಮಾಹಿತಿ

ಹೊಸ ಆದಾಯ ತೆರಿಗೆ ವ್ಯವಸ್ಥೆ: ಇನ್ನಷ್ಟು ಆಕರ್ಷಕ ನಿರೀಕ್ಷೆ

ನವದೆಹಲಿ (ಪಿಟಿಐ): ವಿನಾಯಿತಿಗಳು ಇಲ್ಲದ ವೈಯಕ್ತಿಕ ಆದಾಯ ತೆರಿಗೆ ವ್ಯವಸ್ಥೆಯನ್ನು ಇನ್ನಷ್ಟು ಆಕರ್ಷಕವಾಗಿಸಲು ಕೇಂದ್ರ ಹಣಕಾಸು ಸಚಿವಾಲಯ ಉದ್ದೇಶಿಸಿದೆ. ಹೀಗಾಗಿ, ಸಚಿವಾಲಯವು ವಿನಾಯಿತಿ ಮುಕ್ತ ತೆರಿಗೆ ವ್ಯವಸ್ಥೆಯ ಪರಿಶೀಲನೆ ನಡೆಸುವ ಇರಾದೆ ಹೊಂದಿದೆ ಎಂದು ಮೂಲಗಳು ಹೇಳಿವೆ.

ಯಾವುದೇ ತರಹದ ತೆರಿಗೆ ವಿನಾಯಿತಿ ಇಲ್ಲದ ವ್ಯವಸ್ಥೆ ರೂಪಿಸುವ ಗುರಿಯನ್ನು ಸರ್ಕಾರ ಹೊಂದಿದೆ. ಅಲ್ಲದೆ, ವಿನಾಯಿತಿಗಳನ್ನು ಒಳಗೊಂಡಿರುವ ಹಳೆಯ ತೆರಿಗೆ ವ್ಯವಸ್ಥೆಯನ್ನು ಕೈಬಿಡುವ ಬಗ್ಗೆಯೂ ಆಲೋಚನೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

2020–21ರ ಕೇಂದ್ರ ಬಜೆಟ್‌ನಲ್ಲಿ ವಿನಾಯಿತಿಗಳು ಇಲ್ಲದ ಹೊಸ ತೆರಿಗೆ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಹಳೆಯ ಮತ್ತು ಹೊಸ ವ್ಯವಸ್ಥೆ ಪೈಕಿ ಒಂದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ತೆರಿಗೆದಾರರಿಗೆ ನೀಡಲಾಗಿದೆ. ತೆರಿಗೆದಾರರು ವಿನಾಯಿತಿ ಸೌಲಭ್ಯ ಇರುವ ಈಗಿನ ತೆರಿಗೆ ಯೋಜನೆ ಅಥವಾ ಕಡಿಮೆ ತೆರಿಗೆ ದರದ, ವಿನಾಯಿತಿ ಸೌಲಭ್ಯ ಇಲ್ಲದ ಹೊಸ ತೆರಿಗೆ ವ್ಯವಸ್ಥೆ ನಡುವೆ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು.

ಮನೆ ಮತ್ತು ಶಿಕ್ಷಣ ಸಾಲಗಳನ್ನು ತೀರಿಸಿರುವ ಜನ ಹೊಸ ತೆರಿಗೆ ವ್ಯವಸ್ಥೆಗೆ ಬರಲು ಮುಂದಾಗಿದ್ದಾರೆ. ಏಕೆಂದರೆ ಅವರಿಗೆ ವಿನಾಯಿತಿ ಪಡೆಯಲು ಏನೂ ಇಲ್ಲವಾಗಿದೆ ಎಂದು ಮೂಲಗಳು ತಿಳಿಸಿವೆ. ಹೊಸ ತೆರಿಗೆ ವ್ಯವಸ್ಥೆಯಲ್ಲಿ ತೆರಿಗೆ ದರಗಳನ್ನು ಕಡಿಮೆ ಮಾಡುವುದರಿಂದ ಅದು ಮತ್ತಷ್ಟು ಆಕರ್ಷಕವಾಗಲಿದೆ ಎಂದು ಮೂಲಗಳು ಅಭಿಪ್ರಾಯಪಟ್ಟಿವೆ.

ಹೊಸ ತೆರಿಗೆ ವ್ಯವಸ್ಥೆ

ವಾರ್ಷಿಕ ಆದಾಯ	ತೆರಿಗೆ ಪ್ರಮಾಣ
₹ 2.5 ಲಕ್ಷದವರೆಗೆ	ಯಾವುದೇ ತೆರಿಗೆ ಇಲ್ಲ
₹ 2.5 ಲಕ್ಷದಿಂದ ₹ 5 ಲಕ್ಷದವರೆಗೆ	5%
₹5 ಲಕ್ಷದಿಂದ ₹ 7.5 ಲಕ್ಷದವರೆಗೆ	10%
₹7.5 ಲಕ್ಷದಿಂದ ₹10 ಲಕ್ಷದವರೆಗೆ	15%
₹10 ಲಕ್ಷದಿಂದ ₹12.5 ಲಕ್ಷದವರೆಗೆ	20%
₹12.5 ಲಕ್ಷದಿಂದ ₹15 ಲಕ್ಷದವರೆಗೆ	25%
₹15 ಲಕ್ಷಕ್ಕಿಂತ ಹೆಚ್ಚು	30%

ಆಗಸ್ಟ್‌ನಲ್ಲಿ ಈವರೆಗೆ ₹ 18,828 ಕೋಟಿ ಹೂಡಿಕೆ

ಎಫ್‌ಪಿಐ: ಎಫ್‌ಎಂಸಿಜಿ, ವಾಹನ ಷೇರುಗಳತ್ತ ಆಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಭಾರತದ ಷೇರುಪೇಟೆಗಳಲ್ಲಿ ಈಚೆಗೆ ವಾಹನ, ಬಂಡವಾಳ ಸರಕುಗಳು, ಎಫ್‌ಎಂಸಿಜಿ ಮತ್ತು ದೂರಸಂಪರ್ಕ ವಲಯದ ಷೇರುಗಳ ಖರೀದಿಗೆ ಹೆಚ್ಚಿನ ಗಮನ ಹರಿಸಿದ್ದಾರೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.


ಇನ್ನೊಂದೆಡೆ, ವಿದೇಶಿ ಹೂಡಿಕೆದಾರರು ಮಾಹಿತಿ ತಂತ್ರಜ್ಞಾನ (ಐ.ಟಿ.) ಕಂಪನಿಗಳ ಷೇರು ಮಾರಾಟ ಮುಂದುವರಿಸಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ಡಾಲರ್ ಮೌಲ್ಯ ಇಳಿಕೆ ಆಗುತ್ತಿದೆ. ಜಗತ್ತಿನ ಅತಿದೊಡ್ಡ ಆರ್ಥಿಕತೆಗಳ ಪೈಕಿ ಭಾರತದ ಆರ್ಥಿಕತೆಯು ಉತ್ತಮ ಬೆಳವಣಿಗೆ ಕಾಣುವ ನಿರೀಕ್ಷೆ ಇದೆ. ಈ ಅಂಶಗಳು ಬಂಡವಾಳ ಒಳಹರಿವಿಗೆ ಪ್ರಮುಖ ಕಾರಣಗಳು' ಎಂದು ಹೇಳಿದರು.

'ಜುಲೈನಲ್ಲಿ ನಿವ್ವಳ ಖರೀದಿ ನಡೆಸಿದ ಹೂಡಿಕೆದಾರರು ಆಗಸ್ಟ್‌ನಲ್ಲಿ ಈವರೆಗೆ ಹೆಚ್ಚಿನ ಪ್ರಮಾಣದಲ್ಲಿ ಷೇರುಗಳನ್ನು ಖರೀದಿಸಿದ್ದಾರೆ. ನ್ಯಾಷನಲ್ ಸೆಕ್ಯುರಿಟಿ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮಾಹಿತಿಯ ಪ್ರಕಾರ, ಆಗಸ್ಟ್ 1ರಿಂದ 12ರವರೆಗಿನ ಅವಧಿಯಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 18,828 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ' ಎಂದು ಅವರು ಮಾಹಿತಿ ನೀಡಿದರು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರಕ್ಕೆ ಕೊನೆಗೊಂಡ ವಾರದ ವಹಿವಾಟಿನಲ್ಲಿ ₹ 7,850 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಅದಕ್ಕೂ ಹಿಂದಿನ ವಾರ ₹6,992 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದರು. ಇದರಿಂದಾಗಿ ಆಗಸ್ಟ್ 12ರವರೆಗಿನ ಅವಧಿಯಲ್ಲಿ ಒಟ್ಟು ಹೂಡಿಕೆಯು ₹ 14,842 ಕೋಟಿಗೆ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆ (₹ಕೋಟಿಗಳಲ್ಲಿ)



(* ಆಗಸ್ಟ್ 9ರಂದು ಮೊಹರಂ ಪ್ರಯುಕ್ತ ಷೇರುಪೇಟೆಗೆ ರಜೆ)

ಸಂಕ್ಷಿಪ್ತ ಸುದ್ದಿ

ಶಿವಸಂಗ್ರಾಮ್ ಪಕ್ಷದ ವಿನಾಯಕ್ ಮೇಟೆ ನಿಧನ

ಮುಂಬೈ: ಶಿವಸಂಗ್ರಾಮ್ ಪಕ್ಷದ ನಾಯಕ ಮತ್ತು ಮಹಾರಾಷ್ಟ್ರ ವಿಧಾನ ಪರಿಷತ್ತಿನ ಮಾಜಿ ಸದಸ್ಯ ವಿನಾಯಕ್ ಮೇಟೆ (52) ರಸ್ತೆ ಅಪಘಾತದಲ್ಲಿ ಭಾನುವಾರ ಸಾವನ್ನಪ್ಪಿದ್ದಾರೆ.

ಪುಣೆ–ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿ ವಿನಾಯಕ್ ಮೇಟೆ ಸಂಚರಿಸುತ್ತಿದ್ದ ಕಾರು ಟ್ರಕ್‌ಗೆ ಹಿಂಬದಿಯಿಂದ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮರಾಠಾ ಮೀಸಲಾತಿ ಹೋರಾಟದ ನಾಯಕರಾಗಿದ್ದ ಅವರು ಹಲವು ಹೋರಾಟಗಳ ಮೂಲಕ ಗುರುತಿಸಿಕೊಂಡಿದ್ದರು.

ಪೊಲೀಸ್ ಪದಕಕ್ಕೆ 1,082 ಮಂದಿ ಆಯ್ಕೆ

ನವದೆಹಲಿ: ಜಮ್ಮು–ಕಾಶ್ಮೀರ ಹಾಗೂ ನಕ್ಸಲರ ವಿರುದ್ಧ ನಡೆದ ಕಾರ್ಯಾಚರಣೆಗಳಲ್ಲಿ ಭಾಗಿಯಾಗಿದ್ದವರು ಸೇರಿದಂತೆ ಒಟ್ಟು 1,082 ಪೊಲೀಸರು ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನೀಡಲಾಗುವ ಪ್ರತಿಷ್ಠಿತ ಶೌರ್ಯ ಪದಕ ಗೌರವಕ್ಕೆ ಪಾತ್ರರಾಗಿದ್ದಾರೆ.

ಪೊಲೀಸರಿಗೆ ನೀಡುವ ಶೌರ್ಯ ಪದಕಕ್ಕೆ ಒಟ್ಟು 347 ಪೊಲೀಸರು, ವಿಶಿಷ್ಟ ಸೇವೆಗಾಗಿ ನೀಡುವ ರಾಷ್ಟ್ರಪತಿಗಳ ಪದಕಕ್ಕೆ 87 ಹಾಗೂ ಅತ್ಯುನ್ನತ ಸೇವೆಗಾಗಿ ನೀಡುವ ಪದಕಕ್ಕಾಗಿ 648 ಪೊಲೀಸರು ಆಯ್ಕೆಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಶೌರ್ಯ ಪದಕಕ್ಕೆ ಗರಿಷ್ಠ 109 ಸಿಆರ್‌ಪಿಎಫ್ ಸಿಬ್ಬಂದಿ ಆಯ್ಕೆಯಾಗಿದ್ದಾರೆ. ಸಿಬಿಐನ ಅರು ಜನ ಅಧಿಕಾರಿಗಳು ರಾಷ್ಟ್ರಪತಿಗಳ ವಿಶಿಷ್ಟ ಸೇವಾ ಪದಕ ಹಾಗೂ 24 ಜನ ಸಿಬ್ಬಂದಿ ಅತ್ಯುನ್ನತ ಪೊಲೀಸ್ ಸೇವಾ ಪದಕಕ್ಕೆ ಆಯ್ಕೆಯಾಗಿದ್ದಾರೆ.

ಫುಟ್‌ಬಾಲ್: ಎಎಸ್‌ಸಿಗೆ ಜಯ

ಬೆಂಗಳೂರು: ಎಎಸ್‌ಸಿ ಸೆಂಟರ್ ಎಫ್‌ಸಿ ತಂಡವು ಸಿ. ಪುಟ್ಟಯ್ಯ ಸ್ಮಾರಕ ಟ್ರೋಫಿ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಭಾನುವಾರ 3-1ರಿಂದ ಈಗಲ್ಸ್ ಎದುರು ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಎಂಇಜಿ ಸೆಂಟರ್ 1-1ರಿಂದ ಬೆಂಗಳೂರು ಡ್ರೀಮ್ ಯುನೈಟೆಡ್‌ನೊಂದಿಗೆ ಡ್ರಾ ಸಾಧಿಸಿತು.

ಬ್ಯಾಸ್ಕೆಟ್‌ಬಾಲ್: ಫೈನಲ್‌ಗೆ ಪಿಪಿಸಿ, ಮೌಂಟ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಿಲಿಂದ್ ಗಳಿಸಿದ ಅಮೋಘ 26 ಪಾಯಿಂಟ್ಸ್ ಬಲದಿಂದ ಪೀಪಲ್ಸ್ ಪ್ಲೇಯರ್ಸ್ ಕ್ಲಬ್ (ಪಿಪಿಸಿ) ಜಯನಗರ ಮತ್ತು ಮೌಂಟ್ಸ್ ಕ್ಲಬ್ ತಂಡಗಳು ರಾಜ್ಯ 16 ವರ್ಷದೊಳಗಿನ-ವರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿ-ಪ್‌ನಲ್ಲಿ ಫೈನಲ್‌ಗೆ ಲಗ್ಗೆಯಿಟ್ಟವು.

ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಬಾಲಕರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಭಾನುವಾರ ಪಿಪಿಸಿ ತಂಡವು 47-33ರಿಂದ ವಿವೇಕ್ಸ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ವಿವೇಕ್ಸ್ ಪರ ಆರುಷ್ 13 ಪಾಯಿಂಟ್ಸ್ ಕಲೆಹಾಕಿದರು.

ನಾಲ್ಕರ ಘಟ್ಟದ ಇನ್ನೊಂದು ರೋಚಕ ಹಣಾಹಣಿಯಲ್ಲಿ ವಿಎನ್‌ಸಿಸಿ 62-60ರಿಂದ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವನ್ನು ಸೋಲಿಸಿತು. ವಿಜೇತ ತಂಡದ ದಕ್ಷ್ 19, ವರುಣ್ 18 ಮತ್ತು ಆಯುಷ್ 10 ಪಾಯಿಂಟ್ಸ್ ಗಳಿಸಿದರು. ಬೀಗಲ್ಸ್ ತಂಡಕ್ಕಾಗಿ ಚಿರಾಗ್ ಗಳಿಸಿದ 22 ಪಾಯಿಂಟ್ಸ್ ವ್ಯರ್ಥವಾದವು.

ಬಾಲಕಿಯರ ವಿಭಾಗದ ನಾಲ್ಕರ ಘಟ್ಟದ ಮೊದಲ ಸೆಣಸಾಟದಲ್ಲಿ ಡಿವೈಇಎಸ್ ಮಂಡ್ಯ 57-40ರಿಂದ ಡಿವೈಇಎಸ್ ಮೈಸೂರು ಎದುರು ಜಯಿಸಿತು. ಮಂಡ್ಯ ತಂಡದ ಮಂದಾರ 28 ಪಾಯಿಂಟ್ ಗಳಿಸಿದರು. ಮೈಸೂರು ತಂಡದ ಯಶಸ್ವಿನಿ (32) ಆಟ ವ್ಯರ್ಥವಾಯಿತು. ಮತ್ತೊಂದು ಪಂದ್ಯದಲ್ಲಿ ಮೌಂಟ್ಸ್ ಕ್ಲಬ್ 60-54ರಿಂದ ಎಸ್.ಬ್ಲ್ಯೂಸ್ ಎದುರು ಗೆದ್ದಿತು.

ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್: ಶಿವಾ, ರಿಧಿಮಾಗೆ ವೈಯಕ್ತಿಕ ಪ್ರಶಸ್ತಿ

ಬಸವನಗುಡಿ ಈಜು ಕೇಂದ್ರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜುಕೇಂದ್ರ ತಂಡವು ಭಾನುವಾರ ಮುಕ್ತಾಯವಾದ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಜಯಿಸಿತು.

ಪಡುಕೋಣೆ-ದ್ರಾವಿಡ್ ಕ್ರೀಡಾ ಉತ್ಕೃಷ್ಟತಾ ಕೇಂದ್ರದ ಈಜುಗೊಳದಲ್ಲಿ ನಡೆದ ಸ್ಪರ್ಧೆಯಲ್ಲಿ ಬಸವನಗುಡಿ ತಂಡವು ಒಟ್ಟು 468 ಅಂಕಗಳನ್ನು ಕಲೆಹಾಕಿ, ಪ್ರಥಮ ಸ್ಥಾನ ಗಳಿಸಿತು. 350 ಅಂಕಗಳನ್ನು ಗಳಿಸಿದ ಡಾಲ್ಫಿನ್ ಅಕ್ವೆಟಿಕ್ಸ್ ತಂಡವು ರನ್ನರ್ಸ್ ಅಪ್ ಪಡೆಯಿತು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಬಸವನಗುಡಿ ಕೇಂದ್ರದ ಎಸ್. ಶಿವಾ 40 ಅಂಕಗಳು ಹಾಗೂ ಎರಡು ಕೂಟ ದಾಖಲೆ ಮಾಡಿ, ಪ್ರಶಸ್ತಿ ಗಳಿಸಿದರು. ಇದೇ ಕೇಂದ್ರದ ರಿಧಿಮಾ ವೀರೇಂದ್ರ ಕುಮಾರ್ ಮಹಿಳೆಯರ ವಿಭಾಗದಲ್ಲಿ 43 ಅಂಕ ಗಳಿಸಿ ಚಾಂಪಿಯನ್ ಆದರು.

ಈ ಕೂಟದಲ್ಲಿ ಒಟ್ಟು 15 ನೂತನ ದಾಖಲೆಗಳನ್ನು ನಿರ್ಮಿಸಿದರು.

ಫಲಿತಾಂಶಗಳು: ಪುರುಷರು: 400 ಮೀ ಫ್ರೀಸ್ಟೈಲ್: ಶಿವಾಂಕ್ ವಿಶ್ವನಾಥ್ (ಗಾಪ್ರೆ ಸ್ವಿಮ್ಮಿಂಗ್ ಪ್ರೊಗ್ರಾಂ; 4ನಿ,13.05ಸೆ)-1, ಧ್ಯಾನ್ ಬಾಲಕೃಷ್ಣ (ಬಸವನಗುಡಿ)-2, ಎನ್. ಧೋನಿಶ್ (ವಿಜಯನಗರ ಈಜುಕೇಂದ್ರ)-3.

50 ಮೀ ಬ್ಯಾಕ್‌ಸ್ಟ್ರೋಕ್: ಎಸ್. ಶಿವಾ (ಬಸವನಗುಡಿ; 27.19ಸೆ)-1, ಉತ್ಕರ್ಷ್ ಸಂತೋಷ ಪಾಟೀಲ (ಬಸವನಗುಡಿ)-2, ಎಂ. ಧ್ಯಾನ್ (ಗ್ಲೋಬಲ್)-3

200 ಮೀ ಬಟರ್‌ಫ್ಲೈ: ಉತ್ಕರ್ಷ್ ಸಂತೋಷ್ ಪಾಟೀಲ (2ನಿ,7.75ಸೆ)-1, ನಯನ್ ವಿಘ್ನೇಷ್ ಪಿ. (ನೆಟ್ಟಕಲ್ಲಪ್ಪ ಅಕ್ವೆಟಿಕ್ ಸೆಂಟರ್)-2, ಕಾರ್ತಿಕೇಯನ್ ನಾಯರ್ (ಡಾಲ್ಫಿನ್)-3

4X100 ಮೀ ಮೆಡ್ಲೆ: ಬಸವನಗುಡಿ ಅಕ್ವೆಟಿಕ್ ಸೆಂಟರ್ ಎ (ಉತ್ಕರ್ಷ್ ಪಾಟೀಲ, ಎಸ್. ಶಿವಾ, ಅದಿತ್ ಸಿಮ್ರನ್ ಒಲೆಟಿ, ಎಂ. ಪೃಥ್ವಿ; 3ನಿ,59.77ಸೆ)-1, ಬಸವನಗುಡಿ ಈಜುಕೇಂದ್ರ ಬಿ (ಆಕಾಶ್ ಮಣಿ, ಡಿ.ಎಸ್. ಪೃಥ್ವಿಕ್, ಅನಿರುದ್ಧ ಮುರಳಿ, ಧ್ಯಾನ್ ಬಾಲಕೃಷ್ಣ)-2, ಡಾಲ್ಫಿನ್ ಅಕ್ವೆಟಿಕ್ಸ್ (ಅನಂತಜೀತ್ ಮುಖರ್ಜಿ, ವಿದಿತ್ ಶಂಕರ್, ಕಾರ್ತಿಕೇಯನ್ ನಾಯರ್, ಆರ್. ಸಂಭವ್)-3

ಮಹಿಳೆಯರು:400 ಮೀ ಫ್ರೀಸ್ಟೈಲ್: ಅಶ್ಮಿತಾ ಚಂದ್ರ (ಗಾಪ್ರೆ; 4ನಿ,41.01ಸೆ)-1, ಶಿರಿನ್ (ಬಸವನಗುಡಿ)-2, ಅದಿತಿ ಎನ್ ಮೂಲ್ಯ (ಬಸವನಗುಡಿ)-3

50 ಮೀ ಬ್ಯಾಕ್‌ಸ್ಟ್ರೋಕ್: ರಿಧಿಮಾ ವೀರೇಂದ್ರ ಕುಮಾರ್ (ಬಸವನಗುಡಿ; 30.48ಸೆ)-1, ನೀನಾ ವೆಂಕಟೇಶ್ (ಡಾಲ್ಫಿನ್ ಅಕ್ವೆಟಿಕ್ಸ್)-2, ಶಾಲಿನಿ ದೀಕ್ಷಿತ್ (ಡಾಲ್ಫಿನ್)-3

200 ಮೀ ಬಟರ್‌ಫ್ಲೈ: ತನಿಷಿ ಗುಪ್ತಾ (ಡಾಲ್ಫಿನ್; 2ನಿ,30.44ಸೆ)-1, ಎ.ಜೆಡಿಡಾ (ಡಿಕೆವಿ)-2, ತನಿಷಾ ವಿನಯ್ (ಬಸವನಗುಡಿ)-3

4X100 ಮೆಡ್ಲೆ: ಡಾಲ್ಫಿನ್ (ಸುವನಾ ಭಾಸ್ಕರ್, ಮಾನವಿ ವರ್ಮಾ, ನೀನಾ ವೆಂಕಟೇಶ್, ಎಸ್. ರುಜುಲಾ; 4ನಿ,33.78ಸೆ)-1, ಬಸವನಗುಡಿ ಎ (ರಿಧಿಮಾ ವೀರೇಂದ್ರಕುಮಾರ್, ಶಿರಿನ್, ಎಸ್. ಲಕ್ಷ್ಯ, ವಿನಿತಾ ನಯನಾ)-2, ಡಾಲ್ಫಿನ್ 2(ಶಾಲಿನಿ ದಿಕ್ಷಿತ್, ಎಸ್. ತಾನ್ಯಾ, ತನಿಷಿ ಗುಪ್ತಾ, ಹಷಿಕಾ ರಾಮಚಂದ್ರ)-3



ಬೆಂಗಳೂರಿನ ಪಡುಕೋಣೆ–ದ್ರಾವಿಡ್ ಕ್ರೀಡಾ ಉತ್ಕೃಷ್ಟತಾ ಕೇಂದ್ರದಲ್ಲಿ ಭಾನುವಾರ ಮುಕ್ತಾಯವಾದ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗಳಿಸಿದ ಈಜುಪಟುಗಳು ಹಾಗೂ ತರಬೇತುದಾರರು ಇದ್ದಾರೆ. ಅವರೊಂದಿಗೆ ಕರ್ನಾಟಕ ಈಜು ಸಂಸ್ಥೆ ಅಧ್ಯಕ್ಷ ಗೋಪಾಲ್ ಹೊಸೂರ, ಕಾರ್ಯದರ್ಶಿ ಸತೀಶ್ ಇದ್ದಾರೆ –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಡಾಲ್ಫಿನ್ ಅಕ್ವೆಟಿಕ್ಸ್ ತಂಡ ರನ್ನರ್ಸ್ ಅಪ್
- 400 ಅಂಕ, ಎರಡು ಕೂಟ ದಾಖಲೆ ಬರೆದ ಶಿವಾ
- ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 15 ದಾಖಲೆಗಳು ನಿರ್ಮಾಣ

ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್: ಕೊಡಗು ಟೈಗರ್ಸ್‌ಗೆ ನಿರಾಸೆ

ಬಂಡೀಪುರ ಜಯಭೇರಿ

ಬೆಂಗಳೂರು: ಬಂಡೀಪುರ ಟಸ್ಕರ್ಸ್ ತಂಡವು ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ಟೂರ್ನಿಯ ಜಿದ್ದಾಜಿದ್ದಿನ ಹಣಾಹಣಿಯಲ್ಲಿ ಕೊಡಗು ಟೈಗರ್ಸ್‌ಗೆ ಸೋಲುಣಿಸಿತು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ (ಕೆಬಿಎ) ಅಂಗಣದಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಭಾನುವಾರ ಬಂಡೀಪುರ ತಂಡಕ್ಕೆ 6-3ರಿಂದ ಜಯ ಒಲಿಯಿತು.

ಮಹಿಳಾ ಸಿಂಗಲ್ಸ್‌ನ ಮೊದಲ ಪಂದ್ಯದಲ್ಲಿ ಕೊಡಗು ಟೈಗರ್ಸ್ ತಂಡವು ರುಜುಲಾ ರಾಮು ಅವರನ್ನು ಕಣಕ್ಕಿಳಿಸಿತು. ಈ 'ಟ್ರಂಪ್' ಹಣಾಹಣಿಯಲ್ಲಿ ರುಜುಲಾ 9-15, 11-15ರಿಂದ ಅಲ್ಫಿಯಾ ರಿಯಾಜ್ ಅವರನ್ನು ಮಣಿಸಿದರು. ಆದರೆ ಪುರುಷರ ಡಬಲ್ಸ್ 'ಟ್ರಂಪ್' ಪಂದ್ಯದಲ್ಲಿ ಬಂಡೀಪುರ ತಂಡದ ಅಭಿಷೇಕ್ ಎಲಿಗಾರ- ವೈಭವ್ ವಿ. ಜೋಡಿ 15-13, 11-15, 15-8ರಿಂದ ಆದರ್ಶ್ ಕುಮಾರ್-ವಸಂತ್ ಕುಮಾರ್ ಅವರನ್ನು ಮಣಿಸಿ ಸಮಬಲ ಸಾಧಿಸಿತು.

ಈ ಹಂತದಲ್ಲಿ ಆಟ ಮತ್ತಷ್ಟು ರಂಗೇರಿತು. ಪುರುಷರ ಸಿಂಗಲ್ಸ್ ಪಂದ್ಯದಲ್ಲೂ ಅಭಿಷೇಕ್ 15-6, 15-7ರಿಂದ ವಿಶೇಷ್ ಶರ್ಮಾ ಅವರಿಗೆ ಸೋಲುಣಿಸಿ ತಮ್ಮ ತಂಡಕ್ಕೆ ಮುನ್ನಡೆ ಒದಗಿಸಿದರು. ಆದರೆ ಮಿಶ್ರ ಡಬಲ್ಸ್‌ನಲ್ಲಿ ಕೊಡಗು ತಂಡದ ಸನೀತ್ ದಯಾನಂದ್ ಮತ್ತು ರಮ್ಯಾ ವೆಂಕಟೇಶ್ ಜೋಡಿ 15-10, 15-12ರಿಂದ ಗೆದ್ದು ಮತ್ತೆ ಪಂದ್ಯ ಸಮಬಲವಾಗುವಂತೆ ಮಾಡಿದರು.

ಸೂಪರ್ ಪಂದ್ಯದಲ್ಲಿ ಬಂಡೀಪುರ ತಂಡದ ಡ್ಯಾನಿಯಲ್ ಫರೀದ್, ವೈಭವ್ ವಿ. ಮತ್ತು ಗಣೇಶ್ ವಿಠ್ಠಲ ಅವರು 21-16ರಿಂದ ಸನೀತ್ ದಯಾನಂದ್, ವಸಂತ್‌ಕುಮಾರ್ ಮತ್ತು ಆದರ್ಶ್ ಕುಮಾರ್ ಅವರನ್ನು ಮಣಿಸಿದರು.

ಮತ್ತೊಂದು ಪಂದ್ಯದಲ್ಲಿ ಮಂಗಳೂರು ಶಾರ್ಕ್ಸ್ 6-3ರಿಂದ ಮಂಡ್ಯ ಬುಲ್ಸ್ ಎದುರು ಗೆದ್ದಿತು.



ಬಂಡೀಪುರ ಟಸ್ಕರ್ಸ್ ತಂಡದ ವೈಭವ್ ವಿ. ಮತ್ತು ಅಭಿಷೇಕ್ ಎಲಿಗಾರ ಆಟದ ಶೈಲಿ– ಪ್ರಜಾವಾಣಿ ಚಿತ್ರ /ಎಸ್‌.ಕೆ.ದಿನೇಶ್

ಶರತ್ ಮಿಂಚು: ಶಿವಮೊಗ್ಗಕ್ಕೆ ಜಯ

ಮಹಾರಾಜ ಟ್ರೋಫಿ: ಮೈಸೂರು ತಂಡಕ್ಕೆ ನಿರಾಸೆ

• ಮೋಹನ್ ಕುಮಾರ ಸಿ.

ಮೈಸೂರು: ಸುಂದರ ಅರ್ಧಶತಕ ಗಳಿಸಿದ ಬಿ.ಆರ್.ಶರತ್ ಬ್ಯಾಟಿಂಗ್ ಬಲದಿಂದ ಶಿವಮೊಗ್ಗ ಸ್ಟ್ರೈಕರ್ಸ್ ಇಲ್ಲಿ ನಡೆಯುತ್ತಿರುವ ಮಹಾರಾಜ ಕ್ರಿಕೆಟ್ ಟ್ರೋಫಿ ಕೆಎಸ್‌ಸಿಎ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಚೊಚ್ಚಲ ಜಯ ಸಾಧಿಸಿತು.

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಶಿವಮೊಗ್ಗ ತಂಡವು ಮೈಸೂರು ವಾರಿಯರ್ಸ್ ತಂಡವನ್ನು 13 ರನ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಮೈಸೂರು ತಂಡದ ನಾಯಕ ಕರುಣ್ ನಾಯರ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಶಿವಮೊಗ್ಗದ ಆರಂಭಿಕ ಜೋಡಿ ರೋಹನ್ ಕದಂ (18), ಬಿ.ಆರ್.ಶರತ್ (53; 35ಎ, 4x6, 6x2) ಮೊದಲ ವಿಕೆಟ್‌ಗೆ 56 ರನ್ ಸೇರಿಸಿದರು. ಜೋಡಿಯನ್ನು ಶುಭಾಂಗ್ ಹೆಗ್ಡೆ ಬೇರ್ಪಡಿಸಿದರು.

ನಂತರ ಬಂದ ಸಿದ್ಧಾರ್ಥ್ (36), ಅವಿನಾಶ್ (25) ತಂಡದ ಮೊತ್ತವನ್ನು 150ರ ಗಡಿ ದಾಟಿಸಿದರು. ಶಿವಮೊಗ್ಗ 20 ಓವರ್‌ಗಳಲ್ಲಿ 8ಕ್ಕೆ 174 ರನ್‌ಗಳ ಸವಾಲಿನ ಮೊತ್ತ ಕಲೆ ಹಾಕಿತು.

ಪವನ್ ಏಕಾಂಗಿ ಹೋರಾಟ: ಗುರಿ ಬೆನ್ನಟ್ಟಿದ ವಾರಿಯರ್ಸ್ ಮೊದಲ ಎಸೆತದಲ್ಲಿಯೇ ಕರುಣ್ ನಾಯರ್ ವಿಕೆಟ್ ಕಳೆದುಕೊಂಡು ಆಘಾತ ಅನುಭವಿಸಿತು. ವಿಕೆಟ್ ಬೀಳುತ್ತಿದ್ದರೂ ಪವನ್ ದೇಶಪಾಂಡೆ (64; 41ಎ, 4x6, 6x2) 'ಗೋಡೆ'ಯಾಗಿ ನಿಂತರು. ಕೆಳ ಕ್ರಮಾಂಕದಲ್ಲಿ ಶುಭಾಂಗ್ ಹೆಗ್ಡೆ (13), ಶಿವರಾಜ್ (19), ಲೋಚನ್ ಅಪ್ಪಣ್ಣ (27) ಹೊರತುಪಡಿಸಿ ಉಳಿದವರಿಂದ ಬೆಂಬಲ ದೊರೆಯಲಿಲ್ಲ.

ಕೊನೆಯ ಹಂತದ ಓವರ್‌ಗಳಲ್ಲಿ ಅಪ್ಪಣ್ಣ ಅಬ್ಬರಿಸಿದರೂ 'ಮೈಸೂರು ವಾರಿಯರ್ಸ್' ಗೆಲುವಿನ ದಡ ತಲುಪಲಿಲ್ಲ. ಸತತ 5 ಪಂದ್ಯ ಸೋತು ಟೀಕೆಗಳಿಗೆ ಗುರಿಯಾಗಿದ್ದ ಶಿವಮೊಗ್ಗ ನಾಯಕ ಕೆ.ಗೌತಮ್ ಬೌಲಿಂಗ್‌ನಲ್ಲಿ ನಡೆಸಿದ ಪ್ರಯೋಗಗಳು 'ವಾರಿಯರ್ಸ್'ಗೆ ಸೋಲಿನ ಕಹಿಯುಣಿಸಿದವು.

ಮಂಗಳೂರಿಗೆ ಜಯ: ಅರ್ಧಶತಕ ಗಳಿಸಿದ ಅಭಿನವ್ ಮನೋಹರ್ (ಅಜೇಯ 55; 25ಎ, 4x5, 6x3) ಬ್ಯಾಟಿಂಗ್ ಬಲದಿಂದ 'ಮಂಗಳೂರು ಯುನೈಟೆಡ್' ರೋಚಕ ಜಯ ಸಾಧಿಸಿತು. ಭಾನುವಾರ ನಡೆದ ಪಂದ್ಯದಲ್ಲಿ ಮಂಗಳೂರು ತಂಡವು 'ಗುಲ್ಬರ್ಗಾ ಮಿಸ್ಟಿಕ್ಸ್' ಅನ್ನು 3 ವಿಕೆಟ್‌ಗಳಿಂದ ಮಣಿಸಿತು.

ಸಂಕ್ಷಿಪ್ತ ಸ್ಕೋರು: ಶಿವಮೊಗ್ಗ ಸ್ಟ್ರೈಕರ್ಸ್ 20 ಓವರ್‌ಗಳಲ್ಲಿ 8ಕ್ಕೆ 174 (ಬಿ.ಆರ್. ಶರತ್ 53, ಸಿದ್ಧಾರ್ಥ್ 36. ವಿದ್ಯಾಧರ್ ಪಾಟೀಲ 39ಕ್ಕೆ 3) ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 8ಕ್ಕೆ 161 (ಪವನ್ ದೇಶಪಾಂಡೆ 64, ಲೋಚನ್ ಅಪ್ಪಣ್ಣ 27. ಕೆ.ಗೌತಮ್ 22ಕ್ಕೆ 2). ಫಲಿತಾಂಶ: ಶಿವಮೊಗ್ಗ ಸ್ಟ್ರೈಕರ್ಸ್‌ಗೆ 13 ರನ್‌ಗಳ ಗೆಲುವು.

ಇಂದಿನ ಪಂದ್ಯಗಳು: ಮಂಗಳೂರು ಯುನೈಟೆಡ್- ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 3ರಿಂದ), ಗುಲ್ಬರ್ಗಾ ಮಿಸ್ಟಿಕ್ಸ್- ಹುಬ್ಬಳ್ಳಿ ಟೈಗರ್ಸ್ (ರಾತ್ರಿ 7ರಿಂದ)

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಬಿ.ಆರ್‌.ಶರತ್ ಬ್ಯಾಟಿಂಗ್ ವೈಖರಿ –ಪ್ರಜಾವಾಣಿ ಚಿತ್ರ/ ಅನೂಪ್ ರಾಘ ಟಿ.

ನಾಮಪತ್ರ ತಿರಸ್ಕಾರ

ನವದೆಹಲಿ(ಪಿಟಿಐ): ಭಾರತ ಫುಟ್‌ಬಾಲ್ ಕ್ಷೇತ್ರದ ಅನುಭವಿ ಆಡಳಿತಗಾರರಾದ ಸುಬ್ರತಾ ದತ್ತಾ ಹಾಗೂ ಲಾರ್ಸಿಂಗ್ ಮಿಂಗ್ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಚುನಾವಣೆಗೆ ಸ್ಪರ್ಧಿಸಲು ಸಲ್ಲಿಸಿದ ನಾಮಪತ್ರ ಗಳನ್ನು ಚುನಾವಣಾಧಿಕಾರಿ ತಿರಸ್ಕರಿಸಿದ್ದಾರೆ.

'ಇಂಡಿಯನ್ ಫುಟ್‌ಬಾಲ್ ಅಸೋಷಿಯೇಷನ್ ಹಾಗೂ ಮೇಘಾಲಯ ಫುಟ್‌ಬಾಲ್ ಸಂಸ್ಥೆಯಿಂದ ಅವರ ನಾಮ-ಪತ್ರಗಳನ್ನು ತಿರಸ್ಕರಿಸಲಾಗಿದೆ. ಅಗತ್ಯ ಅರ್ಹತಾ ಮಾನದಂಡಗಳನ್ನು ಅವರು ಪೂರೈಸಿಲ್ಲ' ಎಂದು ಎಐಎಫ್‌ಎಫ್ ಮೂಲಗಳು ತಿಳಿಸಿವೆ.

ನಿಧನವಾರ್ತೆ

ವಿ.ಡಿ.ಪಾಟೀಲ



ವಿ.ಡಿ.ಪಾಟೀಲ

ಧಾರವಾಡ: ಅಟ್ಯಾ ಪಾಟ್ಯಾ ಕ್ರೀಡೆಯ ಏಷ್ಯಾ ಮತ್ತು ರಾಷ್ಟ್ರೀಯ ಫೆಡರೇಷನ್ ಅಧ್ಯಕ್ಷ ವಿ.ಡಿ. ಪಾಟೀಲ (57) ಭಾನುವಾರ ನಿಧನರಾದರು.


ಯೂನಿವರ್ಸಿಟಿ ಪಬ್ಲಿಕ್ ಶಾಲೆಯಲ್ಲಿ ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

1988ರಲ್ಲಿ ರಷ್ಯಾದಲ್ಲಿ ನಡೆದ ಕ್ರೀ-ಡಾಕೂಟದಲ್ಲಿ ಭಾರತದ ಅಟ್ಯಾ ಪಾಟ್ಯಾ ತಂಡವನ್ನು ಪ್ರತಿನಿಧಿಸಿದ್ದ ಅವರು, ತಂಡದ ಉಪ ನಾಯಕರಾಗಿದ್ದರು. ನಂತರ ತರಬೇತುದಾರರಾಗಿ ಸಾಕಷ್ಟು ಯುವ ಪ್ರತಿಭಾವಂತ ಆಟಗಾರರನ್ನು ಸಜ್ಜುಗೊಳಿಸಿದ್ದರು.

ಅಂತ್ಯಕ್ರಿಯೆ ರಾಣೆಬೆನ್ನೂರು ತಾಲ್ಲೂಕಿನ ಯರೇಕುಪ್ಪಿಯಲ್ಲಿ ಸೋಮವಾರ ಮಧ್ಯಾಹ್ನ 2ಕ್ಕೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಮರ್ಥ್ಯ ಸುಧಾರಿಸುವ ವಿಶ್ವಾಸ: ಸುನಿಲ್ ಚೆಟ್ರಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮುಂಬರುವ ಡುರಾಂಡ್ ಕಪ್ ಟೂರ್ನಿಯಲ್ಲಿ ಉತ್ತಮ ಸಾಮರ್ಥ್ಯ ತೋರುವ ವಿಶ್ವಾಸವಿದೆ ಎಂದು ಬೆಂಗ ಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ನಾಯಕ ಸುನಿಲ್ ಚೆಟ್ರಿ ಹೇಳಿದ್ದಾರೆ.

ಬಿಎಫ್‌ಸಿಯಿಂದ ಭಾನುವಾರ ನಗರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಅವರು ಸುನಿಲ್ ಚೆಟ್ರಿ ಮಾತನಾಡಿದರು.

'ಕಳೆದ ವರ್ಷ ನಮ್ಮ ಆಟಗಾರರು ಉತ್ತಮವಾಗಿ ಆಡಿದ್ದರು. ಈ ಬಾರಿ ಮತ್ತಷ್ಟು ಸುಧಾರಿಸಿಕೊಳ್ಳುತ್ತೇವೆ' ಎಂದು ಚೆಟ್ರಿ ನುಡಿದರು.

ಡುರಾಂಡ್ ಕಪ್ ಟೂರ್ನಿಯು ಮಂಗಳವಾರ ಕೋಲ್ಕತ್ತದಲ್ಲಿ ಆರಂಭವಾಗಲಿದೆ. ಇದೇ 17ರಂದು ಬಿಎಫ್‌ಸಿ ತನ್ನ ಮೊದಲ ಪಂದ್ಯದಲ್ಲಿ ಜಮ್ಶೆಡ್‌ಪುರ ತಂಡವನ್ನು ಎದುರಿ ಸಲಿದೆ.

ಕೃಷ್ಣ ಬಲ: ಇಂಡಿಯನ್ ಸೂಪರ್ ಲೀಗ್‌ನ(ಐಎಸ್‌ಎಲ್) ಕಳೆದ ಮೂರು ಆವೃತ್ತಿಗಳಲ್ಲಿ ಪ್ರಶಸ್ತಿ ಬರ ಎದುರಿಸಿರುವ ಬಿಎಫ್‌ಸಿ ಈ ವರ್ಷ ರಾಯ್‌ಕೃಷ್ಣ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ. ಫಿಜಿ ರಾಷ್ಟ್ರೀಯ ತಂಡದ ಕೃಷ್ಣ ಈ ಹಿಂದೆ ಎಟಿಕೆ ಮೋಹನ್ ಬಾಗನ್ (ಎಟಿಕೆಎಂಬಿ) ತಂಡದಲ್ಲಿದ್ದರು. ಜೆವಿ ಹೆರ್ನಾಂಡೀಸ್, ಪ್ರಬೀರ್ ದಾಸ್ ಮತ್ತು ಸಂದೇಶ್ ಜಿಂಗಾನ್ ಕೂಡ ಬಿಎಫ್‌ಸಿಗೆ ಸೇರಿದ್ದು ಬಲ ಹೆಚ್ಚಿದೆ.

ಸುದ್ದಿಗೋಷ್ಠಿಯಲ್ಲಿ ರಾಯ್‌ಕೃಷ್ಣ, ತಂಡದ ಸಿಇಒ ಮಂದಾರ್ ತಮ್ಹಾನೆ ಇದ್ದರು. ಇದಕ್ಕೂ ಮೊದಲು ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ಬಿಎಫ್‌ಸಿ ಆಟಗಾರರು ತಾಲೀಮು ನಡೆಸಿದರು.

ಟೇಬಲ್ ಟೆನಿಸ್: ಆಕಾಶ್, ಅನರ್ಘ್ಯಾಗೆ ಪ್ರಶಸ್ತಿ

ಬೆಂಗಳೂರು/ಬಳ್ಳಾರಿ: ಕೆ.ಜೆ. ಆಕಾಶ್ ಮತ್ತು ಅನರ್ಘ್ಯಾ ಮಂಜುನಾಥ್ ಅವರು ಬಳ್ಳಾರಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಿದ್ದ ರಾಜ್ಯ ರ‍್ಯಾಂಕಿಂಗ್ ಟಿಟಿಯಲ್ಲಿ ಪ್ರಶಸ್ತಿ ಜಯಿಸಿದರು.

19 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಆಕಾಶ್ 2–11, 11–8, 12–10, 6–11, 11–2, 11–5ರಿಂದ ಪಿ.ವಿ. ಶ್ರೀಕಾಂತ್ ಕಶ್ಯಪ್ ಎದುರು ಜಯಿಸಿದರು. ಬಾಲಕಿಯರ ವಿಭಾಗದಲ್ಲಿ



ಅನರ್ಘ್ಯಾ ಮಂಜುನಾಥ್

ಅನರ್ಘ್ಯಾ 11–13, 13–11, 5–11, 4–11, 12–10, 11–8, 12–10ರಿಂದ ದೇಷ್ನಾ ಎಂ ವಂಶಿಕಾ ವಿರುದ್ಧ ಗೆದ್ದರು.

17 ವರ್ಷದೊಳಗಿನವರ ಬಾಲಕರ ಸಿಂಗಲ್ಸ್‌ನಲ್ಲಿ ರೋಹಿತ್ ಶಂಕರ್ 11–7, 11–7, 11–6, 11–6 ರಿಂದ ಬಿ.ಆರ್. ಗೌರವ ವಿರುದ್ಧ ಗೆಲುವು ಸಾಧಿಸಿದರು.

15 ವರ್ಷದೊಳಗಿನವರ ವಿಭಾಗದಲ್ಲಿ ಎಸ್‌ಬಿಟಿಟಿಎದ ಕೆ. ಆಯುಷ್ 11–9, 12–10, 2–11, 11–13, 11–6, 11–6ರಿಂದ ಬಿ.ಆರ್. ಗೌರವ್ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದ 17 ವರ್ಷದೊಳಗಿನವರ ಫೈನಲ್‌ನಲ್ಲಿ ದೇಷ್ನಾ ಎಂ ವಂಶಿಕಾ 8–11, 12–10, 11–7, 11–6, 16–14ರಿಂದ ಸಹನಾ ಎಚ್ ಮೂರ್ತಿ ವಿರುದ್ಧ ಗೆದ್ದರು.

15 ವರ್ಷದೊಳಗಿನವರ ಫೈನಲ್‌ನಲ್ಲಿ ಚೆಕ್‌ಮೆಟ್ ಕ್ಲಬ್‌ನ ನೀತಿ ಅಗರವಾಲ್ 11–9, 11–7, 11–8, 11–8ರಿಂದ ಬಿಟಿಟಿಎದ ಸಾನ್ವಿ ವಿಶಾಲ್ ಮಾಂಡೆಕರ್ ಅವರನ್ನು ಸೋಲಿಸಿದರು.

ಚೆಸ್: ಅನ್ವಿತ್, ಆದಿತ್ಯಗೆ ಪ್ರಶಸ್ತಿ

ಬೆಂಗಳೂರು: ಅನ್ವಿತ್ ಪಿ. ಭಟ್ ಹಾಗೂ ಆದಿತ್ಯ ಟ್ರೆಹಾನ್ ಅವರು ಚಾಂಪಿಯನ್ಸ್ ಚೆಸ್ ಅಕಾಡೆಮಿ ಆಯೋಜಿಸಿದ್ದ ಇಂಡಿಪೆಂಡೆನ್ಸ್ ಚಾಲೆಂಜ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಭಾನುವಾರ ನಡೆದ ಟೂರ್ನಿಯ 10 ವರ್ಷದೊಳಗಿನವರ ವಿಭಾಗದ ಐದು ಸುತ್ತುಗಳಲ್ಲಿ ಐದು ಪಾಯಿಂಟ್ಸ್ ಕಲೆಹಾಕಿದ ಅನ್ವಿತ್ ಅಗ್ರಸ್ಥಾನ ಗಳಿಸಿದರು. ಅವನಿ (4 ಪಾಯಿಂಟ್ಸ್) ಹಾಗೂ ಆರ್ಯನ್ ಯತೀಶ್ (4) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

16 ವರ್ಷದೊಳಗಿನವರ ವಿಭಾಗದಲ್ಲಿ ಆದಿತ್ಯ ಚಾಂಪಿಯನ್ ಆದರು. ಆದಿತ್ಯ ಎಲ್ಲ ಐದು ಪಾಯಿಂಟ್ಸ್ ಗಳಿಸಿದರು. ತರುಣ್ ಪಿ.ಎಂ. (4) ಮತ್ತು ಶ್ರೀವರ್ಧನ್ (3) ಎರಡು ಮತ್ತು ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಕ್ವಾರ್ಟರ್‌ಫೈನಲ್‌ಗೆ ಅನಾಹತ್ ಸಿಂಗ್

ನ್ಯಾನ್ಸಿ, ಫ್ರಾನ್ಸ್ (ಪಿಟಿಐ): ಭಾರತದ ಭರವಸೆಯ ಆಟಗಾರ್ತಿ ಅನಾಹತ್ ಸಿಂಗ್ ಅವರು ವಿಶ್ವ ಜೂನಿಯರ್ ಸ್ಕ್ವಾಷ್ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶನಿವಾರ ಮಹಿಳಾ ಸಿಂಗಲ್ಸ್ ವಿಭಾಗದ ನಾಲ್ಕನೇ ಸುತ್ತಿನ ಪಂದ್ಯದಲ್ಲಿ ಅವರು 3–1ರಿಂದ ಇಂಗ್ಲೆಂಡ್‌ನ ಟೋರಿ ಮಲಿಕ್ ಎದುರು ಗೆದ್ದರು.

ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಆಡಿದ್ದ ಅನಾಹತ್, 11-5, 11-5, 6-1, 11-7ರಿಂದ ಇಂಗ್ಲೆಂಡ್ ಆಟಗಾರ್ತಿಗೆ ಸೋಲುಣಿಸಿದರು.

ಎಂಟರಘಟ್ಟದ ಪಂದ್ಯದಲ್ಲಿ ಅನಾಹತ್ ಅವರು ಈಜಿಪ್ಟ್‌ನ ಫಯರೌಜ್ ಅಬೋಲ್ಕಿಯರ್ ವಿರುದ್ಧ ಆಡುವರು.

‘ಇಂಥಹ ಆಟ ನಿರೀಕ್ಷಿಸಿರಲಿಲ್ಲ. ಒತ್ತಡಕ್ಕೆ ಒಳಗಾಗಲಿಲ್ಲವಾದ್ದರಿಂದ ಗೆಲುವು ಸಾಧ್ಯವಾಯಿತು’ ಎಂದು ಪಂದ್ಯದ ಬಳಿಕ ಅನಾಹತ್ ನುಡಿದರು.